ಮಾನವಿಕ ಕರ್ಣಾಟಕ

ಸಂಪುಟ ೧೦ ಸಂಚಿಕೆ ೪

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೦

ಲೇಖಕರಿಗೆ ಸೂಚನೆಗಳು

೧ ಮಾನವಿಕ ಶಾಸ್ತ್ರ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು ; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅವನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು ; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನಗಳನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆ ಮಾಡುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–೫೭೦೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನ್ಯರೆ,

ಈ ಸಂಚಿಕೆಯೊಂದಿಗೆ ಮಾನವಿಕ ಕರ್ಣಾಟಕದ 10ನೆಯ ಸಂಪುಟ ಮುಗಿಯುತ್ತದೆ. 11ನೆಯ ಸಂಪುಟಕ್ಕೆ ತಮ್ಮ ಚಂದಾಹಣವನ್ನು ದಯವಿಟ್ಟು ತಕ್ಷಣವೇ ಕಳಿಸಿಕೊಡಿರಿ. ಹಾಗೆ ಕಳುಹಿಸುವಾಗ ಈ ಹಾಳೆಯ ಮುಗ್ಗಲಿಗಿರುವ ಹಾಳೆಯಲ್ಲಿ ವಿವರಗಳನ್ನು ತುಂಬಿ ಕಳುಹಿಸಿಕೊಡಿರಿ.

ಇಂತೀ ನಮಸ್ಕಾರಗಳು

ಕೆ. ಟಿ. ವೀರಪ್ಪ

ನಿರ್ದೇಶಕರು

ಮಾನ್ಯರೆ,

ದಯವಿಟ್ಟು ನನ್ನನ್ನು/ ಈ ಸಂಸ್ಥೆಯನ್ನು 'ಮಾನವಿಕ ಕರ್ಣಾಟಕದ' ಹನ್ನೊಂದನೆ ಸಂಪುಟಕ್ಕೆ ಚಂದಾದಾರನನ್ನಾಗಿ ದಾಖಲು ಮಾಡಿಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ. ವಾರ್ಷಿಕ ಚಂದಾಹಣ ನಾಲ್ಕು/ಆರು/ಎಂಟು ರೂಪಾಯಿಗಳನ್ನು ಮನಿಯಾರ್ಡರ್/ಚೆಕ್/ಡ್ರಾಫ್ಟ್ ಮೂಲಕ ಇಂದು ಕಳುಹಿಸಿದ್ದೇನೆ. ವಿವರಗಳನ್ನು ಕೆಳಗೆ ನಮೂದಿಸಿದ್ದೇನೆ.

ಇಂತೀ

(ರುಜು)

1. ಹೆಸರು —

[ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ]

2. ವಿಳಾಸ —

[ವಿದ್ಯಾರ್ಥಿಯಾಗಿದ್ದರೆ ಶಾಲೆ ಅಥವಾ ಕಾಲೇಜಿನ ಹಾಗೂ ಮನೆಯ ವಿಳಾಸಗಳೆರಡನ್ನೂ ನಮೂದಿಸಿರಿ]

3. ಶಿಫಾರಸು —

[ವಿದ್ಯಾರ್ಥಿಗಳು ತಮ್ಮ ಶಾಲಾ ಕಾಲೇಜುಗಳ ಮುಖ್ಯಸ್ಥರಿಂದ ತಾವು ಅಲ್ಲಿ ವ್ಯಾಸಂಗ ಮಾಡುತ್ತಿರುವ ಬಗೆಗೆ ಇಲ್ಲಿ ಶಿಫಾರಸು ಬರೆಸಬೇಕು]

4. ಪತ್ರಿಕೆಯನ್ನು ರಿಜಿಸ್ಟ್ರೇಷನ್ ಮೂಲಕ ಕಳುಹಿಸಬೇಕೆ? —

5. ಕಳೆದ ವರ್ಷ ನನ್ನ ಚಂದಾ ಸಂಖ್ಯೆ —

'ಮಾನವಿಕ ಕರ್ಣಾಟಕ'ದಲ್ಲಿ ಆಸಕ್ತಿ ತೋರಿಸಬಹುದಾದ ನನ್ನ ಕೆಲವು ಮಿತ್ರರ ವಿಳಾಸಗಳು :

1.

[ತಿರುಗಿಸಿ

2.

3.

4.

5.

ಮಾನವಿಕ ಕರ್ನಾಟಕದ ಚಂದಾ ವಿವರ :

ಆಜೀವ ಸದಸ್ಯತ್ವ	:	ರೂ. 100–00
ಪ್ರತಿ ಸಂಪುಟಕ್ಕೆ ವಿದ್ಯಾರ್ಥಿಗಳಿಗೆ	:	ರೂ. 4–00
ಇತರರಿಗೆ	:	ರೂ. 6–00
ಸಂಸ್ಥೆಗಳಿಗೆ	:	ರೂ. 8–00

ವಿಳಾಸ :

ಡೈರೆಕ್ಟರ್, ಪ್ರಸಾರಾಂಗ
ಮೈಸೂರು–570012

ಮಾನವಿಕ ಕರ್ಣಾಟಕ

ಸಂಪುಟ ೧೦ ಸಂಚಿಕೆ ೪

೪೦

ಆಗಸ್ಟ್ ಸಂಚಿಕೆ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೮೦

MANAVIKA KARNATAKA, Kannada quarterly of the University of Mysore. Volume 10, Number 4, August 1980. Edited by Dr. B. R. Gopal and Dr. C. M. Muniramappa.

All Rights Reserved

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಡಾ. ಬಾ. ರಾ. ಗೋಪಾಲ್

ಡಾ. ಸಿ. ಎಂ. ಮುನಿರಾಮಪ್ಪ

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಮುದ್ರಕರು

ಎಚ್. ನರಸಣ್ಣ

ನಿರ್ದೇಶಕರು, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ

ಮೈಸೂರು ೫೭೦೦೦೬

ವಿಷಯ ಸೂಚಿ

ಈ ಸಂಚಿಕೆಯ ಲೇಖಕರು

೧.	ಟಿ. ವಿ. ವೆಂಕಟಾಚಲ ಶಾಸ್ತ್ರೀ	ರೀಡರ್, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು–೫೭೦೦೦೬
೨.	ವಿ. ಎನ್. ಶೇಷಗಿರಿರಾವ್	ಅಧ್ಯಾಪಕರು, ತತ್ತ್ವಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೫೭೦೦೦೬
೩.	ಸ್ವಾಮಿ ಹರ್ಷಾನಂದ	ರಾಮಕೃಷ್ಣಮಿಷನ್ ಆಧ್ಯಾತ್ಮಿಕ ಮತ್ತು ನೈತಿಕ ಕೇಂದ್ರ, ಯಾದವಗಿರಿ, ಮೈಸೂರು–೫೭೦೦೦೨
೪.	ಬಿ. ಕೃಷ್ಣ	ತತ್ತ್ವಶಾಸ್ತ್ರದ ಅಧ್ಯಾಪಕರು, ಮಹಾರಾಜ ಕಾಲೇಜು ಮೈಸೂರು–೫೭೦೦೦೫
೫.	ಟಿ. ಆರ್. ನಾಗಪ್ಪ	೨೯೦೪, ಚಾಮುಂಡಿಪುರಂ, ಮೈಸೂರು–೫೭೦೦೦೪
೬.	ಡಿ. ಎಸ್. ಜಯಪ್ಪಗೌಡ	ಸಹಾಯಕ ಭಾಷಾಂತರಕಾರರು, ಪಠ್ಯಪುಸ್ತಕ ಮತ್ತು ಭಾಷಾಂತರ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–೫೭೦೦೦೬
೭.	ಬಾ. ರಾ. ಗೋಪಾಲ್	ರೀಡರ್, ದಕ್ಷಿಣಭಾರತೀಯ ಅಧ್ಯಯನ ಹಾಗೂ ಶಾಸನತಜ್ಞ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು

ಟಿ. ವಿ. ವೆಂಕಟಾಚಲ ಶಾಸ್ತ್ರೀ

ಭಾರತೀಯ ಜನಜೀವನ

(ಕ್ರಿ.ಶ. ೧೦ ನೆಯ ಶತಮಾನದವರೆಗೆ)

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

ಅಶೋಕನ ಕಾಲಾನಂತರದ ಉತ್ತರ ಭಾರತ :

ಅಶೋಕನ ಅನಂತರದ ಕಾಲದ ಅರಸರ ವಿಚಾರವು ಅಷ್ಟಾಗಿ ನಮಗೆ ತಿಳಿದುಬಂದಿಲ್ಲ. ಆತನ ಉತ್ತರಾಧಿಕಾರಿಗಳು ಮತ್ತು ಪುತ್ರರ ವಿಚಾರವಾಗಿ ಸಂಹಿತೆಗಳಲ್ಲಿ, ಪುರಾಣಗಳಲ್ಲಿ, ಕಾವ್ಯ ಮತ್ತು ಶಾಸನಗಳಲ್ಲಿ ಉಲ್ಲೇಖಗಳಿವೆ. ಅಶೋಕನಿಗಿದ್ದ ಉತ್ಕಟವೂ ಉದಾರವೂ ಆದ ಧರ್ಮದೃಷ್ಟಿ ಅವರಾರಿಗೂ ಇದ್ದಂತೆ ತೋರುವುದಿಲ್ಲ. ಸುಮಾರು ೫೦ ವರ್ಷಗಳ ಕಾಲದಲ್ಲಿಯೇ ಅಶೋಕಮೌರ್ಯನ ಕಾಲದ ಅಖಂಡ ಭಾರತವು ಕಾಣದಾಗಿ ಮೌರ್ಯಸಾಮ್ರಾಜ್ಯವು ಅಳಿದುಹೋಯಿತು. ಆದರೆ ಅಶೋಕನು ಶ್ರಮವಹಿಸಿ ಕೈಕೊಂಡ ಧರ್ಮಪ್ರಸಾರಕಾರ್ಯವು ತನ್ನ ಪ್ರಭಾವವನ್ನು ಕಳೆದುಕೊಳ್ಳದೆ ಭಾರತೀಯ ಇತಿಹಾಸದಲ್ಲಿ ಶಾಶ್ವತವಾದ ಪರಿಣಾಮವನ್ನುಂಟುಮಾಡಿತು.

ಶುಂಗ ಅಥವಾ ಶುಂಗಭೃತ್ಯರ ಮನೆತನವು (ಕ್ರಿ.ಪೂ.ಸು.೧೮೭–೭೫) ಮೌರ್ಯ ಚಕ್ರವರ್ತಿ ಬೃಹದ್ರಥನೆಂಬವನನ್ನು ಕೊಂದು ಪಟ್ಟವೇರಿದ ಆತನ ಸೇನಾನಿ ಪುಷ್ಯಮಿತ್ರನೆಂಬವನಿಂದ (ಕ್ರಿ. ಪೂ. ಸು. ೧೮೭–೫೧) ಮೊದಲಾಗುತ್ತದೆ. ಇವರು ಉಜ್ಜೈನಿ-ಅವಂತಿಗಳ ಒಡೆಯರಾಗಿ ಸು. ೬೦ ವರ್ಷಕಾಲ (ಕ್ರಿ. ಪೂ. ೨೦೪–೧೦೪) ರಾಜ್ಯವಾಳಿದರೆಂದು ಕೆಲವರು ಚರಿತ್ರಕಾರರು ತಿಳಿಸಿದ್ದಾರೆ. ಇವರು ಭಾರದ್ವಾಜ ಗೋತ್ರದ ಬ್ರಾಹ್ಮಣರು. ಮೊದಲ ದೊರೆ ಪುಷ್ಯಮಿತ್ರನ ಸಮಕಾಲೀನನು ವೈಯಾಕರಣನಾದ ಮಹಾಭಾಷ್ಯಕರ್ತೃ ಪತಂಜಲಿ. ಕಳಿಂಗದ ಖಾರವೇಲ, ಆಂಧ್ರಮನೆತನದ ಶ್ರೀಮುಖ, ಯವನ ನಾಯಕ ಮಿನಾಂಡರ್ ಮೊದಲಾದವರು ಕೂಡ ಈತನ ಸಮಕಾಲೀನರು. ಪುಷ್ಯಮಿತ್ರನು ಎರಡು ಅಶ್ವಮೇಧ ಯಾಗಗಳನ್ನು ಗ್ರೀಕ್ ವಿಜಯದ ನೆನಪಾಗಿ ಆಚರಿಸಿದಂತೆ ತಿಳಿಯುತ್ತದೆ. ಈತನ ಪುತ್ರ ಅಗ್ನಿಮಿತ್ರನು ಕಾಳಿದಾಸನ ಮಾಲವಿಕಾಗ್ನಿಮಿತ್ರ ನಾಟಕದ ನಾಯಕನೆಂಬುದನ್ನು ನೆನೆಯಬಹುದು. ಶುಂಗರ ಕಾಲದಲ್ಲಿ ಬ್ರಾಹ್ಮಣಧರ್ಮದ ಪುನರುಜ್ಜೀವನವಾದರೂ ಅದು ಬೌದ್ಧಮತಕ್ಕೆ ವಿರೋಧಿಯಾಗಲಿಲ್ಲ. ಆದರೆ ಜೈನಮತದ ವಿಷಯದಲ್ಲಿ ಅವರು ಕಟುವಾಗಿದ್ದರೆಂದು ತೋರುತ್ತದೆ. ಸಾಂಚಿಯ ಮತ್ತು ಬಾರ್ಹುತ್‌ನ ಸ್ತೂಪಗಳಿಗೆ ದೊರೆತ ಖಾಸಗಿ ಮತ್ತು ರಾಜಮನೆತನದ ಸಹಾಯಗಳಿಂದ ಇದನ್ನು ತಿಳಿಯಬಹುದು. ಸುಶಿಕ್ಷಿತ ಗ್ರೀಕರೂ ಭಾಗವತಧರ್ಮದ ಮಹತ್ವಕ್ಕೆ ಒಳಗಾದರು. ಕಲೆ ಸಾಹಿತ್ಯಗಳು ಏಳಿಗೆಹೊಂದಿದವು.

ಕಣ್ವ ಅಥವಾ ಕಾಣ್ವಾಯನರು ಕೂಡ (ಕ್ರಿ. ಪೂ. ಸು. ೭೫–೩೦) ವೇದಕಾಲದ ಪೌರೋಹಿತ್ಯ ಮನೆತನಕ್ಕೆ ಸೇರಿದವರಾಗಿ ತೋರುವ ಬ್ರಾಹ್ಮಣ ಮನೆತನದವರು. ಶುಂಗದೊರೆಯಲ್ಲಿ ಮಂತ್ರಿಯಾಗಿದ್ದು ದೊರೆಯನ್ನು ಕೊಲ್ಲಿಸಿ ಪಟ್ಟವೇರಿದ ಕಣ್ವಗೋತ್ರದ ವಾಸುದೇವನೆಂಬವನಿಂದ ಈ ಮನೆತನ ಆರಂಭವಾಯಿತು. ಆಂಧ್ರಭೃತ್ಯರಿಂದ ಇವರ ಮನೆತನ ಕೊನೆಗೊಂಡಿತು. ಶುಂಗರು ಮತ್ತು ಕಣ್ವರ ಅಧಿಕಾರ ಆಂಧ್ರರ ಕೈಸೇರಿತು.

ವಿದೇಶೀಯರ ನೆಲಸೆಗಳು : ಯವನರು :–ಅಲೆಕ್ಸಾಂಡರಿನ ಆಕ್ರಮಣವಾದಮೇಲೆ, ಉತ್ತರ ಭಾರತದಲ್ಲಿ ಗ್ರೀಕ್ ನೆಲಸೆ ಅಲ್ಲಿ ಇಲ್ಲಿ ಸ್ಥಾಪಿತವಾದ ಮೇಲೆ ಭಾರತೀಯರೊಡನೆ ಗ್ರೀಕರ ಹೊಕ್ಕು ಬಳಕೆ ಹೆಚ್ಚಾಯಿತು. ಅವು ಮೌರ್ಯ ಸಾಮ್ರಾಜ್ಯದೊಳಗೆ ಸೇರಿಹೋದ ಮೇಲೆಯೂ ಗ್ರೀಕ್ ಅಂಶಗಳು ಅಳಿಯದೆ ಉಳಿದುಕೊಂಡವು. ಅಶೋಕನ ಶಾಸನಗಳಲ್ಲಿ ಯವನ ಪ್ರಜೆಗಳ ವಿಚಾರ ಬರುತ್ತದೆ. ಯವನ ಅಧಿಕಾರಿಗಳ ವಿಚಾರ ಬರುತ್ತದೆ. ಪತಂಜಲಿ-ಮನುಗಳ ಕಾಲದಲ್ಲಿ ಇವರು ಭರತಖಂಡದ ಸಮಾಜದಲ್ಲಿ ಒಂದು ರೀತಿಯಲ್ಲಿ ಗಣಿಸಲ್ಪಡತೊಡಗಿದ್ದರು. ಕಾಲಕ್ರಮೇಣ ಹಿಂದೂ ಹೆಸರುಗಳು, ಧರ್ಮಶ್ರದ್ಧೆಗಳು, ಆಚಾರ ಪದ್ಧತಿಗಳು—ಇವನ್ನು ಮೈಗೂಡಿಸಿಕೊಂಡು ಸು. ಕ್ರಿ. ಶ. ೧ನೆಯ ಶತಮಾನದ ಆದಿಭಾಗದ ಹೊತ್ತಿಗೆ ಭಾರತೀಯರಲ್ಲಿ ಒಂದಾದರು. ಭರತಖಂಡದಲ್ಲಿ ಕಾನಿಷ್ಕನ ಕಾಲದವರೆಗೆ ಗ್ರೀಕ್‌ಭಾಷೆ ಪ್ರಚಲಿತವಿದ್ದುದು. ಗ್ರೀಕ್ ಶಿಲ್ಪಕೃತಿಗಳು ನಾಣ್ಯಗಳು ತಕ್ಷಶಿಲೆ ಮುಂತಾದ ಕಡೆಗಳಲ್ಲಿ ದೊರೆತಿರುವುದು. ಗ್ರೀಕ್ ಆಕ್ರಮಣ ಕಾಲದಿಂದ ವ್ಯಾಪಾರವಾಣಿಜ್ಯವು ಭಾರತ ಮತ್ತು ಗ್ರೀಸ್ ದೇಶಗಳ ನಡುವೆ ನಡೆಯಲಾರಂಭಿಸಿ, ಉತ್ತರ ಭರತಖಂಡವು ಗ್ರೀಕ್ ಆಳ್ವಿಕೆಗೆ ಬಂದಮೇಲೆ ಸುಮಾರು ಕ್ರಿ. ಪೂ. ೧೦೦ ರಿಂದ ಅದು ಇನ್ನೂ ಅಭಿವೃದ್ಧಿಗೆ ಬಂದುದು. ಗ್ರೀಕ್-ಭಾರತಗಳ ನಡುವೆ ಸಂಸ್ಕೃತಿ ಮತ್ತು ಸಾಹಿತ್ಯಗಳ ವಿನಿಮಯವಾದ ದಾಖಲೆಗಳು ಕಂಡುಬರುವುದು, ಗಾಂಧಾರಶೈಲಿಯ ಶಿಲ್ಪವು ಗ್ರೀಕ್ ಶೈಲಿಯ ಮಾದರಿಯಿಂದಾದುದು—ಈ ಮೊದಲಾದವನ್ನು ಟಾರ್ನ್ ಎಂಬ ಚರಿತ್ರಕಾರರು 'ದಿ ಗ್ರೀಕ್ಸ್ ಇನ್ ಬ್ಯಾಕ್ಟ್ರಿಯಾ ಅಂಡ್ ಇಂಡಿಯಾ' ಎಂಬ ತಮ್ಮ ಉದ್ಗ್ರಂಥದ ೯ನೆಯ ಅಧ್ಯಾಯದಲ್ಲಿ ವಿಸ್ತಾರವಾಗಿ ಚರ್ಚಿಸಿದ್ದಾರೆ. ಈಚೆಗೆ ಕ್ರಿ. ಶ. ೩–೪ನೆಯ ಶತಮಾನಗಳಲ್ಲಿ ಕೂಡ ಸಣ್ಣ ಪುಟ್ಟ ಗ್ರೀಕ್ ಪಾಳೆಯಪಟ್ಟುಗಳಂತಹ ಕಿರಿಯ ರಾಜ್ಯಗಳು ಇದ್ದವೆಂಬುದಕ್ಕೆ ಶಾತವಾಹನರ ಕಾಲದ ಶಾಸನಗಳು, ನಾಗಾರ್ಜುನಕೊಂಡದ ಶಾಸನ, ಕಾಳಿದಾಸನ ಕಾವ್ಯ—ಇವುಗಳಲ್ಲಿ ಆಧಾರಗಳು ದೊರೆಯುತ್ತದೆ. ಆಗ್ಗೆ ಇವರು ಸಿಥೋ-ಪಾರ್ಥಿಯನರಿಗೆ ಕುಶಾನರಿಗೆ ಅಧೀನತೆಯನ್ನೊಪ್ಪಿಸಿದ್ದರು.

ಶಕರು, ಪಹ್ಲವರು, ಸತ್ರಪರು: ಗ್ರೀಕರು ಯವನರೆನಿಸಿದಂತೆ ಸಿಥಿಯರೂ ಪಾರ್ಥಿಯರೂ ಶಕಪಹ್ಲವರೆಂಬುದಾಗಿ ಭರತಖಂಡದ ಶಾಸನಗಳಲ್ಲಿಯೂ ಗ್ರಂಥಗಳಲ್ಲಿಯೂ ಉಲ್ಲೇಖಿಸಲ್ಪಟ್ಟಿದ್ದಾರೆ. ಕ್ರಿ. ಶ. ೧–೨ನೆಯ ಶತಮಾನಗಳಲ್ಲಿ ಶಕರು ಉತ್ತರಭಾರತದ ಪಶ್ಚಿಮಕ್ಕೆ ಸಿಂಧೂನದೀ ಮುಖಜ ಭೂಮಿ, ಅಭೀರ, ಸೌರಾಷ್ಟ್ರ ಮುಂತಾದ ಕಡೆಗಳಲ್ಲಿ ಆಳುತ್ತಿದ್ದಂತೆ ತಿಳಿಯುವುದು. ಪತಂಜಲಿಯು ಮಹಾಭಾಷ್ಯದಲ್ಲಿಯೂ ಮನುವು ತನ್ನ ಧರ್ಮಶಾಸ್ತ್ರದಲ್ಲಿಯೂ ಇವರನ್ನು ಅನಿರವಸಿತ ಶೂದ್ರರೆಂದೂ ಕೀಳಾದ ಕ್ಷತ್ರಿಯರೆಂದೂ ಕರೆದಿದ್ದಾರೆ. ಇವರಲ್ಲಿ ಅಧಿಕಾರದ ಅದಲುಬದಲು, ಜನಾಂಗಿಕ ಸಂಬಂಧಗಳು ನಡೆಯುತ್ತಿದ್ದವೆಂದು ತೋರುತ್ತದೆ. ಸತ್ರಪರು (ಕ್ಷತ್ರಪರು) (ಕ್ರಿ. ಶ. ೧–೨ನೇ ಶತಮಾನ) ಬಲು ಮಟ್ಟಿಗೆ ತಕ್ಷಶಿಲೆ ಮತ್ತು ಮಥುರೆಯ ಪ್ರದೇಶದಲ್ಲಿ ಆಳುತ್ತಿದ್ದರು. ಇವರು ಮಹಾಕ್ಷತ್ರಪ, ಮಹಾರಾಜ, ಮಹಾದಾನಪತಿ-ಮುಂತಾದ ಪ್ರಶಸ್ತಿಗಳನ್ನು ಉಳ್ಳವರಾಗಿದ್ದುದರಿಂದ ಭಾರತೀಯ ಮೂಲದವರೆಂದು ತಿಳಿಯಲಾಗಿದೆ. ಒಂದೇ ರೀತಿಯ ಹೆಸರುಗಳು, ಒಂದೇ ಆಡಳಿತಪದ್ಧತಿಯ ಸರ್ಕಾರಗಳು, ಇವುಗಳ ದೆಸೆಯಿಂದ ಭಾರತೀಯ ಸಾಹಿತ್ಯದಲ್ಲಿಯೂ ಶಾಸನಗಳಲ್ಲಿಯೂ ಶಕರನ್ನೂ ಪಹ್ಲವರನ್ನೂ ಒಂದಾಗಿ ಗಣಿಸಿರುವುದುಂಟು. ಇದಕ್ಕೆ ಆಯೆರಡು ಜನಾಂಗಗಳ ನಡುವೆ ನಡೆಯುತ್ತಿದ್ದ ಅಂತರ್ಜಾತೀಯ ವಿವಾಹ ಕಾರಣವೆನ್ನಬಹುದು. ಆದರೆ ವಾಸ್ತವವಾಗಿ ಅವೆರಡೂ ಬೇರೆ ಬೇರೆ ಜನವರ್ಗಗಳು. ಕಾಲಕ್ರಮದಲ್ಲಿ ಈ ಜನವರ್ಗಗಳೆಲ್ಲ ಹೊಸಸನ್ನಿವೇಶಗಳಿಗೆ ಹೊಂದಿಕೊಂಡು ಭಾರತೀಯವಾದ ಹೆಸರುಗಳನ್ನು ಇಟ್ಟುಕೊಂಡು ಇಲ್ಲಿಯ ಧಾರ್ಮಿಕ ನಂಬಿಕೆಗಳನ್ನೇ ರೂಢಿಸಿಕೊಂಡು ಭಾರತೀಯ ಕುಟುಂಬಗಳೊಡನೆ ವೈವಾಹಿಕ ಸಂಬಂಧಗಳನ್ನು ಬೆಳೆಸಿಕೊಂಡು ಬೃಹತ್ ಭಾರತೀಯ ಸಮಾಜದಲ್ಲಿ ಸೇರಿಹೋದರು.

ಕುಷಾಣರು: ಪ್ರಾಚೀನ ಭರತಖಂಡದ ರಾಜಕೀಯದಲ್ಲಿ ಪ್ರಮುಖಪಾತ್ರವಹಿಸಿದ ಕುಷಾಣರು ಪ್ರಖ್ಯಾತವಾದ ಯೂಹ್-ಚಿ ಜನಾಂಗದ ಒಂದು ಶಾಖೆ. ಈ ಜನಾಂಗದ ಪ್ರಾಚೀನ ಚರಿತ್ರೆ ಹಲವು ಚೀನೀ ಚಾರಿತ್ರಿಕ ಗ್ರಂಥಗಳಲ್ಲಿ ಕಂಡುಬರುತ್ತವೆ. ಈ ಯೂಹ್-ಚಿಗಳು ಮಾತೃಭೂಮಿಯಿಂದ

ಸುಮಾರು ಕ್ರಿ. ಪೂ. ೧೬೫ರಲ್ಲಿ ಉಚ್ಚಾಟಿತರಾದ ಮೇಲೆ ಅಲೆಮಾರಿಗಳಾಗಿ ಸಾಗುತ್ತ ಬಂದು ಒಂದು ಕಡೆ ನಿಂತ ಮೇಲೆ ಐದು ರಾಜ್ಯವಿಭಾಗಗಳನ್ನು ಮಾಡಿಕೊಂಡರು. ಇವುಗಳಲ್ಲಿ ಒಂದು ಕುಯಿ-ಷು ಆಂಗ್ ಅಥವಾ ಕುಷಾಣರ ನೆಲೆಯಾಯಿತು. ಕುಷಾಣರಲ್ಲಿ ಅತ್ಯಂತ ಪ್ರಸಿದ್ಧನಾದ ದೊರೆಯೆಂದರೆ ಕಾನಿಷ್ಕನು (ಕ್ರಿ. ಶ. ೭೮-೧೦೧). ಉತ್ತರಾಪಥದಿಂದ ದಕ್ಷಿಣದ ಕೊಂಕಣದವರೆಗೆ ಈತನ ರಾಜ್ಯ ಹಬ್ಬಿತ್ತು. ಈತನ ಕಾಲದಲ್ಲಿ ಬೌದ್ಧಧರ್ಮಕ್ಕೆ ಒಳ್ಳೆಯ ಪ್ರೋತ್ಸಾಹ ದೊರೆಯಿತು. ಪೆಷಾವರ್ ಬೌದ್ಧ ಸಂಸ್ಕೃತಿಯ ಒಂದು ವಿಖ್ಯಾತವಾದ ಕೇಂದ್ರವಾಗಿತ್ತು. ಬೌದ್ಧ ಚೈತ್ಯಗಳ, ಸ್ತೂಪಗಳ, ಮತ್ತು ವಿಹಾರಗಳ ನಿರ್ಮಾಣ, ಬೌದ್ಧಧರ್ಮ ಸಮ್ಮೇಳನ, ಧರ್ಮಗ್ರಂಥಗಳ ಹಸ್ತಪ್ರತಿಗಳ ಶೇಖರಣೆ ಮತ್ತು ಅವುಗಳಿಗೆ ವ್ಯಾಖ್ಯಾನಗಳನ್ನು ಬರೆಸುವ ಯೋಜನೆ—ಇವು ಚುರುಕಿನಿಂದ ನಡೆದಹಾಗೆ ಕಂಡು ಬರುತ್ತವೆ. ಗಾಂಧಾರದಲ್ಲಿಯೋ ಜಲಂಧರದಲ್ಲಿಯೋ ನಡೆದ ಬೌದ್ಧಧರ್ಮದ ಒಂದು ಸಮ್ಮೇಳನದಲ್ಲಿ ಅಶ್ವಘೋಷನೆಂಬ ಖ್ಯಾತ ಸಂಸ್ಕೃತಕವಿ, ಸಂಗೀತಜ್ಞ, ತತ್ತ್ವಜ್ಞ, ನಾಟಕಕಾರ, ಉಪಾಧ್ಯಕ್ಷನಾಗಿ ಆಯ್ಕೆಯಾಗಿದ್ದನು. ವಿದ್ಯಾಪ್ರೇಮಿಯೂ ವಿದ್ಯಾವಂತರಿಗೆ ಆಶ್ರಯದಾತೃವೂ ಆಗಿದ್ದ ಕಾನಿಷ್ಕನ ಪೋಷಣೆಯಲ್ಲಿ ಬೌದ್ಧತತ್ತ್ವಜ್ಞರಾದ ವಸುಮಿತ್ರ, ಅಶ್ವಘೋಷ, ಪಾರ್ಶ್ವ ಮುಂತಾದವರಿದ್ದರು. ಮಹಾಯಾನ ಶಾಖೆಯ ಪ್ರವರ್ತಕರಲ್ಲಿ ಅಗ್ರಗಣ್ಯನಾದ ನಾಗಾರ್ಜುನನೂ ಪ್ರಖ್ಯಾತವೈದ್ಯನಾದ ಚರಕನೂ ಪ್ರಾಯಃ ಆತನ ಆಸ್ಥಾನದಲ್ಲಿಯೇ ಇದ್ದವರೆಂದು ತೋರುತ್ತದೆ. ಗ್ರೀಕ್ ಶಿಲ್ಪಜ್ಞ ಏಜೆಸಿಲವುಸ್ ಆತನ ಕಾಲದಲ್ಲಿಯೇ ಇದ್ದವನು. ಇವರೆಲ್ಲ ಪ್ರಥಮ ಕಾನಿಷ್ಕನ ಕಾಲದಲ್ಲಿಯೇ ಇದ್ದವರೆಂದೂ, ಆ ಹೆಸರಿನ ಇತರ ಕಾನಿಷ್ಕರ ಕಾಲದಲ್ಲಿ ಕೂಡ ಇದ್ದಿರಬಹುದೆಂದೂ ಚರಿತ್ರಕಾರರು ಗ್ರಹಿಸಿದ್ದಾರೆ.

ಕಾನಿಷ್ಕನು ಬೌದ್ಧನಾದರೂ ಆತನ ಕಾಲದ ನಾಣ್ಯಗಳ ಮೇಲೆ ಗ್ರೀಕ್ ಪರ್ಶಿಯನ್ ಭಾರತೀಯ ಮತ್ತು ಇತರ ದೇವತೆಗಳ ಮುದ್ರೆಗಳಿರುವುದು ಗಮನಿಸತಕ್ಕದ್ದಾಗಿದೆ. ಕಾನಿಷ್ಕನ ಕಾಲದಲ್ಲಿ ನಾನಾ ಧರ್ಮಗಳಿಗೆ ಆತನ ರಾಜ್ಯವು ನೆಲೆಯಾಗಿತ್ತೆಂಬುದನ್ನೂ ಆತನು ನಾನಾಧರ್ಮಗಳಲ್ಲಿ ಸಮದೃಷ್ಟಿಯುಳ್ಳವನಾಗಿದ್ದನೆಂಬುದನ್ನೂ ಇದು ತೋರಿಸುತ್ತದೆ. ಕುಷಾನರ ಇತರ ದೊರೆಗಳ ಕಾಲದಲ್ಲಿಯೂ ಬೌದ್ಧ ಮತವು ಚೆನ್ನಾಗಿ ಏಳಿಗೆ ಹೊಂದಿತು. ಆದರೂ ಅವರಲ್ಲಿ ಶೈವ ವೈಷ್ಣವ ಸಂಪ್ರದಾಯಗಳ ಕಡೆಗೆ ಒಲವಿದ್ದವರೂ ಕೂಡ ಇದ್ದರೆಂದು ತಿಳಿಯುವುದಕ್ಕೆ ಆಧಾರಗಳಿವೆ. ಮೌರ್ಯಸಾಮ್ರಾಜ್ಯವು ಪತನವಾದ ಮೇಲೆ ಕುಷಾನರು ಕಟ್ಟಿದ ಸಾಮ್ರಾಜ್ಯವೇ ಗಣ್ಯವಾದದ್ದು. ಅವರ ಕಾಲದಲ್ಲಿ ಸಾಹಿತ್ಯ, ಶಿಲ್ಪಕಲೆ, ಧರ್ಮಗಳು ಏಳಿಗೆಗೆ ಬಂದವು. ಮಹಾಯಾನ ಬೌದ್ಧಧರ್ಮವೂ ಗಾಂಧಾರಶೈಲಿಯ ಶಿಲ್ಪಕಲೆಯೂ ಪ್ರವರ್ತಿಸಿದ್ದು ಆಗಲೇ. ಅಶ್ವಘೋಷ ನಾಗಾರ್ಜುನ, ಚರಕ ಮತ್ತು ಇತರ ಶ್ರೇಷ್ಠರ ಪ್ರಸಿದ್ಧವಾದ ಕೃತಿಗಳು ರಚನೆಯಾದ ಕಾಲವಿದು. ಸಾಹಿತ್ಯಕ ಚಟುವಟಿಕೆಗಳ ಹಾಗೆಯೇ, ಧಾರ್ಮಿಕವಾಗಿ ಶೈವಧರ್ಮ ಪಂಥವೂ ಅದಕ್ಕೆ ಸೇರಿದಂತಿರುವ ಕಾರ್ತಿಕೇಯಪಂಥವೂ, ಮಹಾಯಾನ ಬೌದ್ಧಶಾಖೆಯೂ, ಮಿಹಿರ ಮತ್ತು ವಾಸುದೇವ ಕೃಷ್ಣರ ಪಂಥಗಳೂ—ಈ ಕಾಲದಲ್ಲಿ ಪ್ರವರ್ಧಮಾನಕ್ಕೆ ಬಂದವು. ಕುಷಾನರ ಕಾಲದ ಕಶ್ಯಪ ಮಾತಂಗನ (ಕ್ರಿ. ಶ. ಸು ೬೧–೬೭) ಮೂಲಕವಾಗಿ ಚೀನಾದೇಶಕ್ಕೆ ಬೌದ್ಧಮತವು ಪ್ರವೇಶಿಸಿತು. ಇದನ್ನು ಗಮನಿಸಿ, ಗುಣ ಮತ್ತು ಸಮೃದ್ಧಿಯ ದೃಷ್ಟಿಯಿಂದ ಕುಷಾನರ ಕಾಲದಲ್ಲಿ ಸಾಧ್ಯವಾದ ಸಂಸ್ಕೃತಿಸಂವರ್ಧನವು ಭರತಖಂಡವೂ ಚರಿತ್ರೆಯಲ್ಲಿ ಕುತೂಹಲಕರವೂ, ಪ್ರಮುಖವೂ ಆದದ್ದಾಗಿದೆಯೆಂದು ಚರಿತ್ರಕಾರರು ತಿಳಿಸಿರುತ್ತಾರೆ.

ಕುಶಾನೋತ್ತರ ಕಾಲದ ಉತ್ತರ ಭಾರತ (ಸುಮಾರು ಕ್ರಿ.ಶ. ೨೦೦–೩೦೦): ಹಲವು ಗಣರಾಜ್ಯಗಳು, ಪ್ರಭುತ್ವರಾಜ್ಯಗಳು, ಉತ್ತರ ಭಾರತದ ಮಧ್ಯ ಮತ್ತು ಪಶ್ಚಿಮ ಪ್ರದೇಶಗಳ ವಿವಿಧ ಭಾಗಗಳಲ್ಲಿ ಹಿಂದೂ-ಗ್ರೀಕ್ ಪ್ರಾಬಲ್ಯವು ತಗ್ಗಿದಮೇಲೆ ಕ್ರಿ.ಶ.ಕ್ಕೆ ಸ್ವಲ್ಪ ಮೊದಲು ಮತ್ತು ಸ್ವಲ್ಪ ಈಚೆಗೆ ಪ್ರವರ್ಧಮಾನಕ್ಕೆ ಬಂದವು. ಗಣರಾಜ್ಯಗಳ ಜನರಲ್ಲಿ ಅರ್ಜುನಾಯನರು, ಮಾಳವರು, ಯೌಧೇಯರು ಮುಂತಾದವರು ಶಕರಿಗೂ ಕುಷಾಣರಿಗೂ ಅಧೀನರಾಗಿ ಆಳುತ್ತಿದ್ದರು. ಆಳರಸರ ಪ್ರಾಂತಗಳಲ್ಲಿ ನಾಗರು ಮೊದಲಾದವರು ಗಣ್ಯರಾಗಿದ್ದರು. ಈ ರಾಜ್ಯಗಳೆಲ್ಲ ಅನತಿಕಾಲದಲ್ಲಿಯೇ ಪ್ರಸಿದ್ಧಿಗೆ ಬಂದ ಗುಪ್ತಸಾಮ್ರಾಜ್ಯದಲ್ಲಿ ಐಕ್ಯವಾದವು. ಕ್ರಿ. ಪೂ. ೨–೧ನೆಯ ಶತಮಾನಗಳಲ್ಲಿ ಅರ್ಜುನಾಯನರು

ರಾಜಕೀಯವಾಗಿ ಪ್ರಬಲರಾಗಿದ್ದರು. ಸಮುದ್ರಗುಪ್ತನ ಅಲಹಾಬಾದ್ ಶಾಸನದಲ್ಲಿಯೂ ವರಾಹ ಮಿಹಿರನ ಬೃಹತ್ ಸಂಹಿತೆಯಲ್ಲಿಯೂ ಇವರು ಉಲ್ಲೇಖಿಸಲ್ಪಟ್ಟಿದ್ದಾರೆ. ಅಲೆಕ್ಸಾಂಡರನ ಆಕ್ರಮಣ ಕಾಲದಲ್ಲಿ ರಾವಿ ಮತ್ತು ಚೀನಾಬ್ ನದಿಗಳ ಉತ್ತರದಲ್ಲಿದ್ದು ಆತನನ್ನು ಎದುರಿಸಿದ ಮಾಳವರನ್ನು ಪತಂಜಲಿ ಉಲ್ಲೇಖಿಸಿದ್ದಾನೆ. ಇವರು ಕ್ರಿ. ಶ. ೨–೩ನೆಯ ಶತಮಾನಗಳಲ್ಲಿ ಪ್ರಬಲರಾಗಿದ್ದರು. 'ಕೃತ' ಶಕೆಯ ಗಣನೆಯಿಂದಾಗಿ ಇವರು ಹೆಚ್ಚು ಪ್ರಸಿದ್ಧರಾಗಿದ್ದಾರೆ. ಯೌಧೇಯರನ್ನು ಪಾಣಿನಿ ಅಷ್ಟಾಧ್ಯಾಯಿಯಲ್ಲಿ ಉಲ್ಲೇಖಿಸಿದ್ದಾನೆ. ಇವರ ಆರಾಧ್ಯಮೂರ್ತಿ ದೇವಸೇನಾನಿ ಕಾರ್ತಿಕೇಯ. ಇವರು ಹೆಸರಿಗೆ ತಕ್ಕಂತೆ ಯೋಧರೇ ಆಗಿದ್ದರು. ಕುಷಾಣರ ಅವನತಿಗೆ ಕಾರಣರಾದವರಲ್ಲಿ ಇವರು ಅಗ್ರಗಣ್ಯರು. ಇನ್ನು ಹೀಗೆಯೇ ಕುಣಿಂದರು, ಕುಲೂತರು, ಮದ್ರಕರು ಮೊದಲಾದವರ ವಿಚಾರವೂ ತಿಳಿದುಬಂದಿದೆ. ಕುಲೂತರ ವಿಚಾರ ಮಹಾಭಾರತದಲ್ಲಿಯೂ ವಿಶಾಖದತ್ತನ ಮುದ್ರಾರಾಕ್ಷಸದಲ್ಲಿಯೂ ಬರುತ್ತದೆ.

ಪ್ರಭುತ್ವ ರಾಜ್ಯಗಳಲ್ಲಿ ಸರ್ಪಾರಾಧಕರಾದ ನಾಗರನ್ನು (ಕ್ರಿ. ಶ. ೩–೪ನೆಯ ಶತಮಾನಗಳು) ಮುಖ್ಯರೆಂದು ಹೇಳಬಹುದು. ವಾಯುಪುರಾಣ ಬ್ರಹ್ಮಾಂಡಪುರಾಣ ವಿಷ್ಣುಪುರಾಣಗಳಲ್ಲಿ ನಾಗರ ಕೆಲವು ಮನೆತನಗಳನ್ನು ಹೇಳಿದೆ. ಮಗಧದ ಶಿಶುನಾಗ ಮತ್ತು ನಾಗದರ್ಶಕರ ರಾಜಮನೆತನವು ಅತಿ ಪ್ರಾಚೀನವಾದದ್ದು. ಪ್ರಾಚೀನ ಮತ್ತು ಮಧ್ಯಕಾಲೀನ ಇತಿಹಾಸದಲ್ಲಿ ಮಾತ್ರವೇ ಅಲ್ಲದೆ ಇಂದಿಗೂ ಈ ಜನಾಂಗವನ್ನು ಪ್ರತಿನಿಧಿಸುವವರು ಇರುತ್ತಿರುವುದು ಗಮನಾರ್ಹವಾಗಿದೆ. ಶಾಸನ, ನಾಣ್ಯ ಮತ್ತು ಸಾಹಿತ್ಯಿಕ ಆಧಾರಗಳಿಂದ, ಸ್ಥಳ ಮತ್ತು ವ್ಯಕ್ತಿನಾಮಗಳಿಂದ ಈ ಜನವರ್ಗದ ವ್ಯಾಪಕತೆಯನ್ನು ತಿಳಿಯಬಹುದಾಗಿದೆ. ವಿದಿಶೆ ಕಾಂತಿಪುರಿ ಮಥುರೆ ಪದ್ಮಾವತಿಗಳಲ್ಲಿ ಇವರು ೩–೪ನೆಯ ಶತಮಾನಗಳಲ್ಲಿ ಪ್ರವರ್ಧಮಾನಕ್ಕೆ ಬಂದರು. ಮಹಾರಾಜ ಭಾವನಾಗನೆಂಬುವನು ಭಾರಶಿವ ಮನೆತನಕ್ಕೆ ಸೇರಿದವನೆಂದು ತಿಳಿಯುವುದು. ಈ ಭಾರಶಿವರು ಶೈವಭಕ್ತರಾಗಿದ್ದರು. ಶಿವಲಿಂಗವನ್ನು ಭುಜಗಳ ಮೇಲೆ ಹೊತ್ತು ತಿರುಗುತ್ತಿದ್ದುದು ಶಿವನ ಸಂತೋಷಕ್ಕೆ ಕಾರಣವಾಗಿ ಈ ಹೆಸರು ಆ ಮನೆತನಕ್ಕೆ ಬಂದಿತಂತೆ. ಭಾರಶಿವನಾಗರ ಒಂದು ಕೇಂದ್ರವಾಗಿದ್ದ ಪದ್ಮಾವತೀನಗರವು ಭವಭೂತಿಯ ಮಾಲತೀಮಾಧವದಲ್ಲಿ ಉಕ್ತವಾಗಿದೆ. ಹೀಗೆಯೇ ಅಹಿಚ್ಛತ್ರ, ಅಯೋಧ್ಯೆ ಮತ್ತು ಕೌಶಾಂಬಿಗಳು ಕೂಡ ಅರಸೊತ್ತಿಗೆಯ ಆಳ್ವಿಕೆಯ ರಾಜ್ಯಗಳಾಗಿದ್ದವು.

ಪಶ್ಚಿಮ ಭಾರತದ ಶಕಸತ್ರಪರು : ಪಶ್ಚಿಮ ಭಾರತದಲ್ಲಿ ಕ್ರಿ.ಶ. ೧–೨ನೆಯ ಶತಮಾನದಲ್ಲಿ ಶಕರು ಕ್ಷಹರಾತ ಸತ್ರಪರು—ಇವರು ಆಳುತ್ತಿದ್ದರು. ಕ್ಷತ್ರಪರೆಂದೇ ಗಣ್ಯರಾದ ಕಾರ್ದಮಕರ ಮನೆತನದ ರುದ್ರದಾಮ (ಕ್ರಿ. ಶ. ೧೫೦–೫೧) ನೆಂಬವನ ಜುನಾಗರ್ ಶಾಸನವು ಅನೇಕ ದೃಷ್ಟಿಗಳಿಂದ ಪ್ರಸಿದ್ಧವಾದುದು. ಈ ಪ್ರಶಸ್ತಿಯು ವಿಷಯ ಸುದರ್ಶನವೆಂಬ ಕೆರೆಗೆ ಏರಿಯನ್ನು ಕಟ್ಟಿಸಿದ್ದು. ಕೃಷಿಕರಿಗೆ ಅತ್ಯುಪಯುಕ್ತವಾಗಿ ಬಹುಕಾಲದಿಂದ ಈ ಕೆರೆ ಅಸ್ತಿತ್ವದಲ್ಲಿತ್ತು. ಚಂಡಮಾರುತದ ಹೊಡೆತಕ್ಕೆ ಸಿಕ್ಕು ದೊಡ್ಡ ಬಿರುಕುಬಿದ್ದು ಕೆರೆ ಹಾಳಾಗುವ ಸ್ಥಿತಿಯಲ್ಲಿದ್ದಾಗ, ಕೃಷಿಕರು ವರ್ಷದ ಬೆಳೆಗೆ ಪೆಟ್ಟಾಗುವುದೆಂದು ಹೆದರಿದರು. ರುದ್ರದಾಮನು ಕೆರೆಯ ದುರಸ್ತಿಗಾಗಿ ಕಳಿಸಿದ ಎಲ್ಲ ಅಧಿಕಾರಿಗಳೂ ಪ್ರಯತ್ನದಲ್ಲಿ ವಿಫಲರಾದರು. ಕೊನೆಗೆ ಒಬ್ಬ ಪಹ್ಲವ ಅಧಿಕಾರಿಯ ಪ್ರಯತ್ನದಿಂದ ಆ ಕೆರೆ ಮೊದಲಿನ ಸ್ಥಿತಿಗೆ ಬಂದಿತು. ರುದ್ರದಾಮನ್ನಿನ ಕಾಲ ರೋಗರುಜಿನಗಳಿಲ್ಲದ ಕಳ್ಳಕಾಕರ ಭೀತಿಯಿಲ್ಲದ ಸುಭಿಕ್ಷದ ಕಾಲವಾಗಿತ್ತು. ಆತನು ಪ್ರಸಿದ್ಧ ವಿಜಯಿಯೂ ಆಡಳಿತಗಾರನೂ ಆಗಿದ್ದುದಲ್ಲದೆ ಸಂಸ್ಕೃತವಿದ್ಯೆಗೆ ಆಶ್ರಯದಾತ್ರವೂ ವ್ಯಾಕರಣ ರಾಜನೀತಿ ಸಂಗೀತ ತರ್ಕಗಳಲ್ಲಿ ಸ್ವತಃ ನಿಪುಣನೂ, ಸ್ವತಃ ಸಂಸ್ಕೃತದಲ್ಲಿ ಗದ್ಯ ಪದ್ಯಗಳ ಲೇಖಕನೂ ಆಗಿದ್ದನೆಂದು ತಿಳಿಯುವುದು. ಕಾರ್ದಮಕರ ಕಾಲದಲ್ಲಿ ಉಜ್ಜಯಿನಿಯು ಒಂದು ಅತ್ಯಂತ ಖ್ಯಾತವಾದ ವಿದ್ಯಾಕೇಂದ್ರವಾಗಿತ್ತು.

ಶಾತವಾಹನರು ಮತ್ತು ಚೇದಿಗಳು : ಕ್ರಿ. ಪೂ. ೧ನೆಯ ಶತಮಾನದಲ್ಲಿ ದಕ್ಷಿಣಭಾರತದ ಪ್ರದೇಶಗಳನ್ನು ಪ್ರಬಲವಾದ ಎರಡು ರಾಜಕೀಯ ಶಕ್ತಿಗಳು ತಮ್ಮ ಅಂಕೆಯಲ್ಲಿಟ್ಟುಕೊಂಡಿದ್ದುವು. ಅವು ಉತ್ತರದಕ್ಷಿಣದ ಶಾತವಾಹನ ಮತ್ತು ಕಲಿಂಗದ ಚೇದಿ ಮನೆತನಗಳು. ಚೇದಿಗಳ ಪ್ರಾಬಲ್ಯ ಹೆಚ್ಚುಕಾಲವಿರಲಿಲ್ಲ. ಆದರೆ ಶಾತವಾಹನರು ದಕ್ಷಿಣಾಪಥವನ್ನು ಮೂರು ಶತಮಾನಗಳ ಕಾಲ

ಪ್ರಸಿದ್ಧರಾಗಿ ಆಳಿದರು. ಇಲ್ಲಿ ಕಲಿಂಗದ ಚೇದಿಗಳ ಕಾಲದ ಜನಜೀವನದ ಕೆಲವು ಸಂಗತಿಗಳನ್ನು ತಿಳಿಯಬಹುದು.

ಪ್ರಾಚೀನ ಕಲಿಂಗದೇಶವು ಇಂದಿನ ಪುರಿ ಮತ್ತು ಗಂಜಾಂ ಜಿಲ್ಲೆಗಳನ್ನೂ ಒರಿಸ್ಸಾದ ಕಟಕ್ ಜಿಲ್ಲೆಯ ಕೆಲವು ಭಾಗಗಳನ್ನೂ ಅದಕ್ಕೆ ಉತ್ತರದಿಕ್ಕಿನ ಸುತ್ತುಮುತ್ತಿನ ಪ್ರದೇಶಗಳನ್ನೂ ಒಳಕೊಂಡಿತ್ತು. ಕೆಲವು ಕಾಲ ದಕ್ಷಿಣದ ತೆಲುಗು ಭಾಷೆಯನ್ನಾಡುವ ಕೆಲಭಾಗಗಳನ್ನೂ ಒಳಕೊಂಡಿತ್ತು. ಈ ವಂಶದ ಸ್ಥಾಪನೆ ಸು. ಕ್ರಿ. ಪೂ. ೩೩೦ರಲ್ಲಿ. ಮೇಘವಾಹನ ದೊರೆಯಿಂದಾಯಿತು. ಚರಿತ್ರಕಾರರು ಮೂರು ಘಟ್ಟಗಳಲ್ಲಿ ಚೇದಿ ಮನೆತನದ ಚರಿತ್ರೆಯನ್ನು ಹೇಳುತ್ತಾರೆ. ಮೊದಲ ಘಟ್ಟದಲ್ಲಿ. ಕಲಿಂಗದೇಶವು ಜೈನಧರ್ಮದ ಕೇಂದ್ರವಾಗಿದ್ದು ಚೇದಿಯ ಅರಸರಲ್ಲಿ ಕರ್ಕಂಡು. ಕ್ಷೇಮರಾಜ ಮೊದಲಾದವರು ಜೈನಧರ್ಮೀಯರೇ ಆಗಿದ್ದರು. ಚೇದಿಮನೆತನವೂ ಕಲಿಂಗಸಾಮ್ರಾಜ್ಯವೂ ತಮ್ಮ ಪ್ರಭಾವವನ್ನು ಖಾರವೇಲನ ಹಾಥಿಗುಂಫಾ ಶಾಸನದಲ್ಲಿ ಅಂಕಿತಗೊಳಿಸಿವೆ. ಚೇದಿಗಳ ವಂಶಾನುಕ್ರಮಣಿಯನ್ನು ಈ ಶಾಸನದ ಆಧಾರದ ಮೇಲೆ ಗುರುತಿಸಿದೆ. ದಕ್ಷಿಣಭಾರತದ ಜೈನರಲ್ಲಿಯೇ ಪ್ರಾಯಃ ಚೇದಿಗಳು ಅತಿ ಪ್ರಾಚೀನರೆಂದೂ. ಉತ್ತರಭಾರತದ ಜೈನಧರ್ಮದ ಶಾಖೆಗಳಲ್ಲಿ ಒಂದನ್ನು ಪ್ರತಿನಿಧಿಸುವ ಒಂದು ಶಾಖೆಗೆ ಅವರು ಸೇರಿದ್ದವರೆಂದೂ. ಭದ್ರಬಾಹು-ಚಂದ್ರಗುಪ್ತರ ಕಾಲಕ್ಕೆ ಮೊದಲಲ್ಲಿ ಕಂಡುಬರುವ ಜೈನಧರ್ಮದ ಕುರುಹು ಇದೆಂದೂ ಕೆಲವರು ಚರಿತ್ರಕಾರರು ಭಾವಿಸಿದ್ದಾರೆ.

ಕ್ರಿ. ಪೂ. ೧ನೆಯ ಶತಮಾನದಲ್ಲಿ ಕಲಿಂಗವು ಚೇದಿವಂಶದ ಮಹಾಮೇಘವಾಹನ ಮನೆತನದ ದೊರೆಗಳು ಸಮರ್ಥವಾಗಿ ಆಳುತ್ತಿದ್ದ ಅತ್ಯಂತ ಪ್ರಬಲ ರಾಜಕೀಯ ಕೇಂದ್ರಗಳಲ್ಲಿ ಒಂದಾಗಿದ್ದಿತು. ಈ ಮನೆತನದ ಅತಿಪ್ರಸಿದ್ಧವಾದ ಅರಸು ಎಂದರೆ ಖಾರವೇಲನು (ಕ್ರಿ. ಪೂ. ೧ನೇ ಶತಮಾನ). ಪ್ರಾಚೀನ ಭಾರತದ ಚರಿತ್ರೆಯಲ್ಲಿಈತನು ಒಬ್ಬ ಗಣ್ಯ ಐತಿಹಾಸಿಕಪುರುಷನಾಗಿದ್ದಾನೆ. ಬೌದ್ಧಧರ್ಮದ ಬೆಳವಣಿಗೆಯ ಇತಿಹಾಸದಲ್ಲಿ ಅಶೋಕನ ಹೆಸರಿಗಿರುವ ಮಾನ್ಯತೆ ದಕ್ಷಿಣದೇಶದ ಜೈನಧರ್ಮದ ಬೆಳವಣಿಗೆಯ ಇತಿಹಾಸದಲ್ಲಿ ಈತನ ಹೆಸರಿಗೆ ಬಲುಮಟ್ಟಿಗೆ ಇದೆಯೆಂಬುದಾಗಿ ಹೇಳಬಹುದು. ಈತನ ರಾಜಕೀಯ ಧಾರ್ಮಿಕ ಮತ್ತು ಸಾಮಾಜಿಕವಾದ ಸಾಧನೆಗಳನ್ನು ಹಾಥಿಗುಂಫಾಶಾಸನವು ಕೆಲಮಟ್ಟಿಗೆ ಪ್ರಕಟಪಡಿಸಿದೆ. ವಾತಾವರಣದ ದೆಸೆಯಿಂದ ಶಾಸನದ ಅನೇಕ ಕಡೆಗಳಲ್ಲಿ ಅಕ್ಷರಗಳು ಅಳಿಸಿಹೋಗಿಯೂ ಅಸ್ಪಷ್ಟವಾಗಿಯೂ ಇರುವುದರಿಂದ ವಿದ್ವಾಂಸರಲ್ಲಿ ನಾನು ಅಭಿಪ್ರಾಯ ಭೇದಗಳಿಗೆ ಶಾಸನಪಾಠವು ಎಡೆಮಾಡಿರುವುದು ಕಂಡುಬರುತ್ತದೆ. ಆದರೆ ಆತನ ಸರ್ವಸಾಧನೆಗಳ ಹಿನ್ನೆಲೆಯಲ್ಲಿ ರುವ ಸತ್ವ್ಯಶಕ್ತಿ ಪ್ರಜಾನುರಕ್ತಿ ಧರ್ಮಶ್ರದ್ಧೆ ಜಿನಭಕ್ತಿ ಕಲಾಭಿಜ್ಞತೆ ಇಂತಹ ಶ್ರೇಷ್ಠಗುಣಗಳನ್ನು ಎಲ್ಲರೂ ಮೆಚ್ಚಿಕೊಂಡಾಡಿರುವುದು ಕಂಡುಬರುತ್ತದೆ. ಖಾರವೇಲನು ದಕ್ಷಿಣೋತ್ತರ ಭರತವರ್ಷದ ದಿಗ್ವಿಜಯವನ್ನು ಯಶಸ್ವಿಯಾಗಿ ನಿರ್ವಹಿಸಿ ಮಗಧ ಸಾಮ್ರಾಜ್ಯಪದವನ್ನೇ ತನ್ನ ಸಾಮರ್ಥ್ಯದಿಂದ ಅಲುಗಾಡಿಸಿದನು. ಪ್ರಜೆಗಳ ಸೌಕರ್ಯ ಸಂತೋಷಗಳಿಗಾಗಿ ತನ್ನ ಪಟ್ಟಣದ ಜೀರ್ಣೋದ್ಧಾರವನ್ನು ಕೈಕೊಂಡನು, ನಾಟಕಗಳು ನೃತ್ಯಗೀತಾದಿಗಳ ಗೋಷ್ಠಿಗಳು ಇವನ್ನು ರಾಜಧಾನಿಯಲ್ಲಿ ವ್ಯವಸ್ಥೆಗೊಳಿಸಿದನು. ಕಾಲುವೆಗಳನ್ನು ತೋಡಿಸಿದನು. ವಿಶೇಷವಾಗಿ ತೆರಿಗೆವಿನಾಯಿತಿಗಳನ್ನು ಕೊಟ್ಟನು: ಅಲ್ಲದೆ ಜೈನರಿಗೂ ಬ್ರಾಹ್ಮಣರಿಗೂ ವಿಪುಲವಾಗಿ ದಾನಸನ್ಮಾನಗಳನ್ನು ಮಾಡಿದನು. ಈತನು ಸ್ವತಃ ಲೇಖ್ಯರೂಪಗಣನ ವ್ಯವಹಾರಾದಿಗಳಲ್ಲಿ ನಿಷ್ಣಾತನಾಗಿದ್ದನು. ಈತನು ಜೈನಧರ್ಮಕ್ಕೆ ವಿಶೇಷ ಪ್ರೋತ್ಸಾಹವಿತ್ತು ಜೈನ ಸನ್ಯಾಸಿಗಳ ಉಪಯೋಗಕ್ಕೆ ತಕ್ಕ ಮಂದಿರಗಳನ್ನೂ ಕಟ್ಟಿಸಿ ಅವುಗಳಿಗೆ ಉಚಿತವಾದ ಸೌಕರ್ಯಗಳನ್ನು ಕಲ್ಪಿಸಿದನು. ಆತನ ಕಾಲದಲ್ಲಿ ಕಲಿಂಗದೇಶವು ಸಂಪತ್ಸಮೃದ್ಧವಾಗಿದ್ದು. ದೇಶದ ಹಣವನ್ನು ಆತನು ಪ್ರಜೆಗಳ ಸೌಕರ್ಯಕ್ಕಾಗಿಯೇ ವಿನಿಯೋಗಿಸಿದನು. ಜೈನಧರ್ಮವು ಅದರ ಸ್ಥಾಪಕನಾದ ಮಹಾವೀರನ ಮೃತಿಯ ಒಂದು ಶತಮಾನದ ಅವಧಿಯೊಳಗೇ ಒರಿಸ್ಸಾವನ್ನು ಪ್ರವೇಶಿಸಿತೆಂಬುದೂ. ಪ್ರಾಯಃ ಆ ಪ್ರಾಂತದ ಸಾರ್ವಜನಿಕ ಧರ್ಮವಾಯಿತೆಂಬುದೂ ಆತನ ಪ್ರಖ್ಯಾತವಾದ ಹಾಥಿಗುಂಫಾ ಪ್ರಶಸ್ತಿಶಾಸನದಿಂದ ತಿಳಿದುಬರುವ ಒಂದು ಪ್ರಮುಖವಾದ ಸಂಗತಿಯಾಗಿದೆ.

ಶಾತವಾಹನೋತ್ತರ ಕಾಲದ ದಕ್ಷಿಣ ಭಾರತ

ಪ್ರಾಚೀನ ವಾಕಾಟಕರು (ಕ್ರಿ. ಶ. ೩–೪ನೇ ಶತಮಾನಗಳು): ಶಾತವಾಹನರ ಕಾಲವಾದ ಮೇಲೆ, ಕ್ರಿ. ಶ. ೬ನೆಯ ಶತಮಾನದ ಮಧ್ಯಭಾಗದಲ್ಲಿ ಚಾಲುಕ್ಯರು ಕಾಣಿಸಿಕೊಳ್ಳುವವರೆಗೆ ದಕ್ಷಿಣಭಾರತದ ಕೆಲವು ಭಾಗಗಳ ಮೇಲೆ, ಕೆಲವೊಮ್ಮೆ ಮಧ್ಯಭಾರತದ ಭಾಗಗಳ ಮೇಲೆ, ಅಧಿಕಾರವಹಿಸುತ್ತ ಪ್ರಬಲರಾಗಿದ್ದವರೆಂದರೆ ವಾಕಾಟಕರು. ಇವರು ಉತ್ತರಕಾಲೀನ ಶಾತವಾಹನರ ಸಾಮಂತರಾಗಿದ್ದು ಅವರ ಅವನತಿಯ ನಂತರ ಸ್ವತಂತ್ರರಾದಂತೆ ತೋರುತ್ತದೆ. ಈ ಮನೆತನದ ಸ್ಥಾಪಕ ವಿಂಧ್ಯಶಕ್ತಿಯೆಂಬುವನ (ಕ್ರಿ. ಶ. ೨೫೫–೨೭೫) ಬಗೆಗೆ ಸರಿಯಾಗಿ ಏನೂ ತಿಳಿದಿಲ್ಲ. ಇವನ ಮಗ ಪ್ರವರಸೇನನು (ಸುಮಾರು ಕ್ರಿ.ಶ. ೨೭೫–೩೩೫) ವೈದಿಕಧರ್ಮದಲ್ಲಿ ನಿಷ್ಠಾವಂತನಾಗಿದ್ದು ಆ ಧರ್ಮಕ್ಕೆ ಬಹಳ ಪ್ರೋತ್ಸಾಹವನ್ನು ಕೊಡುತ್ತಿದ್ದನು. ಈತನು ತನ್ನ ಸುದೀರ್ಘ ರಾಜ್ಯಾವಧಿಯಲ್ಲಿ ಅಗ್ನಿಷ್ಟೋಮ ಅಪ್ತೋರ್ಯಾಮ ಉಕ್ಥ್ಯ, ಷೋಡಶಿ, ಬೃಹಸ್ಪತಿಸವ, ವಾಜಪೇಯ, ಜ್ಯೋತಿಷ್ಟೋಮ—ಮುಂತಾದ ವೈದಿಕಯಜ್ಞಯಾಗಗಳನ್ನು ಆಚರಿಸಿದನಲ್ಲದೆ, ನಾಲ್ಕು ಅಶ್ವಮೇಧಗಳನ್ನೂ ನಡೆಸಿದನು. ವಾಕಾಟಕರಿಗೆ ಈಚಿನ ಕಾಲದಲ್ಲಿ ಗುಪ್ತರ ಮನೆತನದೊಂದಿಗೆ ಹಾಗೆಯೇ ಆಂಧ್ರದ ವಿಷ್ಣುಕುಂಡಿಗಳ ಮನೆತನದೊಂದಿಗೆ ವೈವಾಹಿಕ ಸಂಬಂಧ ಬೆಳೆದಿತ್ತು.

ಆಭೀರರು: (ಕ್ರಿ. ಶ. ೩–೪ನೇ ಶತಮಾನ) ಇವರು ಪ್ರಾಯಃ ವಿದೇಶೀಯರಾಗಿದ್ದು ಶಕರಿಗೆ ಸ್ವಲ್ಪಮೊದಲಲ್ಲಿಯೋ ಅಥವಾ ಜತೆಯಲ್ಲಿಯೋ ಪೂರ್ವ ಇರಾನಿನ ಯಾವುದೋ ಭಾಗದಿಂದ ಭಾರತಕ್ಕೆ ಬಂದಹಾಗೆ ತೋರುತ್ತದೆ. ಆರಂಭದ ಶಾಸನಗಳಲ್ಲಿ ಅವರು ಪಶ್ಚಿಮಭಾರತದ ಶಕಮಹಾಕ್ಷತ್ರಪರಿಗೆ ದಂಡಾಧೀಶರಾಗಿ ಕಾಣಿಸಿಕೊಳ್ಳುತ್ತಾರೆ. ಇವರಲ್ಲಿ ಚೆನ್ನಾಗಿ ತಿಳಿದುಬಂದಿರುವ ಅರಸನೆಂದರೆ ರಾಜ ಮಾಠರೀಪುತ್ರ ಈಶ್ವರಸೇನ. ಈತನು ನಾಸಿಕದ ಬೆಟ್ಟಗಳಲ್ಲಿಯೂ ವಿಹಾರಗಳಲ್ಲಿಯೂ ಸನ್ಯಾಸಿಗಳಿಗೆ ರುಗ್ಣರಾದವರಿಗೆ ವೈದ್ಯ ಚಿಕಿತ್ಸೆಗಾಗಿ ನಾಸಿಕದ ವರ್ತಕಶ್ರೇಣಿಗಳಲ್ಲಿ ಹಣವಿಟ್ಟು ಇಟ್ಟಿದ್ದನೆಂದು ಒಂದು ಶಾಸನದಲ್ಲಿ ವರ್ಣಿತವಾಗಿದೆ. ಇವರು ೪ನೆಯ ಶತಮಾನದ ನಡುಗಾಲದವರೆಗೂ ಆಳುತ್ತಿದ್ದರೆಂಬುದು ಮಯೂರಶರ್ಮನು ಅವರನ್ನು ಸಾಧಿಸಿದಂತೆ ಉಲ್ಲೇಖವಿರುವ ಚಂದ್ರವಳ್ಳಿಯ ಶಾಸನದಿಂದ ಸಿದ್ಧವಾಗುತ್ತದೆ.

ಬೋಧಿಗಳು: ಕ್ರಿ. ಶ. ೩ನೆಯ ಶತಮಾನದಲ್ಲಿ ದಕ್ಷಿಣಭಾರತದ ಕೆಲವು ಭಾಗಗಳಲ್ಲಿ ಆಳುತ್ತಿದ್ದರು. ಬೋಧಿಯೆಂಬ ಹೆಸರಿನಿಂದಲೂ ಅವರ ಕಾಲದ ನಾಣ್ಯಗಳಿಂದಲೂ ಅವರು ಬೌದ್ಧರೆಂದು ಹೇಳಬಹುದು. ಈ ಮನೆತನದವರ ವಿಚಾರ ಹೆಚ್ಚೇನೂ ತಿಳಿದು ಬಂದಿಲ್ಲ.

ಇಕ್ಷ್ವಾಕುಗಳು: ಶಾತವಾಹನರ ಮುಖ್ಯ ಶಾಖೆಯ ವಸತಿಯಾಗಿದ್ದ ಕೃಷ್ಣಾಗೋದಾವರೀ ಜಿಲ್ಲೆಗಳ ಪ್ರದೇಶವು ೩ನೆಯ ಶತಮಾನದ ಮೊದಲ ಪಾದವು ಮುಗಿಯುವ ಹೊತ್ತಿಗೆ ಇವರ ಕೈಗೆ ಬಂದಿತು. ಅಯೋಧ್ಯೆಯ ಪ್ರಾಚೀನ ಇಕ್ಷ್ವಾಕು ಮನೆತನದವರೇ. ಆಂಧ್ರದೇಶಕ್ಕೆ ಬಂದು ಕಾಲಾಂತರದಲ್ಲಿ ನೆಲಸಿದರೇ ಹೇಗೆ ಎಂಬುದು ತಿಳಿಯದು. ಈ ಮನೆತನದ ಮೂಲಪುರುಷನಾದ ಶಾಂತಮೂಲನೆಂಬುವನು ಶಾತವಾಹನರನ್ನು ಪದಚ್ಯುತಿಗೊಳಿಸಿದ ನೆನಪಾಗಿ ಅಶ್ವಮೇಧಯಾಗವನ್ನು ಮಾಡಿದಂತೆ ತಿಳಿಯುತ್ತದೆ. ಪುರಾಣಗಳಲ್ಲಿ ಇವರನ್ನು ಶ್ರೀಪರ್ವತೀಯ ಆಂಧ್ರರೆಂದಿದೆ. ನಾಗಾರ್ಜುನೀಕೊಂಡದಲ್ಲಿರುವ ವಿಜಯಪುರಿ ಇವರ ರಾಜಧಾನಿಯಾಗಿದ್ದಂತೆ ತೋರುವುದು. ಶಾಂತಮೂಲನು ವೈದಿಕ ಮತಾನುಯಾಯಿಯಾಗಿದ್ದು ಕಾರ್ತಿಕೇಯನ ಭಕ್ತನಾಗಿದ್ದನು. ಈ ಕಾಲದಲ್ಲಿ ವೈದಿಕಮತ ಪ್ರಬಲವಾಗಿತ್ತು. ಆದರೆ ಮುಂದೆ ಬೌದ್ಧಮತವು ಪ್ರಾಮುಖ್ಯಕ್ಕೆ ಬಂದಿತು. ಸೋದರತ್ತೆಯ ಮಗಳನ್ನು ಮದುವೆಮಾಡಿಕೊಳ್ಳುವುದು ರೂಢಿಯಾಗಿತ್ತೆಂಬುದು ಶಾಂತಮೂಲನ ಪುತ್ರ ವೀರಪುರುಷದತ್ತನ ಆಚರಣೆಯಿಂದ ತಿಳಿಯುವುದು. ಈ ದೊರೆಯ ಕುಟುಂಬದ ಸ್ತ್ರೀಯರು ವಿಜಯಪುರಿಯ ಬೌದ್ಧ ಚೈತ್ಯವೊಂದಕ್ಕೆ ದತ್ತಿಗಳನ್ನು ಕೊಟ್ಟರು. ಪಲ್ಲವರ ಆಕ್ರಮಣವಾದಮೇಲೆ ಇಕ್ಷ್ವಾಕುಗಳು ಪದಚ್ಯುತರಾದರು. ಆದರೆ ಸಣ್ಣಪುಟ್ಟ ಅರಸರಾಗಿದ್ದು ಕೊಂಚಕಾಲ ಆಳುತ್ತಿದ್ದರು. ಕರ್ಣಾಟಕದ

ಕೇಕಯರೊಡನೆ ಇವರಿಗೆ ವೈವಾಹಿಕಸಂಬಂಧವಾಗಿದ್ದುದು ಅಜಂತಾ ಶಾಸನದಿಂದ (೫ನೇ ಶತಮಾನ) ತಿಳಿದಿದೆ. ನಯಸೇನನ ಧರ್ಮಾಮೃತದಲ್ಲಿ ಇವರ ಪ್ರಸ್ತಾಪ ಬರುತ್ತದೆ.

ಬೃಹತ್ ಫಲಾಯನರು : ಇವರು ಕ್ರಿ. ಶ. ೩ನೆಯ ಶತಮಾನದ ಕೊನೆಯ ಹೊತ್ತಿಗೆ ಆಂಧ್ರದಮಚಲೀಪಟ್ಟಣದ ಪ್ರದೇಶದಲ್ಲಿ ಆಳುತ್ತಿದ್ದರು. ಜಯವರ್ಮನೆಂಬ ಶಿವಭಕ್ತನೂ ವೈದಿಕ ಮತ ಪೋಷಕನೂ ಆದ ಒಬ್ಬ ದೊರೆಯ ವಿಚಾರವಷ್ಟೇ ಈ ವಂಶದಲ್ಲಿ ತಿಳಿದುಬಂದಿರುವುದು.

ಗುಪ್ತಸಾಮ್ರಾಜ್ಯ

ಭರತಖಂಡದ ಪ್ರಾಚೀನ ಚರಿತ್ರೆಯಲ್ಲಿ ಎಷ್ಟೋ ಅಧಿಕಾರಿಗಳ ಹಾಗೂ ರಾಜವಂಶೀಯರ ಹೆಸರುಗಳು 'ಗುಪ್ತ' ಎಂಬ ಪದದಿಂದ ಕೊನೆಯಾಗಿರುವುದು ತಿಳಿದುಬಂದಿದೆ. ಈ ಹೆಸರಿನ ವ್ಯಾಪಕತೆಯನ್ನು ನೋಡಿದರೆ, ಬೇರೆ ಬೇರೆ ಕಾಲಗಳಲ್ಲಿ ಬೇರೆ ಬೇರೆ ಮನೆತನದವರು ಆ ಅಂಕಿತವನ್ನು ಸ್ವತಂತ್ರವಾಗಿ ಇಟ್ಟುಕೊಳ್ಳುತ್ತಿದ್ದರೆಂದು ತೋರುತ್ತದೆ.

ಭಾರತದ ಈ ಪ್ರಸಿದ್ಧ ರಾಜಮನೆತನದ ಅರಸರ ಅನುಕ್ರಮದಲ್ಲಿ ಮೂರನೆಯವನಾದ ೧ನೆಯ ಚಂದ್ರಗುಪ್ತನು (ಕ್ರಿ. ಶ. ಸುಮಾರು ೩೨೦) ಪ್ರಮುಖನು. ಮೊದಲಲ್ಲಿ ಗಣಿಸಬೇಕಾದವನು. ಈತನು ತನ್ನ ಪ್ರತಾಪದಿಂದಲೂ ಪ್ರಭಾವದಿಂದಲೂ ಮನೆತನದ ಕೀರ್ತಿಯನ್ನು ಬೆಳಗಿದನು. ಈತನು ಲಿಚ್ಛವಿ ಕನ್ಯೆಯನ್ನು ಮದುವೆಯಾಗಿದ್ದು, ಮಹಾರಾಜಾಧಿರಾಜನೆಂಬ ಬಿರುದನ್ನು ಪಡೆದನೆಂಬ ಸಂಗತಿಯ ಹೊರತು ಈತನ ಶೌರ್ಯಪ್ರತಾಪಾದಿಗಳ ಬಗೆಗೆ ವಿಶೇಷ ವಿವರಗಳೇನೂ ದೊರೆಯುವುದಿಲ್ಲ. ಕೆಲವರು ಚರಿತ್ರಕಾರರು ಈತನನ್ನು ಗುಪ್ತ ಶಕೆಯ ಸ್ಥಾಪಕನೆಂಬುದಾಗಿ ತಿಳಿಯುತ್ತಾರೆ. ಚಂದ್ರಗುಪ್ತನ ರಾಜ್ಯವು ಇಂದಿನ ಬಿಹಾರ್ ಮತ್ತು ಉತ್ತರಪ್ರದೇಶದ ಕೆಲವು ಭಾಗಗಳನ್ನು ಒಳಕೊಂಡಿತ್ತೆಂದು ತೋರುತ್ತದೆ. ಈತನು ತನ್ನ ರಾಜ್ಯದ ಉತ್ತರಾಧಿಕಾರಿಯಾಗಿ ಹಲವು ಮಕ್ಕಳಲ್ಲಿ ಸಮುದ್ರಗುಪ್ತನೆಂಬ ಸಮರ್ಥನಾದ ಪುತ್ರನನ್ನು ಆಯ್ಕೆಮಾಡಿದ್ದು ಒಂದು ಮಹತ್ವದ ಸಂಗತಿಯಾಗಿದೆ.

ಗುಪ್ತರ ಚರಿತ್ರೆ ವಿಶದವಾಗಿ ತಿಳಿದು ಬರುವುದು ಸಮುದ್ರಗುಪ್ತನ (ಕ್ರಿ. ಶ. ೩೪೦/೫೦–೩೮೦) ಕಾಲದಿಂದ. ಹರಿಷೇಣ ಕೃತವಾದ ಅಲಹಾಬಾದ್ ಸ್ತಂಭಶಾಸನವು ಆತನನ್ನು ಕುರಿತಾಗಿ ಹಲವು ವಿವರಗಳನ್ನು ಒದಗಿಸುತ್ತದೆ. ಈತನು ದಕ್ಷಯೋಧನೂ ರಾಜನೀತಿಜ್ಞನೂ ಬಹುವಿದ್ಯಾಪಾರಂಗತನೂ ಸಾಹಿತ್ಯ ಸಂಗೀತಜ್ಞನೂ ಆಗಿದ್ದನು. ಈತನ ಕೆಲವು ಚಿನ್ನದ ನಾಣ್ಯಗಳ ಮೇಲೆ ಈತನು ತಂತ್ರೀವಾದ್ಯವನ್ನು ನುಡಿಸುತ್ತಿರುವ ಮುದ್ರೆಯಿದೆ. ಹರಿಷೇಣನು ತನ್ನ ಪ್ರಶಸ್ತಿಲೇಖದಲ್ಲಿ ಈತನನ್ನು ಮಹಾದಾನಿ, ವಿದ್ವಜ್ಜನಪೋಷಕ ಎಂದು ಮುಂತಾಗಿ ಕೀರ್ತಿಸಿದ್ದಾನೆ. ಈತನ ನಾಣ್ಯಗಳು ಕೂಡ ಈತನ ಜೀವನ ಸಾಧನೆಗಳ ವೈವಿಧ್ಯವೈಭವಗಳನ್ನು ತಕ್ಕಮಟ್ಟಿಗೆ ಸೂಚಿಸುತ್ತವೆ. ಸಮುದ್ರಗುಪ್ತನು ಸುಪುಷ್ಟವೂ ಸುಂದರವೂ ಆದ ಉನ್ನತ ದೇಹಾಕೃತಿಯನ್ನು ಉಳ್ಳವನು—ಎಂಬುದನ್ನು ಅವು ಸಾರುತ್ತವೆ. ಈ ಪ್ರಖ್ಯಾತ ಗುಪ್ತ ಚಕ್ರವರ್ತಿಯು ಸಿಲೋನ್ ದೇಶದ ಮೇಘವರ್ಣನ (ಕ್ರಿ. ಶ. ೩೫೨–೩೭೯) ಕೋರಿಕೆಯ ಮೇರೆಗೆ ಆ ದೇಶದ ಯಾತ್ರಿಕರ ಸೌಕರ್ಯಕ್ಕಾಗಿ ಬೋಧಿ ವೃಕ್ಷಕ್ಕೆ ಉತ್ತರದಲ್ಲಿ ಬೌದ್ಧ ವಿಹಾರವನ್ನೂ ವಿಶ್ರಾಮಧಾಮವನ್ನೂ ಕಟ್ಟಿಸಿಕೊಳ್ಳಲು ಅನುಮತಿಯಿತ್ತನು. ಹ್ಯೂಯನ್‌ತ್ಸಾಂಗ್ ಭಾರತಕ್ಕೆ ಬರುವ ವೇಳೆಗೆ ಈ ಬೌದ್ಧವಿಹಾರವು ಸಾವಿರಕ್ಕೆ ಮೇಲ್ಪಟ್ಟು ಸಂನ್ಯಾಸಿಗಳನ್ನುಳ್ಳ ಮಹಾ ಸಂಸ್ಥೆಯಾಗಿ ಪರಿಣಮಿಸಿತ್ತು. ಸಮುದ್ರಗುಪ್ತನ ಸಾಮ್ರಾಜ್ಯದ ಸ್ವರೂಪವನ್ನೂ ವ್ಯಾಪ್ತಿಯನ್ನೂ ಸ್ಪಷ್ಟವಾಗಿಯೂ ಸಮಗ್ರವಾಗಿಯೂ ತಿಳಿಯಲು ನಮಗೆ ಅವಕಾಶವಿದೆ. ಆತನಿಗೆ ಸಕಲಭಾರತ ಸಾಮ್ರಾಜ್ಯದ ಧ್ಯೇಯವಿದ್ದುದರಿಂದ ಅನೇಕ ಸಣ್ಣಪುಟ್ಟ ಸಂಸ್ಥಾನಗಳನ್ನು ಅಳಿಸಿಹಾಕಿ ಮಹಾ ಸಾಮ್ರಾಜ್ಯವನ್ನು ರೂಪಿಸಿದನು. ಆದರೆ ಆತನು ತನ್ನ ನೇರವಾದ ಆಡಳಿತದ ಏಕೈಕ ಸೂತ್ರದಿಂದ ಭಾರತವನ್ನೆಲ್ಲ ತಾನೇ ಒಗ್ಗೂಡಿಸಿ ಹದ್ದಿನಲ್ಲಿಟ್ಟುಕೊಳ್ಳಲು ಹೋಗದೆ ಕೇಂದ್ರದಲ್ಲಿ ಪ್ರಬಲವಾದ ಅಧಿಕಾರವನ್ನು ಭದ್ರಪಡಿಸಿದನು. ಗುಡ್ಡಗಾಡುಗಳ ಗಡಿನಾಡುಗಳ ಸಂಸ್ಥಾನಿಕರನ್ನು ಸ್ವತಂತ್ರವಾಗಿರುವುದಕ್ಕೆ

ಬಿಟ್ಟು ತನಗೆ ಅವರು ವಿಧೇಯರಾಗಿರುವಂತೆಯೂ ಸಾಮ್ರಾಜ್ಯದ ರಕ್ಷಣೆಗೆ ಅವರು ಒದಗುವಂತೆಯೂ ನೋಡಿಕೊಂಡನು. ಒಟ್ಟಿನಲ್ಲಿ ಆತನ ರಾಜನೀತಿಯ ಧೋರಣೆ ಉದಾರವೂ ಚತುರವೂ ಆಗಿದ್ದಿತು. ಆತನು ಕಟ್ಟಿದ ಸಾಮ್ರಾಜ್ಯವು ಹಲವು ವರ್ಷಗಳ ಹಲವು ವಿಜಯೋದ್ಯಮಗಳ ಫಲ.

ಸಮುದ್ರಗುಪ್ತನ ತರುವಾಯದಲ್ಲಿ ಆತನ ಪುತ್ರ ರಾಮಗುಪ್ತನೆಂಬುವನು ರಾಜ್ಯವಾಳಿದನೆಂದು ವಿಶಾಖದತ್ತ ಬಾಣ ಮೊದಲಾದವರ ಸಾಹಿತ್ಯಕ ಉಲ್ಲೇಖಗಳಿಂದ ವಿದ್ವಾಂಸರು ಈಚೆಗೆ ತಿಳಿದಿರುತ್ತಾರೆ. ಇತ್ತೀಚಿನ ಒಂದು ಶಾಸನವು ಈ ವಿಷಯವನ್ನು ಸಮರ್ಥಿಸಿದೆ. ಆದರೆ ಇಷ್ಟು ಪ್ರಮಾಣಗಳಿಂದ ಆತನ ಚರಿತ್ರೆಯನ್ನು ಪುನರ್ರಚಿಸುವುದು ಕಷ್ಟ. ಸಮುದ್ರಗುಪ್ತನ ಇನ್ನೊಬ್ಬ ಮಗ ಇಮ್ಮಡಿ ಚಂದ್ರಗುಪ್ತನು (ಕ್ರಿ. ಶ. ೩೭೬–೪೧೪) ದೇವಗುಪ್ತ, ದೇವರಾಜ ಎಂದು ಮುಂತಾಗಿ ಪರ್ಯಾಯ ನಾಮಗಳನ್ನು ಉಳ್ಳವನು. ಈತನು ವೈಷ್ಣವಧರ್ಮದಲ್ಲಿ ಶ್ರದ್ಧಾಳುವಾಗಿದ್ದು ಪರಮಭಾಗವತನೆಂದು ಕರೆಯಲ್ಪಟ್ಟಿದ್ದಾನೆ. ಈತನೂ ತಂದೆಯಂತೆಯೇ ಸಮರ್ಥನಾಗಿ, ಪಶ್ಚಿಮ ಕ್ಷತ್ರಪರನ್ನು ಅಡಗಿಸಿ ಅವರ ರಾಜ್ಯವನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡನು. ಭರತಖಂಡದ ಅತ್ಯುತ್ತಮ ನಾಟಕಕಾರನೂ ಕವಿಯೂ ಆಗಿರುವ ಕಾಳಿದಾಸನು ಈತನ ಆಸ್ಥಾನದಲ್ಲಿಯೇ ಇದ್ದಿರಬೇಕೆಂದು ಚರಿತ್ರಕಾರರು ಭಾವಿಸಿದ್ದಾರೆ. ಲೌಕಿಕ ಸಂಸ್ಕೃತ ಸಾಹಿತ್ಯವನ್ನು ಅತ್ಯುನ್ನತ ನೆಲೆಗೆ ಮುಟ್ಟಿಸಿದ ಈ ಕವಿ ಗುಪ್ತಯುಗದ ಒಂದು ಮಹೋಜ್ವಲ ರತ್ನ; ಭರತಖಂಡದ ಸಾಹಿತ್ಯದಲ್ಲಿ ಈತನ ಪ್ರಭಾವ ನಿಚ್ಚಳವಾಗಿದೆ. ಚಂದ್ರಗುಪ್ತನ ಮಂತ್ರಿಸಾಮಂತರು ಅಧಿಕಾರಿಗಳು ಸಾಂಚಿಯ ಬೌದ್ಧವಿಹಾರ ಮೊದಲಾದವುಗಳಿಗೆ ದಾನದತ್ತಿಗಳನ್ನು ಕೊಟ್ಟಂತೆ ತಿಳಿಯುವುದು. ಈತನ ಕಾಲದಲ್ಲಿ ಭಾರತದ ವಾಣಿಜ್ಯವೂ ಸಂಸ್ಕೃತಿಯೂ ಪಶ್ಚಿಮದ ಸಂಪರ್ಕವನ್ನು ಬೆಳೆಸಿಕೊಂಡವು. ಈತನು ನಾಗರು ವಾಕಾಟಕರು ಕದಂಬರು ಮೊದಲಾದವರೊಡನೆ ವೈವಾಹಿಕಸಂಬಂಧವನ್ನು ಬೆಳೆಸಿದ್ದು ರಾಜ್ಯರಕ್ಷಣೆಯ ದೃಷ್ಟಿಯಿಂದ ಕುಶಲನೀತಿಯೆನ್ನಬಹುದು. ಚೀನಾ ಯಾತ್ರಿಕನಾದ ಫಾಹಿಯಾನನು ಈತನ ರಾಜ್ಯದಲ್ಲಿ ಹಲವು ವರ್ಷಗಳ ಕಾಲ ಸುತ್ತಾಡಿ ಅಂದಿನ ಸಂಸ್ಕೃತಿ ನಾಗರಿಕತೆಗಳಿಗೆ ಸಂಬಂಧಪಟ್ಟ ಹಲವು ಸಂಗತಿಗಳನ್ನು ತಿಳಿಸಿದ್ದಾನೆ. ತಂದೆ ಮಕ್ಕಳಿಬ್ಬರ ಕಾಲದಲ್ಲಿಯೂ ಕಲೆ ಸಾಹಿತ್ಯಗಳು ಅಭಿವೃದ್ಧಿಗೆ ಬಂದು ಗುಪ್ತರ ಕಾಲ ಭಾರತದ ಸ್ವರ್ಣಯುಗವೆನ್ನಿಸಿತು.

ಎರಡನೆಯ ಚಂದ್ರಗುಪ್ತನ ಮಗ ಕುಮಾರಗುಪ್ತನು (ಕ್ರಿ. ಶ. ೪೧೫–೫೫) ತನ್ನ ಅಜ್ಜನಂತೆ ತಾನೂ ಅಶ್ವಮೇಧವನ್ನಾಚರಿಸಿದನು. ಈತನ ಬಳಿಕ ಬಂದ ಸ್ಕಂಧಗುಪ್ತನು (೪೫೫–೬೭) ಹೊರಗಿನಿಂದ ಒದಗಿದ ಪ್ರಬಲವಾದ ವಿಪತ್ತನ್ನು ಎದುರಿಸಿ (ಸುಮಾರು ೪೬೦) ತನ್ನ ಹಿರಿಯರು ಕಟ್ಟಿ ಬೆಳೆಸಿದ ಮಹಾಸಾಮ್ರಾಜ್ಯವನ್ನು ತನ್ನ ಆಳ್ವಿಕೆಯವರೆಗೆ ಉಳಿಸಿಕೊಂಡು ಬಂದನು. ಸ್ಕಂಧಗುಪ್ತನ ತರುವಾಯದಲ್ಲಿ ಆಳಿದ ಗುಪ್ತ ಸಾಮ್ರಾಟರ ವಿಚಾರ ಅಷ್ಟು ಸರಿಯಾಗಿ ತಿಳಿದುಬಂದಿಲ್ಲ. ಸ್ಕಂಧಗುಪ್ತನ ಸೋದರ ಪುರುಗುಪ್ತ, ಆತನ ಪುತ್ರರಾದ ಬುಧಗುಪ್ತ ನರಸಿಂಹಗುಪ್ತರು ಮತ್ತು ಇತರ ಕೆಲವರು ರಾಜ್ಯವಾಳಿದರಾದರೂ ಈ ಕಾಲದಲ್ಲಿ ಸಿಂಹಾಸನಕ್ಕಾಗಿ ಹೋರಾಟ ಅಂತಃಕಲಹ ಇವು ನಡೆದಿದ್ದಂತೆ ತೋರುತ್ತದೆ. ಗುಪ್ತ ಸಾಮ್ರಾಟರಲ್ಲಿ ಬೌದ್ಧಮತದ ಪೋಷಕನೂ ನಲಂದದಲ್ಲಿ ಬುದ್ಧದೇವಾಲಯವನ್ನು ಕಟ್ಟಿಸಿದವನೂ ಆದ ನರಸಿಂಹಗುಪ್ತನೇ ಕೊನೆಯ ಪ್ರಖ್ಯಾತನಾದ ಅರಸು (ಕ್ರಿ. ಶ. ಸುಮಾರು ೫೦೦). ಬುಧಗುಪ್ತನಿಂದ ಮುಂದೆ ಕ್ಷೀಣಿಸುತ್ತ ಹೋದ ಗುಪ್ತಸಾಮ್ರಾಜ್ಯವು ನರಸಿಂಹಗುಪ್ತನ ಮಗ ಮತ್ತು ಮೊಮ್ಮಗ ಕುಮಾರಗುಪ್ತ (III) ಮತ್ತು ವಿಷ್ಣುಗುಪ್ತರ ಕಾಲದಲ್ಲಿ (ಕ್ರಿ.ಶ. ೫೦೦–೫೫೦) ಪೂರ್ತಿಯಾಗಿ ಅಳಿದು ಹೋಯಿತು.

ಗುಪ್ತಕಾಲೀನ ಧಾರ್ಮಿಕ ಸಾಂಸ್ಕೃತಿಕ ಮತ್ತು ಸಾಹಿತ್ಯಕ ಚಟುವಟಿಕೆಗಳು ಅತ್ಯಂತ ಗಮನಾರ್ಹವಾಗಿವೆ. ಚಕ್ರವರ್ತಿಗಳು ತಮ್ಮನ್ನು ಮಹಾರಾಜಾಧಿರಾಜ ಎಂದು ಮುಂತಾಗಿ ಕರೆದುಕೊಳ್ಳುತ್ತಿದ್ದರು. ಪ್ರಜೆಗಳು ಅವರನ್ನು ಸಾಕ್ಷಾತ್ ದೇವತಾಸ್ವರೂಪರನ್ನಾಗಿ ತಿಳಿಯುತ್ತಿದ್ದರು. ಚಕ್ರವರ್ತಿಯ ಬಳಿಕ ಯುವರಾಜ ಮಂತ್ರಿ ಮಹಾಬಲಾಧಿಕೃತ ಮಹಾದಂಡನಾಯಕ ಮಹಾಪ್ರತೀಹಾರ ಮುಂತಾದ ಅಧಿಕಾರಿಗಳು ಇರುತ್ತಿದ್ದರು. ಸಂಧಿವಿಗ್ರಹಕ ಎಂಬ ಅಧಿಕಾರಪದ ಕಾಣಿಸಿಕೊಂಡದ್ದು ಗುಪ್ತರ ಕಾಲ

ದಿದ್ದಿತು. ಹಾಗೆಯೇ ಕುಮಾರಾಮಾತ್ಯ ಎಂಬುದು ಕೂಡ. ಕೆಲವು ಅಧಿಕಾರ ಸ್ಥಾನಗಳು ಅಶೋಕನ ಕಾಲದಿಂದ ಬಂದವೇ ಆಗಿದ್ದವೆ. ಕೆಲವೊಮ್ಮೆ ಅವುಗಳ ಹೆಸರುಗಳನ್ನು ಬದಲಾಯಿಸಿಕೊಳ್ಳಲಾಯಿತು. ದೇಶದ ಆಡಳಿತದಲ್ಲಿ ನೆಮ್ಮದಿಯೂ ಭದ್ರತೆಯೂ ನೆಲಸಿದ್ದವೆಂದು ಫಾಹಿಯಾನ್ (ಕ್ರಿ. ಶ. ೪೦೦–೧೧) ಹೇಳಿದ್ದಾನೆ. ಗುಪ್ತರು ಧರ್ಮವ್ಯವಸ್ಥೆಗೂ ವಿದ್ಯೆಗೂ ಪೋಷಕರಾದುದನ್ನು ಉಲ್ಲೇಖಿಸಿದ್ದಾನೆ.

ಗುಪ್ತರಕಾಲದಲ್ಲಿ ಹಿಂದೂಧರ್ಮವು ಪುನರುಜ್ಜೀವಿಸಿತು. ಬಹುಮಂದಿ ಗುಪ್ತ ಚಕ್ರವರ್ತಿಗಳು ವೈದಿಕ ಮತಾನುಯಾಯಿಗಳು, ವೈಷ್ಣವರು. ಸಮುದ್ರಗುಪ್ತನು ಗರುಡಧ್ವಜಾಂಕಿತನು, ವಿಷ್ಣುವಿನ ಅವತಾರವೆಂದೇ ಕರೆಯಲ್ಪಡುತ್ತಿದ್ದವನು. ಇಮ್ಮಡಿ ಚಂದ್ರಗುಪ್ತನು ಭಾಗವತಧರ್ಮದ ನಿಷ್ಠಾವಂತ ಅನುಯಾಯಿ. ಆತನು ಪರಮಭಾಗವತ ಎಂಬ ಬಿರುದನ್ನು ತಳೆದನು. ಆತನ ಅನಂತರದವರು ಆ ಬಿರುದನ್ನು ಬಳಸಿಕೊಂಡರು. ವೈಷ್ಣವ ಧರ್ಮವು ಆಗತಾನೇ ಅಭಿವೃದ್ಧಿಗೆ ಬರುತ್ತಿದ್ದಿತು. ಚಂದ್ರಗುಪ್ತನ ಪುತ್ರಿ ಪ್ರಭಾವತೀ ಗುಪ್ತೆ 'ಅತ್ಯಂತ ಭಗವದ್‌ಭಕ್ತೆ' ಎನ್ನಿಸಿದಳು. ಶ್ರೀರಾಮನ ಆರಾಧಕಳಾಗಿದ್ದಳು. ಗುಪ್ತರ ಕಾಲದಲ್ಲಿ ವಿಷ್ಣುವಿನ ದಶಾವತಾರಗಳಲ್ಲಿ ಒಂದಾದ ವರಾಹಾವತಾರದ ಮೂರ್ತಿ ಪೂಜೆ ಹೆಚ್ಚು ವ್ಯಾಪಕವಾಗಿದ್ದಿತು. ಅಲ್ಲದೆ ವಾಮನ, ಗಜೇಂದ್ರಮೋಕ್ಷ, ಕೃಷ್ಣನ ಗೋವರ್ಧನಗಿರಿ ಧಾರಣ—ಇಂತಹ ಪೌರಾಣಿಕ ಕಲ್ಪನೆಗಳೂ ಶಿಲ್ಪದಲ್ಲಿ ಮೂರ್ತಿವೆತ್ತಿದ್ದವು. ವಿಷ್ಣುವಿನ ನಾನಾ ಅವತಾರಗಳನ್ನು ಅವುಗಳ ಪೌರಾಣಿಕ ಕಲ್ಪನೆ ಮತ್ತು ಆಧ್ಯಾತ್ಮಿಕ ಧ್ಯೇಯಗಳಿಗನುಸಾರವಾಗಿ ಶಿಲ್ಪಿಗಳು ಕೆತ್ತಬಲ್ಲವರಾಗಿದ್ದರು. ರಾಮಾಯಣ ಭಾಗವತಗಳ ಪೌರಾಣಿಕ ಕಥೆಗಳು ಕೂಡ ಕೌಶಲದಿಂದ ದೇವಘರ್‌ನ ದೇವಾಲಯದಲ್ಲಿ ಕೆತ್ತಲ್ಪಟ್ಟಿವೆ. ವಿಷ್ಣುಪತ್ನಿಯಾಗಿ ಲಕ್ಷ್ಮಿಯ ಪೂಜೆಯೂ ಈ ಕಾಲದಲ್ಲಿ ಪ್ರಾಶಸ್ತ್ಯ ಗಳಿಸಿತು.

ಗುಪ್ತರ ಆಳ್ವಿಕೆಯ ಕಾಲದಲ್ಲಿ ಹಿಂದೂಧರ್ಮದ ಬೇರೆ ಬೇರೆ ಶಾಖೆಗಳು ಬೆಳೆದು ಬಲಗೊಂಡಂತೆ ಶೈವಧರ್ಮವೂ ಬೆಳೆಯಿತು. ಅರ್ಧನಾರೀಶ್ವರನ ಪೌರಾಣಿಕ ಕಲ್ಪನೆ ಜನಪ್ರಿಯವಾಯಿತು. ನಗೋಡ್ ಪ್ರಾಂತದಲ್ಲಿಯ ಭೂಮರದಲ್ಲಿ ಮತ್ತು ಕೋಹ್‌ನಲ್ಲಿ ಶಿವದೇವಾಲಯಗಳು ನಿರ್ಮಾಣವಾದವು. ಅಜಯ್‌ಘರ್ ಜಿಲ್ಲೆಯ ನಛನ-ಕುಠರದಲ್ಲಿ ಪಾರ್ವತೀದೇವಾಲಯ ಕಟ್ಟಲ್ಪಟ್ಟಿತು. ಶಿವಲಿಂಗಗಳ ಮತ್ತು ಅರ್ಧನಾರೀಶ್ವರರ ಪ್ರತಿಕೃತಿಗಳ ನಿರ್ಮಾಣದಲ್ಲಿ ವೈಶಿಷ್ಟ್ಯಪೂರ್ಣವಾದ ಸೌಂದರ್ಯ ಸಮ್ಮಿಳಿತವಾಯಿತು. ಕುಮಾರಗುಪ್ತನ ಕಾಲದಲ್ಲಿ (೪೧೫–೫೫) ಸ್ಕಂಧಪೂಜಾಪಂಥವು ಆತನ ಪೋಷಣೆ ಪಡೆದಂತೆ ಕಾಣುತ್ತದೆ. ಮಗನಿಗೆ ಸ್ಕಂಧನೆಂಬುದಾಗಿ ಆತನು ಹೆಸರಿಟ್ಟುದಲ್ಲದೆ ತನ್ನ ನಾಣ್ಯಗಳ ಮೇಲೆ ನವಿಲಿನ ಮುದ್ರೆಯನ್ನು ಹಾಕಿಸಿದನು. ಕಾಳಿದಾಸ ಭಾರವಿಯರು ಈ ಕಾಲದಲ್ಲಿ ಶೈವಭಕ್ತಿಪರವಾದ ಕಾವ್ಯಗಳನ್ನು ರಚಿಸಿದರು. ಹಾಗೆಯೇ ಶೈವ ಪರವಾದ ಪುರಾಣಗಳೂ ರಚನೆಯಾದವು

ಶಾಸನಾಧಾರಗಳಿಂದ ಗುಪ್ತರ ಕಾಲದಲ್ಲಿ ಸೂರ್ಯಪೂಜೆಯೂ ತಕ್ಕಮಟ್ಟಿಗೆ ಜನಪ್ರಿಯವಾಗಿತ್ತೆಂದು ತಿಳಿಯುವುದು. ಕುಮಾರಗುಪ್ತ ಮೊದಲಾದವರ ಕಾಲದಲ್ಲಿ ಸೂರ್ಯದೇವಾಲಯಗಳು ನಿರ್ಮಾಣವಾದವು. ಅವುಗಳಿಗೆ ದಾನಪತ್ರಗಳನ್ನು ಕೊಟ್ಟ ಉಲ್ಲೇಖಗಳು ದೊರೆಯುತ್ತವೆ.

ಬಹುಮಂದಿ ಗುಪ್ತರ ಚಕ್ರವರ್ತಿಗಳು ವೈಷ್ಣವರಾದರೂ ಮತಾಂಧರಾಗಿರಲಿಲ್ಲ. ಉಳಿದ ಮತಗಳ ಬಗೆಗೆ ಅವರು ಉದಾರವಾದ ನೀತಿಯನ್ನು ತಳೆದವರಾಗಿದ್ದರು. ಅವರ ಕೈಕೆಳಗಿನ ಅಧಿಕಾರಿಗಳು ಬೌದ್ಧ ಮೊದಲಾದ ಬೇರೆ ಬೇರೆ ಮತಧರ್ಮಗಳಿಗೆ ಸೇರಿದವರಾಗಿರುತ್ತಿದ್ದರು. ಅವರಲ್ಲಿ ಒಬ್ಬಾತನು ಇಮ್ಮಡಿ ಚಂದ್ರಗುಪ್ತನ ಕಾಲದಲ್ಲಿ ಆತನ ಆಧ್ಯಾತ್ಮಿಕ ಶ್ರೇಯಸ್ಸಿಗಾಗಿ ಸಾಂಚಿಯ ಬೌದ್ಧ ಸಂಸ್ಥೆಯೊಂದಕ್ಕೆ ದತ್ತಿಕೊಟ್ಟಿದ್ದ ವಿಚಾರ ತಿಳಿದುಬಂದಿದೆ. ಗುಪ್ತರ ಕಾಲದಲ್ಲಿ ಬೌದ್ಧಧರ್ಮಕ್ಕೆ ಸಂಬಂಧಪಟ್ಟಂತೆ ಉತ್ತಮ ಸಾಹಿತ್ಯವು ಶ್ರೇಷ್ಠ ಲೇಖಕರಿಂದ ರಚಿತವಾಯಿತು. ಬೌದ್ಧ ವಿಹಾರಗಳೂ ಸ್ತೂಪಗಳೂ ನಿರ್ಮಾಣವಾದವು. ನಲಂದದ ವಿಶ್ವವಿದ್ಯಾನಿಲಯವು ಬೌದ್ಧ ವಿದ್ಯಾಕೇಂದ್ರವಾಗಿದ್ದು ಕೂಡ ಹಿಂದೂ ಗುಪ್ತದೊರೆಗಳಿಂದ ತುಂಬ ಉದಾರವಾದ ಪೋಷಣೆಯನ್ನು ಪಡೆಯಿತು. ಗುಪ್ತರ ಕಾಲದ ವಿಶಿಷ್ಟಶೈಲಿಯ ಬುದ್ಧವಿಗ್ರಹಗಳು ಸಾರನಾಥದ ಸುತ್ತುಮುತ್ತಿನಲ್ಲಿ ದೊರೆತಿವೆ. ಬುದ್ಧ ಮತ್ತು ಬೋಧಿಸತ್ವರ ವಿಗ್ರಹಗಳು ಹಳೆಯ ಶೈಲಿಯಿಂದ ಭಿನ್ನವಾದ ವೈಶಿಷ್ಟ್ಯ ಸೌಂದರ್ಯಗಳಿಂದ ಕೂಡಿ

ಉತ್ತರಕಾಲೀನ ಮೂರ್ತಿ ನಿರ್ಮಾಣಕ್ಕೆ ಮಾರ್ಗದರ್ಶಕವಾದವು. ಈಚಿನ ಗುಪ್ತದೊರೆಗಳಲ್ಲಿ ಒಬ್ಬನಾದ ವಿನಯಗುಪ್ತನು ತಾನು ಸ್ವತಃ ಶೈವನಾಗಿಯೂ ವೈವರ್ತಿಕ ಸಂಘವೆಂಬ ಮಹಾಯಾನ ಬೌದ್ಧ ಸಂಸ್ಥೆಯೊಂದಕ್ಕೆ ದತ್ತಿ ಬಿಟ್ಟನು. ಹೀಗಿದ್ದು ಕೂಡ ಗುಪ್ತ ಸಾಮ್ರಾಜ್ಯಕಾಲದಲ್ಲಿ ಬೌದ್ಧ ಮತ್ತು ಜೈನ ಧರ್ಮಗಳು ವೈದಿಕ ಧರ್ಮ ಗಳಿಸಿದ ಪ್ರಾಶಸ್ತ್ಯ ಪ್ರಾಬಲ್ಯಗಳನ್ನು ಗಳಿಸದೆ ಹೋದವೆಂಬುದು ಸ್ಪಷ್ಟ. ಆ ಕಾಲದ ನಾಟಕಗಳಲ್ಲಿನ ಶುದ್ಧ ವೈದಿಕ ಸಂಪ್ರದಾಯದ ಬ್ರಾಹ್ಮಣರು ಬೌದ್ಧ ಮತ್ತು ಜೈನಯತಿಗಳ ವಿಚಾರದಲ್ಲಿ ತೋರಿಸುತ್ತಿದ್ದ ತಾತ್ಸಾರದ ಸೂಚನೆಗಳು ದೊರೆಯುತ್ತವೆ. ಜೈನ ಧರ್ಮವು ಮಧ್ಯಮವರ್ಗದ ಜನಸಮುದಾಯದಲ್ಲಿ ಅನುಸರಣೆಯಲ್ಲಿದ್ದಿತೆಂಬುದಾಗಿ ಮಥುರ ಉದಯಗಿರಿ ಕಕುಭ ಮೊದಲಾದೆಡೆಗಳಲ್ಲಿಯೂ ಗುಪ್ತಕಾಲೀನ ಶಾಸನಗಳಿಂದ ತಿಳಿದುಬರುತ್ತದೆ. ಆದರೆ ಜೈನಧರ್ಮಕ್ಕೆ ಅಷ್ಟಾಗಿ ರಾಜಾಶ್ರಯವಿದ್ದಂತೆ ತೋರುವುದಿಲ್ಲ.

ಒಟ್ಟಿನಲ್ಲಿ ಗುಪ್ತರ ಕಾಲದಲ್ಲಿ ಧಾರ್ಮಿಕವಾಗಿ ವೈದಿಕ ಮತ್ತು ಅವೈದಿಕಮತಗಳಲ್ಲಿಯೂ ಹಿಂದೂ ಧರ್ಮದ ವಿವಿಧ ಶಾಖೆಗಳಲ್ಲಿಯೂ ಮೈತ್ರಿ ಸಾಮರಸ್ಯಗಳು ನೆಲಸಿದ್ದವು. ಬೇರೆ ಬೇರೆ ಸಂಪ್ರದಾಯಗಳಿಗೆ ಸೇರಿದ ಅರಸರೂ ಅಧಿಕಾರಿಗಳೂ ಉಳಿದ ಸಂಪ್ರದಾಯಗಳ ವಿಚಾರದಲ್ಲಿ ವಿಶ್ವಾಸವುಳ್ಳವರೂ ಉದಾರಿಗಳೂ ಆಗಿರುತ್ತಿದ್ದರು. ವೈದಿಕಯಜ್ಞಯಾಗಾದಿಗಳು ಉತ್ಸಾಹದಿಂದ ಆಚರಿಸಲ್ಪಡುತ್ತಿದ್ದವು—ಎಂಬುದು ವಿಶದವಾಗುತ್ತದೆ.

ಕಲೆಗಳು: ನಾನಾ ಮುಖಗಳಲ್ಲಿ ಕಲೆಯು ಬೆಳವಣಿಗೆಯನ್ನೂ ನೈಪುಣ್ಯವನ್ನೂ ಸಿದ್ಧಿಯನ್ನೂ ಪ್ರಕಟಿಸಿತು. ಕಲೆ ಸಾಹಿತ್ಯ ಸಂಸ್ಕೃತಿಗಳಲ್ಲಿ ಉಂಟಾದ ಪ್ರಗತಿಯ ದೃಷ್ಟಿಯಿಂದಲೂ ಗುಪ್ತರ ಕಾಲವು ಭಾರತದ ಸ್ವರ್ಣಯುಗವೆಂಬ ಹೆಸರಿಗೆ ತಕ್ಕದ್ದಾಗಿದೆ. ಉತ್ತರ ಭಾರತವನ್ನೆಲ್ಲ ಆ ಕಾಲದ ಕಲಾತ್ಮಕ ಮತ್ತು ವೈಶಿಷ್ಟ್ಯಪೂರ್ಣ ಸ್ಮಾರಕಗಳು ವ್ಯಾಪಿಸಿವೆ. ಬಹುಕಾಲದವರೆಗೆ ಭಾರತೀಯ ಸಂಸ್ಕೃತಿಯ ಮೇಲೆ ಪ್ರಭಾವವನ್ನು ಮನಗಾಣಬಹುದಾಗಿದೆ. ಗುಪ್ತಕಾಲೀನ ಕಲಾಪ್ರತಿಭೆಯನ್ನು ವಾಸ್ತುಶಿಲ್ಪ. ವಿಗ್ರಹಶಿಲ್ಪ. ಚಿತ್ರಕಲೆ. ಕುಂಭಕಲೆ. ನಾಣ್ಯರಚನೆ—ಮುಂತಾದ ಪ್ರಕಾರಗಳಲ್ಲಿ ನಾವು ಗುರುತಿಸಬಹುದಾಗಿದೆ. ಈ ಕಾಲದಲ್ಲಿ ಭಾರತೀಯ ವಾಸ್ತುಶಿಲ್ಪವು ಹೊಸ ಶಕೆಯನ್ನೇ ಸಾರಿತು. ದಾರುಕರ್ಮದ ಕಟ್ಟಡ ನಿರ್ಮಾಣವು ಮರೆಯಾಗಿ ಇಟ್ಟಿಗೆ ಕಲ್ಲುಗಳ ಕಟ್ಟಡದಿಂದ ದೇವಾಲಯಗಳು ನಿರ್ಮಾಣವಾಗತೊಡಗಿದವು. ವಾಸ್ತುಶಿಲ್ಪದ ಶೈಲಿಯಲ್ಲಿ ಹೊಸತನ ಕಾಣಿಸಿಕೊಂಡಿತು. ತಿಗವಾ. ನಗೋದ್. ಅಜಯ್‌ಘರ್. ದೇವಘರ್—ಮೊದಲಾದ ಕಡೆಗಳ ದೇವಾಲಯಗಳು ಕಲ್ಲಿನಲ್ಲಿ ಕಟ್ಟಿದವು. ಇಮ್ಮಡಿ ಚಂದ್ರಗುಪ್ತನ ಕಾಲದ ಕ್ರಿ. ಶ. ೪೦೧ ಎಂಬ ಶಾಸನತೇದಿಯಿರುವ ಉದಯಗಿರಿಯ ಗುಹಾಂತರ ದೇವಾಲಯವು ಭಾರತದಲ್ಲಿಯೇ ಕಾಲನಿರ್ದೇಶನವಿರುವ ಅತ್ಯಂತ ಪ್ರಾಚೀನ ಹಿಂದೂ ದೇವಾಲಯವಾಗಿದೆ. ಪ್ರಸಿದ್ಧವಾದ ಗುಪ್ತಶೈಲಿಯ ವಿಗ್ರಹಶಿಲ್ಪಕಲೆಯು ಸಾರನಾಥದಲ್ಲಿ ಅತ್ಯುಚ್ಚಸ್ಥಿತಿಯಲ್ಲಿದ್ದಿತು. ಹಿಂದಿನ ಶಿಲ್ಪಕಲೆಯಲ್ಲಿ ವೈಯಕ್ತಿಕತೆಯೊಡನೆ ನೈತಿಕದೃಷ್ಟಿ ಕೂಡ ಬೆರೆತಿರುವುದು ಕಾಣುತ್ತದೆ. ಬೃಹತ್ ರೂಪವೂ ಅಂತಃಸತ್ತ್ವವೂ ಉಚಿತವಾಗಿ ಸಮ್ಮಿಳನಗೊಂಡಿರುವುದನ್ನು ಆ ಕಾಲದ ಬುದ್ಧನ ಶ್ರೇಷ್ಠ ವಿಗ್ರಹಗಳಲ್ಲಿ ಕಾಣಬಹುದು. ಇಂತಹ ವಿಗ್ರಹ ಶಿಲ್ಪ ಮುಂದಿನ ಕಾಲಕ್ಕೆ ಸ್ಫೂರ್ತಿದಾಯಕವಾಯಿತು. ವಿಶಾಲ ಭಾರತವನ್ನೇ ವ್ಯಾಪಿಸಿತು. ಅಂದಿನ ಶಿಲ್ಪಿಗಳಿಗೆ ಶಿಲ್ಪಸೂತ್ರಗಳ ಉಚಿತವಾದ ತಿಳಿವಳಿಕೆಯಿದ್ದುದು ಕಂಡುಬರುತ್ತದೆ.

ಗುಪ್ತಕಾಲೀನ ಕುಶಲಕಲೆಗಳಲ್ಲಿ ಕುಂಭಕಲೆಯು ಅತಿ ಮನೋಜ್ಞವಾದುದು. ಅದರ ನಯನುಣುಪುಗಳು ನಾನಾರೀತಿಯ ಕುಸುರಿಕೆಲಸಗಳು ಆಸ್ವಾದ್ಯಕರವಾದವು. ರಾಜಘಾಟ್ ನಗರವು ಆ ಕಾಲದ ಸಣ್ಣಪುಟ್ಟ ಕಲೆಗಳ ಸ್ಥಿತಿಯನ್ನು ಚೆನ್ನಾಗಿ ತಿಳಿಸಿಕೊಡುವ ಕ್ಷೇತ್ರವಾಗಿದೆ. ಕೌಶಾಂಬಿಯು ನಾಣ್ಯಗಳು. ಟೆರ್ರಾಕೊಟ್ಟ ಮೂರ್ತಿಗಳ ಪ್ರಾಣಿಮುದ್ರೆಗಳು ವಿಶೇಷವಾಗಿ ದೊರೆತ ಸ್ಥಳವಾಗಿದೆ. ಬಂಗಾಳ. ಪಂಜಾಬು. ಕಾಶ್ಮೀರ ಮುಂತಾದ ಸಂಸ್ಥಾನಗಳ ಹಲವು ನಗರಗಳಲ್ಲಿ ಗುಪ್ತಕಾಲೀನ ನಾಗರಿಕತೆಯ ಅವಶೇಷಗಳು ಕಂಡುಬಂದಿವೆ. ನಳಂದಾ, ವೈಶಾಲಿ, ಅಹಿಚ್ಛತ್ರ—ಮುಂತಾದವು ಆ ಕಾಲದ ಪ್ರಸಿದ್ಧ ನಗರಗಳಾಗಿವೆ. ಈ ಕಾಲದಲ್ಲಿ ಚಿತ್ರಕಲೆಯ ಸಿದ್ಧಾಂತ ಮತ್ತು ತಂತ್ರಗಳ ಬಗೆಗೆ

ಕೂಡ ತೀವ್ರವಾದ ವಿಚಾರ ನಡೆದಂತೆ ತೋರುತ್ತದೆ. ಗುಪ್ತಕಾಲೀನ ರಚನೆಯಾದ ವಿಷ್ಣು ಧರ್ಮೋತ್ತರ ಪುರಾಣದಲ್ಲಿ ಒಂದು ಅಧ್ಯಾಯ ಪೂರ್ತಿಯಾಗಿ ಈ ಕಲೆಯ ವಿಚಾರ ಬಂದಿದೆ. ಅಜಂತಗುಹೆಗಳ ಭಿತ್ತಿಚಿತ್ರಗಳಲ್ಲಿ ಬಾಘ್‌ಗುಹೆಗಳಲ್ಲಿ ಚಿತ್ರಕಲೆಯ ಅತ್ಯುಚ್ಚ ಸಿದ್ಧಿಯನ್ನು ಕಾಣಬಹುದು. ಆ ಕಾಲದ ಚಿನ್ನದ ಮತ್ತು ಬೆಳ್ಳಿಯ ನಾಣ್ಯಗಳ ಟಂಕದ ಸೊಗಸು ಕಲೆಗಾರಿಕೆಯನ್ನು ನೋಡಿದರೆ ಅಂದಿನ ಸ್ವರ್ಣಕಾರರು ಉತ್ತಮ ದರ್ಜೆಯಲ್ಲಿ ಅಲಂಕಾರದ ಆಭರಣಗಳನ್ನು ಮಾಡುತ್ತಿದ್ದರೆಂದು ಭಾವಿಸಬಹುದಾಗಿದೆ.

ಸಾಮಾಜಿಕ ಸ್ಥಿತಿಗತಿಗಳು: ಚಾತುರ್ವರ್ಣ್ಯದ ಕಟ್ಟುಪಾಡು. ಕೆಲವು ಅಪವಾದಗಳಿರುತ್ತಿದ್ದರೂ, ಸಾಮಾನ್ಯವಾಗಿ ಚೆನ್ನಾಗಿ ಪಾಲಿತವಾಗುತ್ತಿದ್ದಿತು. ವೃತ್ತಿಗಳ ಆಯ್ಕೆಯಲ್ಲಿ ಸ್ವಾತಂತ್ರ್ಯವಿತ್ತು. ಅಂತರ್ಜಾತೀಯ ವಿವಾಹಗಳು ರೂಢಿಯಲ್ಲಿದ್ದವು. ಬ್ರಾಹ್ಮಣರಿಗೆ ಸಮಾಜದಲ್ಲಿ ಉನ್ನತ ಸ್ಥಾನಮಾನಗಳು ದೊರೆತಿದ್ದವು. ವಿದೇಶೀಯರು ಕ್ಷತ್ರಿಯರಲ್ಲಿಗಣ್ಯ ಮಾಡಲ್ಪಡುತ್ತಿದ್ದರು. ಚಂಡಾಲರು ಕಟುಕರು ಮೊದಲಾದವರು ಊರಿನ ಹೊರಗೆ ವಾಸಿಸುತ್ತಿದ್ದರು. ಅವರನ್ನು ಅಸ್ಪೃಶ್ಯರಂತೆ ಕಾಣಲಾಗುತ್ತಿತ್ತು. ದಾಸ್ಯಪ್ರವೃತ್ತಿಯೂ ಅಸ್ತಿತ್ವದಲ್ಲಿದ್ದುದಕ್ಕೆ ಸಾಹಿತ್ಯಕ ಆಧಾರಗಳಿವೆ. ವಿವಾಹದ ವಿಷಯದಲ್ಲಿ ಹಳೆಯ ಸ್ಮೃತಿಗಳ ಅನುಶಾಸನಗಳೇ ಸಾಮಾನ್ಯವಾಗಿ ಅಂಗೀಕೃತವಾಗಿದ್ದವು. ಕುಲೀನ ಮನೆತನದ ಮತ್ತು ಆಶ್ರಮವಾಸದ ಬಾಲಿಕೆಯರು ಪುರಾಣೇತಿಹಾಸಗಳ ಅಧ್ಯಯನವನ್ನು ಮಾಡುತ್ತಿದ್ದರು. ಕವಿತೆಗಳನ್ನು ಅರ್ಥಮಾಡಿಕೊಳ್ಳಲೂ ಕಟ್ಟಲೂ ಬಲ್ಲವರಾಗಿದ್ದರು. ನೃತ್ಯಗೀತಾದಿಗಳಲ್ಲಿ ಅಭಿಜ್ಞರಾಗಿರುತ್ತಿದ್ದರು. ವಿಧವೆಯರು ಸ್ಮೃತಿಯಲ್ಲಿ ಉಕ್ತವಾದ ರೀತಿಯಲ್ಲಿ ನಿಷ್ಕಳಂಕವೂ ವ್ರತನಿಷ್ಠವೂ ಆದ ಜೀವನವನ್ನು ನಡಸುತ್ತಿದ್ದರು. ಒಟ್ಟಿನಲ್ಲಿ ಕೆಲವು ವಿಶೇಷ ಸೌಕರ್ಯಗಳು ಕಲ್ಪಿತವಾದರೂ ಸ್ತ್ರೀಯರ ಸ್ಥಿತಿಗತಿಗಳು ಎಂದಿನಂತೆಯೇ ಗುಪ್ತರ ಕಾಲದಲ್ಲಿಯೂ ಮುಂದುವರಿಯಿತು.

ಜನಜೀವನದ ಸಾಂಸಾರಿಕ ಸ್ಥಿತಿಯು ಹಿಂದಿನ ಶತಾಬ್ದಗಳಂತೆಯೇ ಉತ್ತಮವಾಗಿದ್ದಿತು. ಉನ್ನತ ಅಂತಸ್ತಿನ ಸ್ತ್ರೀಪುರುಷರು ಶ್ರೇಷ್ಠರೀತಿಯ ವಸ್ತ್ರವಿಭೂಷಣಾದಿಗಳನ್ನು ಧರಿಸುತ್ತಿದ್ದರು. ಗಂಧಾನುಲೇಪನಾದಿಗಳನ್ನೂ ತೈಲಗಳನ್ನೂ ಬಳಸುತ್ತಿದ್ದರು. ನಗರಗಳು ವೈಭವಪೂರ್ಣವೂ ಸಂಪತ್ಸಮೃದ್ಧವೂ ಆಗಿದ್ದು ನಾಗರಿಕಜೀವನ ಉಲ್ಲಾಸಕರವಾಗಿದ್ದಿತು.

ಆ ಕಾಲದ ಶಿಕ್ಷಣಪದ್ಧತಿಯನ್ನೂ ಗುರುಶಿಷ್ಯ ಸಾಮರಸ್ಯವನ್ನೂ ಹುಯನ್‌ತ್ಸಾಂಗ್ ಮತ್ತು ಇತ್ಸಿಂಗ್ ಅವರ ಬರೆವಣಿಗೆಗಳಿಂದ ತಿಳಿಯಬಹುದಾಗಿದೆ. ಮಗಧದ ನಲಂದೆ ಬೌದ್ಧಧರ್ಮದ ಒಂದು ಪ್ರಖ್ಯಾತ ಶಿಕ್ಷಣ ಕೇಂದ್ರವಾಗಿತ್ತು. ಇಲ್ಲಿಗೆ ದೇಶ ವಿದೇಶಗಳಿಂದ ಅಧ್ಯಯನಕ್ಕೆ ಅಭ್ಯಾಸಿಗಳು ಬರುತ್ತಿದ್ದರು. ಕಾಠೇವಾಡದ ವಲ್ಲಭಿಯ ವಿದ್ಯಾಕೇಂದ್ರವೂ ಪ್ರಸಿದ್ಧವಾಗಿತ್ತು. ವೇದವೇದಾಂಗಗಳೂ ಇತಿಹಾಸಪುರಾಣಗಳೂ ಕಲೆಗಳೂ ಶಾಸ್ತ್ರಗಳೂ ಅಭ್ಯಾಸ ವಿಷಯಗಳಾಗಿದ್ದವು.

ಗುಪ್ತಕಾಲೀನ ಆರ್ಥಿಕಸ್ಥಿತಿಗಳು ಉತ್ತಮವಾಗಿದ್ದವು. ಚೀನೀ ಯಾತ್ರಿಕರ ಬರೆವಣಿಗೆಗಳಲ್ಲಿಯೇ ಈ ಸಂಗತಿಗಳೂ ಬರುತ್ತವೆ. ಕೃಷಿ ವಿಧಾನಗಳು ವೈಜ್ಞಾನಿಕವಾಗಿದ್ದು ಕೃಷಿಯ ಉತ್ಪನ್ನಗಳು ವಿವಿಧವೂ ವಿಪುಲವೂ ಆಗಿರುತ್ತಿದ್ದವು. ನೇಗಾರಿಕೆ ತುಂಬ ಅಭಿವೃದ್ಧಿಸ್ಥಿತಿಯಲ್ಲಿದ್ದಿತು. ಶ್ರೇಷ್ಠವಾದ ರೇಶ್ಮೆಯ ಮತ್ತು ನೂಲಿನ ಬಗೆಬಗೆಯ ವಸ್ತ್ರಗಳ ಉಲ್ಲೇಖಗಳು ಸಾಹಿತ್ಯಕ ಮತ್ತು ಇತರ ಆಧಾರಗಳಲ್ಲಿ ದೊರೆಯುತ್ತವೆ. ಭಾರತವು ಆ ಕಾಲದಲ್ಲಿ ಸ್ವದೇಶೀಯ ಮತ್ತು ವಿದೇಶೀಯ ವಾಣಿಜ್ಯ ವ್ಯವಹಾರಗಳನ್ನು ಇಟ್ಟುಕೊಂಡಿದ್ದಿತು. ಆಕಾಲದ ವಾಣಿಜ್ಯ ಶ್ರೇಣಿಗಳ ಚಟುವಟಿಕೆಗಳನ್ನು ತಿಳಿಸುವ ನಿದರ್ಶನಗಳು ಕೆಲಮಟ್ಟಿಗೆ ಕಂಡುಬರುತ್ತವೆ.

ಗುಪ್ತಕಾಲೀನ ಮತ್ತು ಗುಪ್ತೋತ್ತರ ಕಾಲೀನ ಉತ್ತರ ಭಾರತ(ಕ್ರಿ.ಶ. ೪೦೦-೬೦೦):

ಎರಡು ಶತಮಾನಗಳ ಹಿಂದಿನಿಂದ ಮಾಳ್ವ ಗುಜರಾತ್ ಕಾಠೇವಾಡ ಪ್ರದೇಶಗಳನ್ನು ಆಳಿಕೊಂಡು ಬಂದಿದ್ದ ಪಶ್ಚಿಮ ಸತ್ರಪರು ಕ್ರಿ. ಶ. ೪ನೆಯ ಶತಮಾನದಲ್ಲಿ ಅಧಿಕಾರದ ಹಸ್ತಾಂತರಗಳು

ಸಿಂಹಾಸನಕ್ಕಾಗಿ ಆಂತರಿಕ ಹೋರಾಟಗಳು ಇವುಗಳ ನಡುವೆ ತೊಳಲಾಡುತ್ತಿದ್ದು, ಸಮುದ್ರಗುಪ್ತನ ಮಗ ಇಮ್ಮಡಿ ಚಂದ್ರಗುಪ್ತನ ಪ್ರಾಬಲ್ಯದಿಂದ ಆತನ ರಾಜ್ಯವಿಸ್ತರಣೆಯ ಕಾಂಕ್ಷೆಯಿಂದ ಪೂರ್ತಿಯಾಗಿ ಅಡಗಿಹೋದರು.

ಕುಷಾಣರ ಕೊನೆಯ ಪ್ರಖ್ಯಾತ ರಾಜನಾದ ವಾಸುದೇವನ ಬಳಿಕ ಕಾಬೂಲ್ ಕಣಿವೆಯಲ್ಲಿ ಆಳುತ್ತಿದ್ದ ಉತ್ತರ ಕಾಲೀನ ಕುಷಾಣರು ಸಸ್ಸೇನಿಯ ದೊರೆಗಳ ಅತಿಕ್ರಮಣಕ್ಕೆ ಗುರಿಯಾಗಿ ಕ್ರಿ. ಶ. ೫ನೆಯ ಶತಮಾನದ ಮಧ್ಯಭಾಗದಲ್ಲಿ ಹೂಣರಿಂದ ನಾಶಿಸಲ್ಪಟ್ಟಿತು. ಪ್ರಾಯಃ ಅವರೊಡನೆಯೇ ಬೆರೆತು ಹೋದಂತೆ ತೋರುತ್ತದೆ.

ಐದನೆಯ ಶತಮಾನದ ಕೊನೆಗೆ ಕುಮಾರಗುಪ್ತನ ಪುತ್ರ ಸ್ಕಂದಗುಪ್ತನ ತಡೆಯನ್ನು ಲಕ್ಷಿಸಿ ಭಾರತಕ್ಕೆ ನುಗ್ಗಿಬಂದ ಸಾಹಸಿಗಳೂ ಕ್ರೂರಿಗಳೂ ಆದ ಹೂಣರಲ್ಲಿ ತೋರಮಾಣನೂ ಆತನ ಪುತ್ರ ಮಿಹಿರ ಕುಲನೂ (ಕ್ರಿ. ಶ. ಸುಮಾರು ೫೧೫) ಗುಪ್ತಸಾಮ್ರಾಜ್ಯಕ್ಕೆ ಹಾಗೂ ಬೌದ್ಧಧರ್ಮಕ್ಕೆ ಬಹಳವಾಗಿ ಹಾನಿಯನ್ನುಂಟುಮಾಡಿದಂತೆಯೂ ಆದರೆ ಮಾಳ್ವದೇಶದ ನಾಯಕನಾದ ಯಶೋಧರ್ಮನಿಂದಲೂ (ಕ್ರಿ. ಶ. ೫೩೦-೪೦) ಗುಪ್ತ ದೊರೆ ನರಸಿಂಹಗುಪ್ತ ಬಾಲಾದಿತ್ಯನಿಂದಲೂ ಹೂಣರ ಪ್ರಭಾವ ಅಳಿದು ಹೋದಂತೆಯೂ ತಿಳಿಯುತ್ತದೆ.

ಇದು ಗುಪ್ತಕಾಲೀನ ಮನೆತನಗಳ ಮಾತಾಯಿತು. ಇನ್ನು ಗುಪ್ತಸಾಮ್ರಾಜ್ಯವು ಅಳಿಯುತ್ತಿದ್ದಂತೆ ಭಾರತವು ಸಣ್ಣಪುಟ್ಟ ರಾಜ್ಯಗಳಾಗಿ ಒಡೆದು ಹೋಯಿತು ಎಂಬುದು ಅಂದಿನ ರಾಜಕೀಯ ಚರಿತ್ರೆಯಿಂದ ತಿಳಿಯುವುದು. ಇವರಲ್ಲಿ ಮೈತ್ರಕರು ಕಲಚೂರಿಗಳು ಗುರ್ಜರರು ಮುಖಾರಿಗಳು ಮೊದಲಾದವರು ಗಣ್ಯರು. ಕ್ರಿ. ಶ. ೭ನೆಯ ಶತಮಾನದ ಆದಿಭಾಗದಲ್ಲಿ ಹರ್ಷವರ್ಧನನು ಭಾರತವನ್ನು ಒಗ್ಗೂಡಿಸುವವರೆಗೆ ಭಾರತದ ರಾಜಕೀಯರಂಗದಲ್ಲಿ ಐಕ್ಯವಿರಲಿಲ್ಲ.

ಕ್ರಿ. ಶ. ೫ನೆಯ ಶತಮಾನದ ಕೊನೆಯ ಭಾಗದಿಂದ ೮ನೆಯ ಶತಮಾನದ ಕೊನೆಯ ಭಾಗದ ವರೆಗೆ ವಲ್ಲಭಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಮೈತ್ರಕರು ರಾಜ್ಯವಾಳುತ್ತಿದ್ದರು. ಈ ವಂಶದ ಶೀಲಾದಿತ್ಯನು ದಕ್ಷ ಆಡಳಿತಗಾರನೂ ದಯಾವಂತನೂ ಬೌದ್ಧಧರ್ಮದ ಪೋಷಕನೂ ಆಗಿದ್ದನೆಂಬುದು ಹ್ಯೂಯೆನ್‌ತ್ಸಾಂಗನ ಬರೆಹದಿಂದ ತಿಳಿಯುವುದು. ಹರಿಚಂದ್ರನೆಂಬ ಬ್ರಾಹ್ಮಣನು ಶಸ್ತ್ರಪರಿಗ್ರಹವನ್ನು ಕೈಕೊಂಡು ಕ್ರಿ. ಶ.ದ ೬ನೆಯ ಶತಮಾನದ ಮಧ್ಯಭಾಗದಲ್ಲಿ ಗುರ್ಜರರಾಜ್ಯವನ್ನು ರಾಜಪುತಾನದಲ್ಲಿ ಸ್ಥಾಪಿಸಿದನು. ಇವರ ಒಂದು ಶಾಖೆಯು ಜೋದ್‌ಪುರದ ಮಾಂಡವ್ಯಪುರ ಮತ್ತು ಮೇಡಂತಕಗಳಲ್ಲಿಯೂ ಇನ್ನೊಂದು ಶಾಖೆಯು ಬ್ರೋಚ್ ಪ್ರಾಂತದ ನಾಂದೀಪುರಿಯಲ್ಲಿಯೂ ಆಳುತ್ತಿದ್ದರು. ಭರತಖಂಡದ ಪ್ರಾಚೀನರಾಜವಂಶದವರಾದ ಮುಖಾರಿಗಳು ಕ್ರಿ. ಶ. ೬ನೆಯ ಶತಮಾನದಲ್ಲಿ ಗಯಾದ ಸುತ್ತುಮುತ್ತಿನ ಪ್ರದೇಶಗಳನ್ನು ಆಳುತ್ತಿದ್ದರು. ಈ ವಂಶದ ಎರಡು ಶಾಖೆಗಳವರೂ ಮೊದಲಲ್ಲಿ ಗುಪ್ತರಿಗೆ ಸಾಮಂತರಾಗಿದ್ದು ಕೆಲಕಾಲಕ್ಕೆ ಎರಡನೆಯ ಶಾಖೆಯು ಈಶಾನವರ್ಮ (ಸುಮಾರು ೫೫೦-೭೬) ನೆಂಬವನ ಕಾಲಕ್ಕೆ ಪ್ರಬಲಿಸಿತು. ಆದರೆ ಈತನು ಮುಂದೆ ಉತ್ತರಕಾಲೀನ ಗುಪ್ತರಿಂದ ಪರಾಜಿತನಾದ್ದರಿಂದ ಅವರ ಪ್ರಭಾವ ತಗ್ಗಿತು. ಈತನ ಬಳಿಕ ಕೆಲವರು ಆಳಿದರಾದರೂ ಅವರ ವಿಚಾರ ಖಚಿತವಾಗಿ ತಿಳಿದಿಲ್ಲ. ಉತ್ತರ ಕಾಲೀನ ಗುಪ್ತರೂ ಒಂದು ಕಾಲಕ್ಕೆ ಗುಪ್ತಸಾಮ್ರಾಟರಿಗೆ ಸಾಮಂತರಾಜರೇ ಆಗಿದ್ದವರು. ಮುಖಾರಿಗಳು ಸ್ವಾತಂತ್ರ್ಯವನ್ನು ಸಾರಿದ ಕಾಲದಲ್ಲಿಯೇ ಇವರೂ ಸ್ವಾತಂತ್ರ್ಯವನ್ನು ಸಾರಿದರು. ಮಾಳವ ಮಗಧಗಳನ್ನು ಆಳಿದರು. ಇವರಲ್ಲಿ ಕುಮಾರಗುಪ್ತ ಮತ್ತು ಮಾಧವಗುಪ್ತ ಎಂಬ ಇಬ್ಬರು ಇತಿಹಾಸಪ್ರಸಿದ್ಧರಾದ ಗುಪ್ತಸಾಮ್ರಾಟರ ಖ್ಯಾತಿಯನ್ನು ಪುನರುಜ್ಜೀವಿಸಲು ಪ್ರಯತ್ನಿಸಿದರೆಂದು ಹೇಳಬಹುದು. ಹೀಗೆಯೇ ಗುಪ್ತ ಸಾಮ್ರಾಜ್ಯ ಸಣ್ಣಪುಟ್ಟ ಸಂಸ್ಥಾನಗಳಾಗಿ. ವಿಭಾಗವಾಗಿ. ಆ ಸಾಮ್ರಾಜ್ಯದ ಅವಶೇಷಗಳ ಮೇಲೆ ನಿರ್ಮಾಣವಾದ ಇನ್ನೂ ಕೆಲವು ರಾಜಮನೆತನಗಳು ಕ್ರಿ. ಶ. ೭ನೆಯ ಶತಮಾನದಲ್ಲಿ ಬಂಗಾಳ. ನೇಪಾಳ. ಅಸ್ಸಾಂ ಮತ್ತು ಒರಿಸ್ಸಾಗಳಲ್ಲಿ ಆಳುತ್ತಿದ್ದವೆಂದು ಹೇಳಬಹುದು.

ಗುಪ್ತಕಾಲೀನ ದಕ್ಖನ್ (ದಕ್ಷಿಣಾಪಥ) (ಕ್ರಿ.ಶ. ೩೨೦–೫೪೦) :

ವಾಕಾಟಕರು: ಗುಪ್ತರ ಕಾಲದಲ್ಲಿ ದಕ್ಖನಿನಲ್ಲಿ ನಾನಾ ಅರಸುಮನೆತನಗಳು ಅಸ್ತಿತ್ವದಲ್ಲಿದ್ದವು. ಇವುಗಳಲ್ಲಿ ಪ್ರಬಲರೂ ಪ್ರಸಿದ್ಧರೂ ಆಗಿದ್ದವರೆಂದರೆ ವಾಕಾಟಕರು, ಇದರ ಮೂಲಶಾಖೆಯು ೧ನೆಯ ಪ್ರವರಸೇನನ ಮೊಮ್ಮಗ ರುದ್ರಸೇನನಿಂದ (ಸು. ೩೩೫–೩೬೦) ಮುಂದುವರಿಯಿತು; ವತ್ಸಗುಲ್ಮದ ಶಾಖೆಯು ಪ್ರವರಸೇನನ ಮಗ ಸರ್ವಸೇನನಿಂದ (ಸು. ೩೩೦–೩೫೫) ಆರಂಭವಾಯಿತು. ಮೂಲ ಶಾಖೆಗೆ ಸೇರಿದ ರುದ್ರಸೇನನೂ ಆತನ ಮಗ ಪೃಥಿವೀಷೇಣನೂ (ಸು. ೩೬೦–೩೮೫) ಶೈವರಾಗಿದ್ದು, ರುದ್ರಸೇನನು ಮಹಾಭೈರವನ ಉಪಾಸಕನೂ ಪೃಥಿವೀಷೇಣನು ಮಹೇಶ್ವರನ ಉಪಾಸಕನೂ ಆಗಿದ್ದರು. ಪೃಥಿವೀಷೇಣನು 'ಧರ್ಮವಿಜಯಿ'ಯೆನಿಸಿ ಖ್ಯಾತನಾಗಿದ್ದ ಪರಮಸಾತ್ತ್ವಿಕ ವ್ಯಕ್ತಿ. ಈತನ ಪುತ್ರ ರುದ್ರಸೇನನು (೨) (ಸು. ೩೮೫–೩೯೦) ಗುಪ್ತಚಕ್ರವರ್ತಿ ಇಮ್ಮಡಿ ಚಂದ್ರಗುಪ್ತನ ಪುತ್ರಿ ಪ್ರಭಾವತೀ ಗುಪ್ತೆಯನ್ನು ವರಿಸಿದ್ದುದರಿಂದ ಅವರ ಪ್ರಭಾವದಿಂದಲೋ ಏನೋ ವಿಷ್ಣುಭಕ್ತನಾಗಿದ್ದನು. ಈತನ ಪುತ್ರ ಪ್ರವರಸೇನನು (೨) (ಸು ೪೧೦–೪೪೦) ರಾಜ್ಯದ ಆಡಳಿತ ನಿರ್ವಾಹಕರನ್ನಾಗಿ 'ಸೇನಾಪತಿ' ಗಳೆಂಬ ಅಧಿಕಾರಿಗಳನ್ನು ನಿಯಮಿಸಿದ್ದರಿಂದಲೂ ಕಾವ್ಯಕರ್ತೃವೆಂಬುದರಿಂದಲೂ ಗಣನಾರ್ಹನಾಗಿದ್ದಾನೆ. ಅಲ್ಲದೆ ಈತನು ತನ್ನ ಒಬ್ಬ ಮಗನಿಗೆ–ನರೇಂದ್ರಸೇನನೆಂಬ ಪುತ್ರನಿಗೆ–ಕುಂತಲರಾಜಪುತ್ರಿಯೊಬ್ಬಳನ್ನು, ಅಜಿತಭಟ್ಟಾರಿಕೆಯೆಂಬವಳನ್ನು, ತಂದುಕೊಂಡನೆಂಬುದರಿಂದ ಕರ್ಣಾಟಕದ ಚರಿತ್ರೆಯಲ್ಲಿಯೂ ಈತನ ಉಲ್ಲೇಖಕ್ಕೆ ಕಾರಣವಿದೆ. ಈ ಕನ್ಯೆಯು ಕದಂಬ ಕಾಕುತ್ಸ್ಥವರ್ಮನ ಮಗಳಾಗಿರಬೇಕೆಂಬುದಾಗಿ ಆತನ ತಾಳಗುಂದ ಶಾಸನದ ಆಧಾರದ ಮೇಲೆ ಕೆಲವರು ಊಹಿಸಿರುತ್ತಾರೆ. ಏಕೆಂದರೆ ಅಲ್ಲಿ ಗುಪ್ತ ಮೊದಲಾದ ಮನೆತನಗಳೊಡನೆ ಕಾಕುತ್ಸ್ಥವರ್ಮನು ವೈವಾಹಿಕ ಸಂಬಂಧವನ್ನು ಬೆಳೆಸಿದನೆಂಬ ಮಾತು ಬರುತ್ತದೆ. ಆಗ್ಗೆ ಗುಪ್ತರನ್ನು ಬಿಟ್ಟರೆ ಅವರಿಗೆ ಎರಡನೆಯವರಾಗಿ ಪ್ರಖ್ಯಾತರಾಗಿದ್ದವರೆಂದರೆ ವಾಕಾಟಕರು.

ಡುಬ್ರಾಯಿಲರು. ವಾಕಾಟಕವಂಶವನ್ನು ಕ್ರಿ.ಶ. ೩ ರಿಂದ ೬ನೆಯ ಶತಮಾನದವರೆಗೆ ದಕ್ಖನಿನಲ್ಲಿ ಆಳಿದಂತಹ ರಾಜಮನೆತನಗಳಲ್ಲಿಯೇ ಅತಿಶಯ ಗೌರವಾನ್ವಿತವಾದುದೆಂದೂ ಅತ್ಯುಚ್ಚ ನಾಗರಿಕತೆ ಯಿಂದ ಬಾಳಿದುದೆಂದೂ ಕೀರ್ತಿಸಿದ್ದಾರೆ. ಅವರ ಕಾಲದಲ್ಲಿ ಕಲೆ ಸಾಹಿತ್ಯಗಳಿಗೆ ಒಳ್ಳೆಯ ಪೋಷಣೆ ದೊರೆಯಿತು. ಮೂಲ ಶಾಖೆಯ ದಿವಾಕರಸೇನನದೆನ್ನಲಾದ ಕೆಲವು ಪದ್ಯಗಳು ಶ್ರೀಧರದಾಸನ 'ಸದುಕ್ತಿ ಕರ್ಣಾಮೃತ'ದಲ್ಲಿ ದೊರೆಯುತ್ತವೆ. ಆತನ ಸೋದರ ಇಮ್ಮಡಿ ಪ್ರವರಸೇನನು ಮಹಾ ರಾಷ್ಟ್ರೀ ಪ್ರಾಕೃತದಲ್ಲಿರುವ 'ಸೇತುಬಂಧ' (ರಾವಣವಹೋ) ಎಂಬ ಕಾವ್ಯದ ಕರ್ತೃವಾಗಿ ಗಣಿಸಲ್ಪಟ್ಟಿ ದ್ದಾನೆ. ಇದನ್ನು ಕಾಳಿದಾಸ ಮಹಾಕವಿಯು ತಿದ್ದಿರುವನೆಂದು ತಿಳಿಯುವುದು. ಇಲ್ಲಿ ರಾಮಾಯಣದ ಯುದ್ಧ ಕಾಂಡದ ಕಥೆ ಬಂದಿದೆ. ಈ ಕಾವ್ಯವನ್ನು ಈಚೆಗೆ ದಂಡಿಯು ಕಾವ್ಯದರ್ಶದಲ್ಲಿಯೂ ಬಾಣನು ಹರ್ಷ ಚರಿತದಲ್ಲಿಯೂ ಶ್ಲಾಘಿಸಿದ್ದಾರೆ. ಈತನ ಆಸ್ಥಾನದಲ್ಲಿಯೇ ಕಾಲಿದಾಸನು ಕೆಲಕಾಲವಿದ್ದು ಕೃತಿರಚನೆ ಯಲ್ಲಿ ದೊರೆಗೆ ನೆರವಾಗಿರಬಹುದೆಂದೂ ತನ್ನ 'ಮೇಘದೂತ' ಕಾವ್ಯವನ್ನು ರಚಿಸಿರಬಹುದೆಂದೂ ಕೆಲವರು ತಿಳಿಯುತ್ತಾರೆ. ವತ್ಸಗುಲ್ಮಶಾಖೆಯ ಸ್ಥಾಪಕನಾದ ಸರ್ವಸೇನನು ಹರಿವಿಜಯವೆಂಬ ಪ್ರಾಕೃತಕಾವ್ಯವೊಂದರ ಕರ್ತೃವೆಂದು ತಿಳಿಯಲಾಗಿದೆ. ಈ ಕೃತಿ ಈಗ ಉಪಲಬ್ಧವಿಲ್ಲ. ಈಚಿನ ಸಂಸ್ಕೃತ ಕವಿಗಳಿಂದ ಇದರ ವಿಚಾರ ಸ್ವಲ್ಪಮಟ್ಟಿಗೆ ತಿಳಿದಿದೆ. ವಿದರ್ಭದ ವಾಕಾಟಕರ ಆಸ್ಥಾನದಲ್ಲಿಯೇ ಸಂಸ್ಕೃತ ಕಾವ್ಯಗಳ ವೈದರ್ಭೀರೀತಿಯು ರೂಪುಗೊಂಡಿತೆಂದು ಹೇಳುತ್ತಾರೆ. ಇನ್ನು ಕಲಾದೃಷ್ಟಿಯಿಂದಲೂ ವಾಕಾಟಕರ ಹೆಸರು ಸ್ಮರಣೀಯವಾಗಿದೆ. ಅವರ ಕಾಲದ ವಾಸ್ತುಶಿಲ್ಪದ ಮಹತ್ವವನ್ನು ಜಬ್ಬಲ್ಪುರ ಜಿಲ್ಲೆಯ ತಿಗೋವಾ ಮತ್ತು ನಗೋಡ್ ಪ್ರಾಂತದ ನಚನಾಗಳ ದೇವಾಲಯಗಳಲ್ಲಿ ಕಾಣಬಹುದಾಗಿದೆ. ನಚನಾ ದೇವಾಲಯವು ಇಮ್ಮಡಿ ಪೃಥ್ವೀಸೇನನ ಸಾಮಂತ ವ್ಯಾಘ್ರದೇವನಿಂದ ನಿರ್ಮಿತವಾದುದು. ಭಾರತದ ಶ್ರೇಷ್ಠ ಭಿತ್ತಿಚಿತ್ರಗಳನ್ನೊಳಗೊಂಡ ಅಜಂತಾದ ಕೆಲವು ಗವೆಗಳು (೧೬, ೧೭, ೧೯). ಇವು ವತ್ಸಗುಲ್ಮ ಬೌದ್ಧ ಕಲೆಯ ಅತ್ಯುತ್ತಮ ಮಾದರಿಗಳೆಂದು ಫರ್ಗುಸನ್‌ರಿಂದ ಕೀರ್ತಿತವಾಗಿದೆ. ಶಾಖೆಯ ಹರಿಷೇಣನ (ಸು. ೪೭೫–೫೦೦) ಸಚಿವ ಸಾಮಂತರುಗಳಿಂದ ನಿರ್ಮಾಣವಾದಂತೆ ತಿಳಿಯು ವುದು.

ನಳವಾಡಿವಿಷಯದ ನಳರು. ಭೋಟಕರಾಜ್ಯ (ಬೀರಾರ್ ಪ್ರಾಂತ)ದ ಭೋಜರು. ಅಪರಾಂತದ (ಉತ್ತರಕೊಂಕಣ) ತ್ರೈಕೂಟಕರು. ಅನೂಪವಿಷಯದ ಕಳಚುರಿಗಳು—ದಕ್ಷಿಣಭಾರತದ ನಡುನೆಲೆಯಲ್ಲಿಯೂ ಪಶ್ಚಿಮದಲ್ಲಿಯೂ ಈ ಕಾಲದಲ್ಲಿ ಆಳುತ್ತಿದ್ದಂತೆಯೂ ಇವುಗಳಲ್ಲಿ ಕೆಲವು ಮನೆತನಗಳು ಆದೇ ತಾನೇ ಪ್ರವರ್ಧಮಾನಕ್ಕೆ ಬರುತ್ತಿದ್ದ ಚಾಲುಕ್ಯರೊಡನೆ ಹೋರಾಟಕ್ಕೆ ಗುರಿಯಾದಂತೆಯೂ ತಿಳಿಯುತ್ತದೆ. ಪೂರ್ವ ದಕ್ಷಿಣದಲ್ಲಿ. ಆಂಧ್ರದೇಶವನ್ನು ಈ ಕಾಲದಲ್ಲಿ ಆಳುತ್ತಿದ್ದ ಮನೆತನಗಳೆಂದು ತಿಳಿದುಬಂದವುಗಳಲ್ಲಿ. ಆನಂದಗೋತ್ರೋದ್ಭವರಾದ ಆನಂದರು ಗುಂಟೂರು ಸುತ್ತುಮುತ್ತಿನಲ್ಲಿಯೂ. ಶಾಲಂಕಾಯನರು ವೆಂಗಿಯಲ್ಲಿಯೂ. ವಿಷ್ಣುಕುಂಡಿಗಳು ಶ್ರೀಶೈಲಪ್ರಾಂತದಲ್ಲಿಯೂ ಇರುತ್ತಿದ್ದರು. ಇವರು ವೈದಿಕಧರ್ಮವನ್ನು ಚೆನ್ನಾಗಿ ಪೋಷಿಸುತ್ತಿದ್ದು ಬಲುಮಟ್ಟಿಗೆ ಶೈವಮತಾನುಯಾಯಿಗಳಾಗಿದ್ದರು. ಅಗ್ನಿಷ್ಟೋಮ ಅಶ್ವಮೇಧಾದಿ ಯಜ್ಞಗಳು ಆಗ ನಡೆಯುತ್ತಿದ್ದುವೇ ಅಲ್ಲದೆ ಕೆಲವು ಅರಸರು ಹಿರಣ್ಯಗರ್ಭಾದಿ ಮಹಾದಾನಗಳನ್ನು ಕೂಡ ಮಾಡಿದಂತೆ ತಿಳಿಯುವುದು. ವಿಷ್ಣುಕುಂಡಿಗಳ ಮನೆತನದ ೧ನೆಯ ಮಾಧವವರ್ಮ ಜನಾಶ್ರಯನು (ಕ್ರಿ. ಶಕ. ಸುಮಾರು ೫೩೫-೫೮೫) ವಿದ್ವತ್ತಿನ ಪೋಷಕನಾಗಿದ್ದನು. ಜನಾಶ್ರಯಿಯೆಂಬ ಛಂದೋಗ್ರಂಥವು ಈತನ ಆಸ್ಥಾನದಲ್ಲಿಯೇ ರಚಿಸಲ್ಪಟ್ಟು ಈತನ ಅಂಕಿತದಲ್ಲಿಯೇ ಪ್ರಕಟವಾಗಿದೆ. ಇನ್ನು ಕಲಿಂಗ ರಾಜ್ಯದಲ್ಲಿ ಖಾರವೇಲನಿಂದ ಖ್ಯಾತಿಗೆ ಬಂದ ಮಹಾಮೇಘವಾಹನ ಮನೆತನದ ಸಾಮ್ರಾಜ್ಯದ ಒಕ್ಕೂಟ ಕೆಟ್ಟು ಸಣ್ಣಪುಟ್ಟ ಸಂಸ್ಥಾನಗಳಾಗಿ ಅವುಗಳಲ್ಲಿ ಪಿತೃಭಕ್ತರು ಮಾಠರರು ಮುಂತಾದವರು ಆಳುತ್ತಿದ್ದರು. ಈ ಕಾಲದಲ್ಲಿಯೇ ಗಣನೆಗೆ ಬರತಕ್ಕವರು ಪೂರ್ವಗಂಗರು. ಇವರು ಪ್ರಾಯಃ ತಲಕಾಡಿನ ಗಂಗರ ಒಂದು ಶಾಖೆಗೆ ಸೇರಿದವರಾಗಿದ್ದು ಕಲಿಂಗ ನಗರ (ಮುಖಲಿಂಗ): ಮತ್ತು ದಂತಪುರ (ಶ್ರೀಕಾಕುಳಂನ ದಂತವಕ್ತ್ರ)ಗಳಲ್ಲಿ ಆಳ್ವಿಕೆ ನಡಸುತ್ತಿದ್ದರು. ಪಶ್ಚಿಮಘಟ್ಟಗಳ ಮಹೇಂದ್ರಗಿರಿಯ ಗೋಕರ್ಣೇಶ್ವರನು ಇವರ ಆರಾಧ್ಯದೈವ. ದಕ್ಷಿಣಕೋಸಲವು ಶರಭಪುರೀಯ ಮತ್ತು ಪಾಂಡುವಂಶೀಯರೆಂಬವರ ಕೈಯಲ್ಲಿತ್ತು.

ಕ್ರಿ. ಶ. ೬ನೆಯ ಶತಮಾನದ ಮಧ್ಯಭಾಗದಿಂದ ೮ನೆಯ ಶತಮಾನದವರೆಗೆ ಕರ್ಣಾಟಕದ ವಿಸ್ತಾರವಾದ ಪ್ರದೇಶವನ್ನು ಪ್ರಬಲವಾಗಿ ಆಳಿದ ಬಾದಾಮಿಚಾಲುಕ್ಯರು ಕನ್ನಡನಾಡಿನ ರಾಜಕೀಯ ಚರಿತ್ರೆಯಲ್ಲಿಯೂ ಸಾಂಸ್ಕೃತಿಕ ಚರಿತ್ರೆಯಲ್ಲಿಯೂ ವಿಶೇಷ ಉಲ್ಲೇಖನಕ್ಕೆ ಅರ್ಹರಾಗಿದ್ದಾರೆ.

ಹರ್ಷವರ್ಧನ (ಕ್ರಿ.ಶ. ೬೧೨-೬೪೭):

ಕ್ರಿ. ಶ. ೬ನೆಯ ಶತಮಾನವನ್ನು ಭಾರತದ ಚರಿತ್ರೆಯಲ್ಲಿ ಒಂದು ಅಂಧಕಾರಯುಗವೆಂಬುದಾಗಿ ಚರಿತ್ರಕಾರರು ತಿಳಿಯುತ್ತಾರೆ. ಗುಪ್ತ ಸಾಮ್ರಾಜ್ಯವು ಒಡೆದು ಸಣ್ಣಪುಟ್ಟ ಸ್ವತಂತ್ರರಾಜ್ಯಗಳು ಮೇಲೆದ್ದವು. ಕೇಂದ್ರದಲ್ಲಿ ಒಂದು ಪ್ರಬಲವಾದ ಅಧಿಕಾರ ಶಕ್ತಿಯಿಲ್ಲದೆ ವಿದೇಶೀಯರ ಆಕ್ರಮಣಗಳು ನಡೆದವು. ರಾಷ್ಟ್ರಕ್ಕೆ ಅದು ವಿಪತ್ಕಾರಿಯಾದುದೇ ಅಲ್ಲದೆ ಗುಪ್ತಕಾಲೀನ ನಾಗರಿಕತೆಯ ಉಳಿಕೆಗಳು ಅಳಿದುಹೋಗುವಂತಾಯಿತು. ಕ್ರಿ. ಶ. ೭ನೆಯ ಶತಮಾನದ ಆದಿಭಾಗದಲ್ಲಿ ಪಟ್ಟವೇರಿದ ಪುಷ್ಯಭೂತಿರಾಜನ ವಂಶದ ಹರ್ಷವರ್ಧನನು ವಿಭಜಿತರಾಜ್ಯಗಳನ್ನು ಮತ್ತೆ ಒಗ್ಗೂಡಿಸಿ ಪ್ರಬಲವಾದ ಸಾಮ್ರಾಜ್ಯವನ್ನು ಕಟ್ಟಿದ್ದು. ದೇಶದಲ್ಲಿ ಶಾಂತಿಸುಭಿಕ್ಷೆಗಳು ನೆಲಸುವಂತಾಯಿತು. ಆತನ ದಕ್ಷ ಆಡಳಿತದ ಅವಧಿಯಲ್ಲಿ ದೇಶದಲ್ಲಿ ಐಕ್ಯಗೂಡಿದುದೇ ಅಲ್ಲದೆ ಸಾಹಿತ್ಯ ಸಂಸ್ಕೃತಿಗಳು ಕೂಡ ಸಂವರ್ಧನೆಗೊಂಡವು.

ಹರ್ಷವರ್ಧನನು ಉದಿಸಿದ ಸ್ಥಾಣೇಶ್ವರ (ಥಾನೇಶ್ವರ)ದ ಅರಸೊತ್ತಿಗೆಯ ವಿಚಾರ ಅಷ್ಟಾಗಿ ತಿಳಿದುಬಂದಿಲ್ಲ. ಬಾಣನ ಹರ್ಷಚರಿತ. ಕೆಲವು ಶಾಸನಗಳು ಮತ್ತು ರಾಜಮುದ್ರೆಗಳು—ಇವುಗಳ ಮೂಲಕವಾಗಿ ಕೆಲವು ಸಂಗತಿಗಳು ತಿಳಿದಿವೆ. ನರವರ್ಧನ ಮಹಾರಾಜನಿಂದ ಮೊದಲುಗೊಂಡು ರಾಜರ ಅನುಕ್ರಮದಲ್ಲಿ ಐದನೆಯವನಾದ ಹರ್ಷವರ್ಧನನು ಪ್ರಭಾಕರವರ್ಧನನ ಮಗ. ರಾಜ್ಯವರ್ಧನನ ಸೋದರ. ಈತನು ಬಾಲ್ಯಕಾಲದಲ್ಲಿಯೇ ಸಾಂಸಾರಿಕಕ್ಲೇಶಗಳಲ್ಲಿ ತೊಳಲಿದಂತೆ ತೋರುತ್ತದೆ. ಹೂಣರನ್ನು ಅಡಗಿಸಲು ಅಣ್ಣನೊಡನೆ ತೆರಳಿದ್ದ ಆತನು ಹಿಂದಿರುಗುವುದರೊಳಗೆ ರುಗ್ಣಾವಸ್ಥೆಯಲ್ಲಿದ್ದ ತಂದೆಯ ಮರಣದ ದುಃಖವನ್ನು ಭರಿಸಬೇಕಾಯಿತು. ಅದರಿಂದ ಚೇತರಿಸಿಕೊಳ್ಳುವಷ್ಟರಲ್ಲಿ

ಸೋದರಿ ರಾಜ್ಯಶ್ರೀಯ ಪತಿಯು ಕೊಲೆಯಾದ ವಾರ್ತೆಯನ್ನು ಕೇಳಬೇಕಾಯಿತು. ಇದರಿಂದ ಆತನ ಮನಸ್ಸು ವಿಶೇಷವಾಗಿ ಆಧ್ಯಾತ್ಮಿಕ ದೃಷ್ಟಿಯನ್ನು ಬೆಳಸಿಕೊಂಡಂತೆ ತೋರುತ್ತದೆ.

ರಾಜ್ಯವರ್ಧನನು ಸೋದರಿಯ ಪತಿ ಕನೌಜಿನ ಗ್ರಹವರ್ಮನನ್ನು ಕೊಲೆಮಾಡಿದ ಮಾಳವ ದೊರೆಯ ಮೇಲೆ ಪ್ರತಿಕಾರವನ್ನು ಕೈಕೊಳ್ಳಲು, ಸೋದರಿಯನ್ನು ಬಂಧನದಿಂದ ಬಿಡಿಸಲು ಸೈನ್ಯ ದೊಡನೆ ಹೋಗಿ, ಶತ್ರುಗಳ ವಂಚನೆಯಿಂದ ತಾನೇ ಕೊಲ್ಲಲ್ಪಟ್ಟನು. ಹರ್ಷವರ್ಧನನು ಸು. ಕ್ರಿ. ಶ. ೬೦೬ (ಅಥವಾ ೬೧೨)ರಲ್ಲಿ ಪಟ್ಟಕ್ಕೆ ಬಂದನು. ಹಾಗೆ ರಾಜ್ಯದ ಅಧಿಕಾರವನ್ನು ಸ್ವೀಕರಿಸುತ್ತಿದ್ದ ಹಾಗೆಯೇ ಮೊದಲು ತನ್ನ ತಂಗಿಯ ಸೆರೆಯನ್ನು ಬಿಡಿಸಿ ಅಣ್ಣನ ಕೊಲೆಗೆ ಪ್ರತಿಕಾರವನ್ನು ಕೈಕೊಂಡನು. ಥಾನೇಶ್ವರದಿಂದ ಕನೌಜಿಗೆ ರಾಜಧಾನಿಯನ್ನು ವರ್ಗಾಯಿಸಿ ಸ್ಥಿರಮನಸ್ಕನಾಗಿ ಸಮಸ್ತಭಾರತದ ದಿಗ್ವಿಜಯವನ್ನು ನಡಸಲು ಸಂಕಲ್ಪಿಸಿದನು. ಆತನ ಸೈನ್ಯಕೀಯ ಸಾಧನೆ ಎಲ್ಲಕಡೆಯೂ ಯಶಸ್ವಿ ಯಾಯಿತೆಂದು ಹೇಳಲಾಗದು. ಆತನು ವಲಭಿ. ಸಿಂಧ್ ಮತ್ತು ಜೊಲ್ರೀಫ್‌ಗಳ ಮೇಲೆ ವಿಜಯಶಾಲಿ ಯಾಗದಿದ್ದರೂ ಆತನ ಪೂರ್ವದಿಕ್ಕಿನ ದಾಳಿಗಳು ಯಶಸ್ವಿಯಾದವು. ಒರಿಸ್ಸಾ, ಪೂರ್ವಬಂಗಾಳ ಮತ್ತು ಮಗಧಗಳು ಆತನ ಸಾಮ್ರಾಜ್ಯದೊಳಗೆ ಸೇರಿದವು. ಹರ್ಷವರ್ಧನನಿಗೂ ಚಾಲುಕ್ಯಚಕ್ರವರ್ತಿ ಇಮ್ಮಡಿಪುಲಿಕೇಶಿಗೂ (೬೧೦–೬೪೨) ನಡೆದ ಸಮರ ಸಂಘಟನೆಯು ಕರ್ಣಾಟಕದ ಚರಿತ್ರೆಯಲ್ಲಿ ಹಾಗೂ ಭಾರತದ ಚರಿತ್ರೆಯಲ್ಲಿ ಗಣ್ಯವಾದುದು. ಈ ವಿಷಯ ಹೂಯನ್‌ತ್ಸಾಂಗನ ಲಿಖಿತಗಳಲ್ಲಿಯೂ ರವಿಕೀರ್ತಿಯ ಐಹೊಳೆಯ ಶಾಸನದಲ್ಲಿಯೂ (ಕ್ರಿ. ಶ. ೬೩೪–೩೫) ಪ್ರಸ್ತಾವಿತವಾಗಿದೆ. ಹರ್ಷನು ಎಷ್ಟೋ ದೇಶಗಳನ್ನು ಗೆದ್ದವನಾದರೂ ಪುಲಿಕೇಶಿಯನ್ನು ಗೆಲ್ಲಲಾರದೆ ಹೋದನು, ಅನೇಕ ದೇಶಗಳಿಂದ ಮಹಾನಾಯಕರನ್ನು ಬರಮಾಡಿಕೊಂಡು ತಾನೇ ಅಗ್ರನಾಯಕನಾಗಿ ಸುಸಜ್ಜಿತಸೈನ್ಯದೊಡನೆ ಅಡಗಿಸು ವುದಕ್ಕೆ ಹೋಗಿಯೂ ಅದು ಇನ್ನೂ ಸಾಧ್ಯವಾಗಿಲ್ಲ—ಎಂಬುದಾಗಿ ಹೂಯನ್‌ತ್ಸಾಂಗ್ ಹೇಳಿದ್ದಾನೆ. 'ಅಪರಿಮಿತವಾದ ವಿಭೂತಿಯಿಂದ ಬಲಿಷ್ಠನಾಗಿ ಮೆರೆಯುತ್ತಿದ್ದ. ಸಾಮಂತರಾಜರ ಸೈನ್ಯದ ಮಕುಟ ಮಣಿಗಳ ಮಯೂಖದಿಂದ ಆಕ್ರಾಂತವಾದ ಪಾದಾರವಿಂದಗಳುಳ್ಳ ಹರ್ಷನು ಭಯಂಕರವಾದ ಗಜ ಸೈನ್ಯದೊಡಗೂಡಿ ಈತನೊಡನೆ (ಪುಲಿಕೇಶಿಯೊಡನೆ) ಯುದ್ಧಮಾಡಿ ತನ್ನ ಗಜ ಸೈನ್ಯವನ್ನು ಕಳೆದು ಕೊಂಡು ಭಯವಿಷಾದಗಳಿಂದ ನಿಸ್ತೇಜನಾಗಿ ವಿಜಯದ ಹರ್ಷವನ್ನೇ ಬಿಟ್ಟನು'—ಎಂಬುದಾಗಿ ಐಹೊಳೆ ಶಾಸನದಲ್ಲಿ ಉಕ್ತವಾಗಿದೆ (ಕ್ರಿ. ಶ. ೬೩೪). ಈ ಯುದ್ಧವು ರೇವಾ (ನರ್ಮದಾ) ನದಿಯ ದಂಡೆಯ ಮೇಲೆ ನಡೆದಂತೆ ಕೆಲವರು ಭಾವಿಸುತ್ತಾರೆ. ಯುದ್ಧ ನಡೆದ ಕಾಲವು ೬೨೦ ರಿಂದ ೬೩೦ರ ನಡುವೆ ತೂಗಾಡುತ್ತಿದೆ. ಪುಲಿಕೇಶಿ ಈ ಯುದ್ಧವಿಜಯದಿಂದ ಪರಮೇಶ್ವರ ಬಿರುದಾಂಕಿತನಾಗಿ ದಕ್ಷಿಣಾಪಥೇಶ್ವರನೆನಿಸಿ ಮೆರೆದನು. ಅಂತೂ ಈ ಪ್ರಸಂಗವು ಹರ್ಷನ ವೀರೋದ್ಯಮಗಳಲ್ಲಿ ಒಂದು ಮಹತ್ವದ ಅಪಜಯವಾಗಿ ಪರಿಣಮಿಸಿದ್ದು ನಿಶ್ಚಯ.

ಹರ್ಷನ ಸಾಮ್ರಾಜ್ಯವು ಉತ್ತರಾಪಥವನ್ನೆಲ್ಲ ವ್ಯಾಪಿಸಿತ್ತೆಂದು ಕೆಲವರು ಭಾವಿಸಿದ್ದಾರೆ. ಇನ್ನು ಕೆಲವರು ಥಾನೇಶ್ವರ ಕನೌಜ್‌ಗಳನ್ನೂ ಪಶ್ಚಿಮ ಪಂಜಾಬ್ ಉತ್ತರಪ್ರದೇಶ ಮಗಧ ಒರಿಸ್ಸಾ ಕೊಂಗಡ —ಇವನ್ನೂ ಮಾತ್ರವೇ ಒಳಕೊಂಡಿತ್ತೆಂದು ತಿಳಿಯುತ್ತಾರೆ. ಹಿಂದೂ ಸಾಮ್ರಾಜ್ಯಾವಧಿಯಲ್ಲಿ ಹರ್ಷನೇ ಕೊನೆಯ ಪ್ರಸಿದ್ಧ ಸಮ್ರಾಟನೆಂದೂ ಮಹಾರಾಜ್ಯ ಸಂಘಟಕನೆಂದೂ ಕೆಲವರು ಅಭಿಪ್ರಾಯಪಡುತ್ತಾರೆ. ಇದನ್ನು ಕೆಲವರು ಒಪ್ಪುವುದಿಲ್ಲ. ಹರ್ಷನು ಕೆಲವು ಅಪಜಯಗಳನ್ನು ಅನುಭವಿಸಿಯೂ ಉತ್ತರ ಭಾರತದಲ್ಲಿ ಪ್ರಬಲವಾದ ಸಾಮ್ರಾಜ್ಯವನ್ನು ಕಟ್ಟಿ ಮಹಾಸಾಮ್ರಾಟನೆನಿಸಿ ಮೆರೆದನೆಂಬುದರಲ್ಲಿ ಅನುಮಾನವಿಲ್ಲ. ಆತನ ಕಾರ್ಯತತ್ಪರತೆ. ನ್ಯಾಯಜ್ಞತೆ. ಸಜ್ಜನವಿಧೇಯತೆ ಮುಂತಾದ ಗುಣಗಳನ್ನು ಹೂಯನ್‌ತ್ಸಾಂಗ್ ಕೀರ್ತಿಸಿದ್ದಾನೆ. ಆತನು ಕನ್ನಡ ಕವಿ ಪಂಪನಂತೆ ಯೋಧನೂ ಕವಿಯೂ ಆಗಿದ್ದನು. ಸಮರಧುರಂಧರನಂತೆ ಶಾಂತಿಪಾಲಕನೂ ಆಗಿದ್ದನು. ರತ್ನಾವಳಿ. ಪ್ರಿಯದರ್ಶಿಕಾ, ನಾಗಾನಂದ ಎಂಬ ನಾಟಕಗಳು ಆತನು ಸ್ವತಃ ರಚಿಸಿದ ಕೃತಿಗಳಾಗಿವೆ. ಆತನು ವಿದ್ಯೆಗೆ ವಿದ್ವಾಂಸರಿಗೆ ಒಳ್ಳೆಯ ಪ್ರೋತ್ಸಾಹ ಕೊಟ್ಟನು. ಆತನ ಆಸ್ಥಾನದಲ್ಲಿ ಬಾಣಭಟ್ಟ ಮಯೂರ ದಿವಾಕರರು ಮುಂತಾದವರಿದ್ದರು. ಬಾಣನು ಹರ್ಷಚರಿತ ಮತ್ತು ಕಾದಂಬರಿಗಳ ಕರ್ತೃವಾಗಿ ಪ್ರಖ್ಯಾತವಾಗಿದ್ದಾನೆ. ಮಯೂರನು ಮಯೂರ

ಶತಕ (ಸೂರ್ಯಶತಕ)ವನ್ನು ಬರೆದಿದ್ದಾನೆ. ದಿವಾಕರನು ಕಲ್ಯಾಣಮಂದಿರ ಸ್ತೋತ್ರದ ಕರ್ತೃ. ಶೀಲಾದಿತ್ಯ (ಹರ್ಷ)ನು ಸಾಹಿತ್ಯದಲ್ಲಿ ಪರಮಾಸಕ್ತನಾಗಿದ್ದನೆಂದು ಇತ್ಸಿಂಗ್ ಹೇಳಿದ್ದಾನೆ.

ಹರ್ಷವರ್ಧನ ಅವಲಂಬಿಸಿದ ಮತಧರ್ಮ ಯಾವುದು ಎಂಬುದನ್ನು ನಿಶ್ಚಿತವಾಗಿ ತಿಳಿಯುವುದು ಕಷ್ಟ. ಶಾಸನಾಧಾರಗಳಿಂದ ರಾಜಮುದ್ರೆಗಳಿಂದ ಹರ್ಷನನ್ನು ಶೈವನಾಗಿದ್ದನೆಂದು ಕೆಲವರು ತಿಳಿಯುತ್ತಾರೆ. ಆದರೆ ಹೂಯನ್‌ತ್ಸಾಂಗ್‌ನ ಲಿಖಿತಗಳಿಂದ ಆತನು ಬೌದ್ಧಮತದ ನಿಷ್ಠಾವಂತ ಅನುಯಾಯಿಯಾಗಿದ್ದನೆಂದು ಭಾವಿಸುವುದಕ್ಕೆ ಅವಕಾಶವಿದೆ. ನಲಂದಾ ವಿಶ್ವವಿದ್ಯಾನಿಲಯಕ್ಕೆ ಆತನು ಪೋಷಕನಾಗಿದ್ದನು. ಅಲ್ಲಿ ಭವ್ಯವಾದ ವಿಹಾರವೊಂದನ್ನು ಕಟ್ಟಿಸಿದುದನ್ನೂ ಕಂಚಿನ ದೇವಾಲಯವೊಂದನ್ನು ನಿರ್ಮಿಸಿದುದನ್ನೂ ಹೂಯನ್‌ತ್ಸಾಂಗ್ ಜೀವಿತ ಚರಿತ್ರೆಯಲ್ಲಿ ಹೇಳಿದೆ. ಆತನು ಕನೌಜಿನಲ್ಲಿ ಸಮಾವೇಶಗೊಳಿಸಿದ ಬೌದ್ಧಧರ್ಮದ ಸಮ್ಮೇಳನವೊಂದರ (ಕ್ರಿ. ಶ. ೬೪೩) ಕುತೂಹಲಕರವಾದ ನಿರೂಪಣೆಯೊಂದನ್ನು ಹೂಯನ್‌ತ್ಸಾಂಗ್ ಕೊಟ್ಟಿರುತ್ತಾನೆ. ಅಲ್ಲಿ ಈ ಸಂದರ್ಭದಲ್ಲಿ ಈ ಚೀನಾದೇಶದ ಯಾತ್ರಿಕನನ್ನು ಹರ್ಷನು ಆತನ ವಿದ್ವತ್ತಿಗಾಗಿಯೂ ಧರ್ಮಶ್ರದ್ಧೆಗಾಗಿಯೂ ಗೌರವಿಸಿದಂತೆಯೂ ತಿಳಿಯುವುದು. ಹೀಗೆ ಹರ್ಷನು ಬೌದ್ಧಧರ್ಮಕ್ಕೆ ಬಹಳ ಪ್ರೋತ್ಸಾಹವನ್ನು ಕೊಟ್ಟರೂ ಇತರ ಪಂಥಗಳ ಬಗೆಗೆ ಸಮನ್ವಯಬುದ್ಧಿಯುಳ್ಳವನಾಗಿದ್ದನು. ಆತನು ಸೂರ್ಯ ಮತ್ತು ಶಿವದೇವಾಲಯಗಳನ್ನು ಕೂಡ ಕಟ್ಟಿಸಿದಂತೆ ತಿಳಿಯುವುದು. ಆಕಾಲದಲ್ಲಿ ಬೌದ್ಧ ಜೈನ ಮತ್ತು ವೈದಿಕಧರ್ಮಗಳು ಸಮರಸತೆಯಿಂದ ಕೂಡಿದ್ದವು.

ರಾಜ್ಯಾದಾಯವು ಸರ್ಕಾರದ ಖರ್ಚುವೆಚ್ಚಗಳಿಗೆ, ಸಾರ್ವಜನಿಕ ಕಾರ್ಯಕರ್ತರ ನಿಧಿಗೆ, ಬೌದ್ಧಿಕವಾಗಿ ಖ್ಯಾತಿವಂತರಾದವರ ಬಹುಮಾನಕ್ಕೆ, ನಾನಾ ಮತಧರ್ಮಗಳ ದಾನದತ್ತಿಗೆ—ಎಂದು ನಾಲ್ಕು ಉದ್ದೇಶಗಳಿಗಾಗಿ ವಿನಿಯೋಗವಾಗುತ್ತಿತ್ತು. ಅಧಿಕ ರಾಜ್ಯಾಡಳಿತ ಪದ್ಧತಿ ಮೊದಲಾದವುಗಳು ಕೆಲಮಟ್ಟಿಗೆ 'ಹರ್ಷಚರಿತೆ'ಯಲ್ಲಿಯೂ ಉಲ್ಲೇಖಗೊಂಡಿವೆ. ಸಾಮ್ರಾಜ್ಯವು ಭುಕ್ತಿ, ವಿಷಯ, ಗ್ರಾಮ—ಎಂಬ ವಿಭಾಗಗಳನ್ನು ಒಳಗೊಂಡಿದ್ದಿತು. ಮಹಾಸಾಮಂತ ಮಹಾರಾಜ ಕುಮಾರಾಮಾತ್ಯ ಉಪರಿಕ ವಿಷಯಪತಿಗಳೆಂಬ ಅಧಿಕಾರಿಗಳಿರುತ್ತಿದ್ದರು. ಗುಪ್ತಕಾಲೀನ ಅಧಿಕಾರಪದಗಳಲ್ಲಿ ಕೆಲವು ಬೇರೆ ಹೆಸರುಗಳಲ್ಲಿ ಅಂದು ಪ್ರಚಲಿತವಾಗಿದ್ದುವು ಎಂಬುದು 'ಹರ್ಷಚರಿತ'ದಲ್ಲಿಯ ಪುಸ್ತಕಾಲಿತ ಕರಣಿಕ ಮುಂತಾದ ವೃತ್ತಿನಾಮಗಳಿಂದ ತಿಳಿಯುತ್ತದೆ. ಹರ್ಷನ ಕಾಲದಲ್ಲಿ ಚೀನಾದೇಶದ ಜತೆಗೆ ರಾಯಭಾರ ಸಂಬಂಧವು ಕಲ್ಪಿತವಾಗಿದ್ದುದು ಒಂದು ವಿಶೇಷ. ಕ್ರಿ. ಶ. ೬೪೧ರಲ್ಲಿ ಹರ್ಷನು ಚೀನಾದೇಶಕ್ಕೆ ಒಬ್ಬ ಬ್ರಾಹ್ಮಣ ರಾಯಭಾರಿಯನ್ನು ಕಳುಹಿಸಿದನು. ೬೪೩ರಲ್ಲಿ ಅಲ್ಲಿಂದ ಭಾರತಕ್ಕೆ ಚೀನಾದ ಸಾರ್ವಭೌಮನು ಒಂದು ರಾಯಭಾರವನ್ನು ಕಳುಹಿಸಿದ್ದನು. ೬೪೫ರ ವರೆಗೆ ಆ ರಾಯಭಾರವು ಭಾರತದಲ್ಲಿತ್ತು. ಮರುವರ್ಷ ಇನ್ನೂ ಒಂದು ರಾಯಭಾರವನ್ನು ಚೀನಾದ ಚಕ್ರವರ್ತಿ ಭಾರತಕ್ಕೆ ಕಳಿಸಿಕೊಟ್ಟನು.

ಹರ್ಷವರ್ಧನನ ತರುವಾಯದ ಉತ್ತರ ಭಾರತ (ಕ್ರಿ.ಶ. ೬೫೦-೭೫೦) :

ಗುಪ್ತಸಾಮ್ರಾಜ್ಯವು ಅಸ್ತಂಗತವಾದ ಕಾಲದಲ್ಲಿ ನೋಡಿದಂತೆಯೇ ಹರ್ಷನ ಮರಣಾನಂತರದಲ್ಲಿಯೂ ಆತನು ಕ್ರಮಪಡಿಸಿ ಕಟ್ಟಿದ ಸಾಮ್ರಾಜ್ಯವು ಹಂಚಿಹೋಗಿ ಹಲವಾರು ಸಂಸ್ಥಾನಗಳು ಮೇಲೆದ್ದವು. ಅಧಿಕಾರಪದಕ್ಕಾಗಿ ಸ್ಪರ್ಧೆ ಪ್ರತಿಸ್ಪರ್ಧೆಗಳು ತಲೆದೋರಿದವು. ೬೩೦ರಲ್ಲಿ ಭಾರತಕ್ಕೆ ಬಂದ ಹೂಯನ್‌ತ್ಸಾಂಗ್ ಭಾರತವನ್ನು ಕ್ರಿ. ಶ. ೬೪೫ರಲ್ಲಿ ಬಿಟ್ಟು ತೆರಳಿದ ಮೇಲೆ ವಾಂಗ್-ಹೂಯನ್‌ತ್ಸೆ ಎಂಬುವನ ನೇತೃತ್ವದಲ್ಲಿ ಮೂರನೆಯ ಸಾರಿ (ಕ್ರಿ. ಶ. ೬೪೭) ಭಾರತಕ್ಕೆ ಚೀನಾದೇಶದ ರಾಯಭಾರ ಬಂದಿತ್ತು. ಈ ವೇಳೆಗೆ ಹರ್ಷನು ತೀರಿಕೊಂಡಿದ್ದನು. ಆತನ ಮಂತ್ರಿ ಅರ್ಜುನನೆಂಬವನು ಸಿಂಹಾಸನವನ್ನೇರಿದ್ದ. ಈತನು ರಾಯಭಾರಕ್ಕೆ ವಿಪತ್ಕಾರಕವಾಗಿ ಪರಿಣಮಿಸಿದನು. ಚೀನಾರಾಯಭಾರ ಲಿಖಿತವು ಈ ಸಂಬಂಧವಾದ ವಿವರಗಳಲ್ಲಿ ಚೀನಾದೊರೆಯ ಪರವಾಗಿ ಸಂಗತಿಗಳನ್ನು ತುಂಬ ಉತ್ಪ್ರೇಕ್ಷಿಸಿರುವುದು

ಕಾಣುತ್ತದೆ. ಹರ್ಷನ ಮರಣಾನಂತರದಲ್ಲಿ ಚೀನಾ ರಾಯಭಾರಿಯು ಅಲ್ಪಸಂಖ್ಯಾಕವಾದ ಸೈನ್ಯ ಸಹಾಯದಿಂದ ಭಾರತವನ್ನೆಲ್ಲ ನಡುಗಿಸಿದ್ದಂತೆ ಬರೆದಿರುವುದು ಸ್ವಾರಸ್ಯವಾಗಿದೆ!

ಈ ಕಾಲದಲ್ಲಿ ಪೂರ್ವಭಾರತದಲ್ಲಿ ಮಗಧದ ಉತ್ತರಕಾಲೀನ ಗುಪ್ತರು ಪ್ರಬಲರಾಗಿದ್ದರು. ಇವರಲ್ಲಿ ಮಹಾರಾಜಾಧಿರಾಜ ಬಿರುದಾಂಕಿತನಾದ ಆದಿತ್ಯಸೇನನ (ಕ್ರಿ. ಶ. ೬೭೨) ವಿಚಾರ ಸ್ವಲ್ಪ ಮಟ್ಟಿಗೆ ತಿಳಿದಿದೆ. ಈತನು ಚೋಳರಾಜ್ಯಕ್ಕೆ ಕಾಲಿಟ್ಟಂತೆಯೂ ಅಶ್ವಮೇಧವನ್ನಾಚರಿಸಿಕೊಂಡು ಹಲವು ಯಜ್ಞಗಳನ್ನು ಮಾಡಿದಂತೆಯೂ ಕಂಡುಬರುತ್ತದೆ. ದೇವಗುಪ್ತಾದಿಯಾಗಿ ಕೆಲವರು ರಾಜ್ಯವಾಳಿದ ಮೇಲೆ ಕ್ರಿ. ಶ. ೮ನೆಯ ಶತಮಾನದ ಪೂರ್ವಾರ್ಧದಲ್ಲಿ ಇವರ ಆಳ್ವಿಕೆ ಕೊನೆಗೊಂಡಿತು.

ಹರ್ಷನ ಮರಣಾನಂತರ ಕೆಲಕಾಲ ಕನೋಜಿನ ವಿದ್ಯಮಾನಗಳು ಸರಿಯಾಗಿ ತಿಳಿದಿಲ್ಲ. ಯಶೋವರ್ಮನೆಂಬ ಮಹಾಸಮರ್ಥನಾದ ಪ್ರಾಯಃ ಕವಿಯೂ ಆದ ದೊರೆಯೊಬ್ಬನು (ಕ್ರಿ. ಶ. ೭೦೦–೭೪೦) ಅಲ್ಲಿ ಆಳುತ್ತಿದ್ದುದು ಆ ಕಾಲದಲ್ಲಿ ಆತನ ಆಸ್ಥಾನ ಕವಿಯಾಗಿದ್ದ ಭವಭೂತಿಯ ಶಿಷ್ಯನಾಗಿದ್ದ ವಾಕ್ಪತಿಯೆಂಬುವನ 'ಗೌಡವಹೋ' ಎಂಬ ಪ್ರಾಕೃತ ಕಾವ್ಯದಿಂದ ತಿಳಿಯುತ್ತದೆ. ಇತ್ತೀಚಿನ ಬೆಳಕಿಗೆ ಬಂದಿರುವ 'ರಾಮಾಭ್ಯುದಯ'ವೆಂಬ ನಾಟಕವು ಯಶೋವರ್ಮನದೇ ಇರಬಹುದೆಂದು ತಿಳಿಯುತ್ತದೆ. ಇಲ್ಲಿಯ ವಿವರಗಳು ಬಹುಮಟ್ಟಿಗೆ ಸಾಂಪ್ರದಾಯಿಕವೂ ಉತ್ಪ್ರೇಕ್ಷಿತವೂ ಆಗಿದೆ. ಈತನು ಚೀನಾದೇಶಕ್ಕೆ ಬುದ್ಧಸೇನನೆಂಬ ಬೌದ್ಧ ರಾಯಭಾರಿಯನ್ನು ಕಳುಹಿಕೊಟ್ಟನು (ಕ್ರಿ. ಶ. ೭೩೧). ಕರ್ಣಾಟಕದ ಚರಿತ್ರೆಗೂ ಈತನ ಸಂಬಂಧವಿದೆ. ಬಾದಾಮಿ ಚಾಲುಕ್ಯರ ವಿನಯಾದಿತ್ಯನೊಡನೆ ಈತನು ಹೋರಾಡಿ (ಕ್ರಿ. ಶ. ೬೯೫) ಸೋತುಹೋಗಿ ಆತನಿಗೆ ಚಕ್ರವರ್ತಿಪದದ ವೈಭವದ ಸಂಕೇತಗಳನ್ನೂ ಪಾಳಿಧ್ವಜಗಳನ್ನೂ ಒಪ್ಪಿಸಿದ ವಿಷಯ ತಿಳಿದಿದೆ. ಈ ಸಕಲೋತ್ತರಾಪಥನಾಥನು ಕರ್ಣಾಟಕದ ಅರಸನಿಗೆ ಸೋತದ್ದು ಕರ್ನಾಟಕದ ಚರಿತ್ರೆಯಲ್ಲಿ ಒಂದು ಗಣ್ಯವಾದ ಸಂಗತಿ. ಈ ದೊರೆ ಕಾಶ್ಮೀರದ ದೊರೆ ಲಲಿತಾದಿತ್ಯ (ಕ್ರಿ. ಶ. ಸುಮಾರು ೭೨೪–೭೬೦) ನೆಂಬವನಿಗೆ ಸೋತುಹೋದ ವಿಷಯ ಕಲ್ಹಣನ 'ರಾಜತರಂಗಿಣಿ'ಯಲ್ಲಿ ಬಂದಿದೆ. 'ಉತ್ತರರಾಮಚರಿತೆ' 'ಮಹಾವೀರಚರಿತೆ' ಎಂಬ ನಾಟಕಗಳ ಕರ್ತೃವಾಗಿ ಪ್ರಸಿದ್ಧನಾಗಿರುವ ಭವಭೂತಿಯು ಈ ಯಶೋವರ್ಮನ ಆಸ್ಥಾನಕವಿಯಾಗಿದ್ದಂತೆ ಇದೇ ಗ್ರಂಥದಿಂದ ತಿಳಿದು ಬರುತ್ತದೆ.

೧೨ನೆಯ ಶತಕದ ಕಲ್ಹಣನ ರಾಜತರಂಗಿಣಿ ಕಾಶ್ಮೀರದ ಪ್ರಾಚೀನ ಚರಿತ್ರೆಯನ್ನು ತಿಳಿಯಲಿರುವ ಒಳ್ಳೆಯ ಆಕರ ಗ್ರಂಥವಾಗಿದೆ. ಕ್ರಿ. ಶ. ೭ನೆಯ ಶತಮಾನದಲ್ಲಿ ದುರ್ಲಭವರ್ಧನನಿಂದ ಮೊದಲಾದ ರಾಜಮನೆತನದೊಂದರಲ್ಲಿ ಪ್ರಖ್ಯಾತನಾದ ಅರಸನಾಗಿ ಲಲಿತಾದಿತ್ಯನೆಂಬವನು (ಸು ೭೨೪–೭೬೦) ಕಾಣಿಸಿಕೊಂಡನು. ಈತನು ಕೂಡ ಯಶೋವರ್ಮನಂತೆಯೇ ಚೀನಾ ಚಕ್ರವರ್ತಿಯಲ್ಲಿಗೆ ರಾಜಕೀಯ ಉದ್ದೇಶಕ್ಕಾಗಿ ರಾಯಭಾರಿಯನ್ನು ಕಳುಹಿದನು. ಕಲ್ಹಣನು ನಿರೂಪಿಸಿರುವ ಈತನ ದಿಗ್ವಿಜಯಗಳಲ್ಲಿ ಈತನು ಕರ್ಣಾಟಕಕ್ಕೆ ಬಂದಾಗ ರಟ್ಟಾ ಎಂಬ ರಾಣಿ ಈತನಿಗೆ ಗೌರವವನ್ನು ಸೂಚಿಸಿದಳೆಂದೂ ಈತನು ಕಾವೇರಿಯ ದಂಡೆಯನ್ನು ತಲುಪಿದನೆಂದೂ ಕೆಲವು ದ್ವೀಪಗಳನ್ನು ಸಾಧಿಸಿದನೆಂದೂ ಹೇಳಿರುವುದು ಗಮನಿಸತಕ್ಕದ್ದಾಗಿದೆ. ಈತನು ಹಲವು ವಿಹಾರಗಳು ದೇವಾಲಯಗಳು ಮುಂತಾದವನ್ನು ನಿರ್ಮಿಸಿದ್ದು, ಅವುಗಳಲ್ಲಿ ಕಾಶ್ಮೀರದ ಮಾರ್ತಾಂಡ ದೇವಾಲಯ ವಿಖ್ಯಾತವಾಗಿದೆ. ಈ ಮನೆತನ ೯ನೆಯ ಶತಮಾನದ ವರೆಗೆ ಮುಂದುವರಿಯಿತಾದರೂ ಗಣ್ಯರಾದ ಅರಸರಾರೂ ಮುಂದೆ ಕಾಣಿಸಿಕೊಳ್ಳಲಿಲ್ಲ.

ಹರ್ಷನ ಕಾಲದಲ್ಲಿ ಆತನಿಗೆ ಸಮಸಾಮರ್ಥ್ಯವುಳ್ಳವನಾಗಿ ಪ್ರಸಿದ್ಧನಾಗಿದ್ದ ಭಾಸ್ಕರವರ್ಮನ ತರುವಾಯದಲ್ಲಿ ಕಾಮರೂಪದಲ್ಲಿ ಕೆಲವರು ಆಳಿದಂತೆ ತಿಳಿದಿದ್ದರೂ ಅವರ ವಿಚಾರ ಸರಿಯಾಗಿ ತಿಳಿದಿಲ್ಲ. ಆದರೆ ಸಮುದ್ರಗುಪ್ತರ ಸಾಮ್ರಾಜ್ಯದಲ್ಲಿ ಈ ಮೊದಲು ಸೇರಿದ್ದ ನೇಪಾಳವು ಹರ್ಷನ ಮರಣಾನಂತರದಲ್ಲಿ ಬಹುಕಾಲ ಟಿಬೆಟ್ಟಿನ ವಶದಲ್ಲಿತ್ತು. ೮ನೆಯ ಶತಮಾನದ ಪೂರ್ವಾರ್ಧದಲ್ಲಿ ಲಿಚ್ಛವಿವಂಶದ ಪರಾಕ್ರಮಶಾಲಿಯೂ ಬಿರುದಾಂಕಿತನಾದ ಜಯದೇವನ ಆಳ್ವಿಕೆಗೆ ಒಳಪಟ್ಟಿತ್ತು. ಇನ್ನು ಬಂಗಾಳದಲ್ಲಿ ಶಶಾಂಕನೆಂಬ ಸಮರ್ಥನಾದ ದೊರೆಯ ನಂತರ ಬಂಗಾಳದಲ್ಲಿ ಅಧಿಕಾರದ ಹಸ್ತಾಂತರಗಳು ನಡೆದುವು. ಆಕ್ರಮಣಗಳು—ಇವುಗಳ ಪರಿಣಾಮವಾಗಿ ಅವ್ಯವಸ್ಥೆ, ಅರಾಜಕತೆಗಳು ನೆಲೆಸಿದ್ದುವು.

ಒರಿಸ್ಸದ ಶೈಲೋದ್ಭವವಂಶದಲ್ಲಿ ಬಂದ ಸಯನ್ಯಭೀತ (ಸು ೬೧೫) ಮತ್ತು ಆತನ ಮಗ ಅಯಶೋಭೀತ (ಸು. ೬೧೯–೪೫) ಇಬ್ಬರೂ ಈ ಕಾಲದ ಪ್ರಸಿದ್ಧ ಅರಸರಾಗಿದ್ದರು. ಇವರು ಅಶ್ವಮೇಧಾದಿಯಾಗಗಳನ್ನು ನಡೆಸಿದರು. ವಲಭಿಯ ದೊರೆಗಳಲ್ಲಿ ಧರಸೇನನು (ಕ್ರಿ. ಶ. ೬೪೪–೬೫೦) ಪ್ರಖ್ಯಾತನಾಗಿದ್ದು ಈತನ ಆಸ್ಥಾನದಲ್ಲಿಯೇ ಪ್ರಖ್ಯಾತ ಸಂಸ್ಕೃತಕವಿ ಭಟ್ಟಿಯಿದ್ದು 'ರಾವಣವಧೆ' (ಭಟ್ಟಿಕಾವ್ಯ)ಯನ್ನು ರಚಿಸಿದನು. ಭಟ್ಟಿಯು ತನ್ನ ಕಾವ್ಯದಲ್ಲಿ ಪಾಣಿನಿಯ ಅಷ್ಟಾಧ್ಯಾಯಿಸೂತ್ರಗಳಿಗೆ ಲಕ್ಷ್ಯಗಳನ್ನು ಒದಗಿಸಿದ್ದಾನೆ. ಈತನ ಬಳಿಕ ಬಂದವರಲ್ಲಿ ಪ್ರಖ್ಯಾತನಾದವನೆಂದರೆ ಮುಮ್ಮಡಿ ಶೀಲಾದಿತ್ಯನು (೬೬೨–೮೪). ಈತನಿಗೆ ಚಾಲುಕ್ಯರೊಡನೆ ಘಟಿಸಿದ ಯುದ್ಧದ ಪ್ರಸ್ತಾಪವು ಚಾಲುಕ್ಯಶಾಸನವೊಂದರಲ್ಲಿ ಬಂದಿದೆ. ಚಾಲುಕ್ಯರು ರಾಷ್ಟ್ರಕೂಟರು ಹಾಗೂ ಪ್ರತಿಹಾರರು ಏಳಿಗೆಗೆ ಬರುತ್ತಿದ್ದಂತೆ ಇವರು ಹಿಂಜರಿತವನ್ನು ಅನುಭವಿಸುವುದು ಅನಿವಾರ್ಯವಾಯಿತು. ಈ ಕಾಲದಲ್ಲಿ ಉಂಟಾದ ಅರಬ್ಬರ ದಾಳಿಯು ವಲ್ಲಭಿಯ ನಾಶಕ್ಕೆ ಕಾರಣವಾದಂತೆ ಅಲ್ಬರೂನಿಯ ದಾಖಲೆಯಿಂದ ತಿಳಿಯುವುದು. ಇಂದು ರಾಜಪುಟಾನವೆಂದು ಕರೆಯಲ್ಪಡುತ್ತಿರುವ ಗುರ್ಜರಾತ್ರದಲ್ಲಿ ನಾನಾಭಾಗಗಳಲ್ಲಿ ಈಕಾಲದಲ್ಲಿ ಹಲವು ವಂಶಗಳವರು ಆಳುತ್ತಿದ್ದರು. ಪ್ರತಿಹಾರರು, ಗುಹಿಲೋತರು, ಚಾಪರು, ಚಾಹಮಾನರು—ಇವರು ಗಣ್ಯರು. ಅಂದಿನ ರಾಜಕೀಯದಲ್ಲಿ ಚಾಲುಕ್ಯರ ಪ್ರಭಾವ ವಿಶೇಷವಾಗಿತ್ತು. ಗುರ್ಜರರು ಅರಬ್ಬರ ದಾಳಿಯಿಂದ ಉಳಿದುಕೊಂಡರೂ ಮೊದಲು ಚಾಲುಕ್ಯರಿಂದಲೂ ಅನಂತರ ರಾಷ್ಟ್ರಕೂಟರಿಂದಲೂ ಕ್ಲೇಶವನ್ನು ಅನುಭವಿಸಬೇಕಾಯಿತು.

ಅರಬ್ಬರ ದಾಳಿ: ಕ್ರಿ. ಶ. ೭ನೆಯ ಶತಮಾನದಲ್ಲಿ ಅರಬ್ಬರು ಪ್ರಬಲ ಸೈನ್ಯಕೀಯ ಶಕ್ತಿಯಾಗಿ ಕಾಣಿಸಿಕೊಂಡು ಕ್ರಿ. ಶ. ೭೧೨ರಲ್ಲಿ ಭಾರತದೊಳಕ್ಕೆ ಕೂಡ ನುಗ್ಗಿಬಂದರು. ಸಿಂಧ್ ಪ್ರಾಂತದ ಮೇಲೆ ನಡೆದ ದಾಳಿಯ (ಕ್ರಿ. ಶ. ೭೧೨) ವಿವರಗಳು 'ಚಾಚ್ ನಾಮ' ಗ್ರಂಥದ ಮೂಲಕ ವಿಶದವಾಗಿ ತಿಳಿದಿದೆ. ಬೌದ್ಧರು ಮತ್ತು ಇತರರು ಅರಬ್ಬರಿಗೆ ಸಹಾಯಕರಾಗಿ ತಮ್ಮ ಭಾರತೀಯ ದೊರೆಗೆ ದ್ರೋಹವನ್ನು ಬಗೆದು ಅವರ ಜಯಕ್ಕೆ ಕಾರಣರಾದ ವಿಷಯ ಬಹಳ ವಿಷಾದಕರವಾಗಿದೆ. ಈ ದಾಳಿಯ ಪರಿಣಾಮವಾಗಿ ಸಿಂಧ್‌ನಲ್ಲಿ ಆಳುತ್ತಿದ್ದ ದೊರೆಯ ಅಸ್ತಿತ್ವವೂ ಹಿಂದೂರಾಜಮನೆತನದ ಅಸ್ತಿತ್ವವೂ ಕೊನೆಗೊಂಡಿತೆನ್ನಬಹುದು. ಪಶ್ಚಿಮಭಾರತದಲ್ಲಿ ಪ್ರತಿಹಾರ ದೊರೆ ನಾಗಭಟನೂ ಲಾಟದೇಶದ ಚಾಲುಕ್ಯದೊರೆ ಅವನಿಜನಾಶ್ರಯ ಪುಲಿಕೇಶಿಯೂ ಯಶಸ್ವಿಯಾಗಿ ಅರಬ್ಬರ ದಾಳಿಯನ್ನು ನಿಗ್ರಹಿಸಿದರು. ಚಾಲುಕ್ಯರಾಜ ಅವನಿಜನಾಶ್ರಯನಿಗೆ ದಕ್ಷಿಣಾಪಥದ ದೃಢಸ್ತಂಭನೆಂದೂ ಅಪ್ರತಿಹತರಿಗೆ ಅಪ್ರತಿಹತನೆಂದೂ ಬಿರುದು ಇದರಿಂದ ಸಲ್ಲುವಂತಾಯಿತು. ಭಾರತದಲ್ಲಿ ಅರಬ್ಬ ದಾಳಿಯನ್ನು ಕನೌಜಿನ ದೊರೆ ಯಶೋವರ್ಮನೂ ಕಾಶ್ಮೀರದ ದೊರೆ ಲಲಿತಾದಿತ್ಯನೂ ವಿರೋಧಿಸಲು ಸಮರ್ಥರಾದರು. ಹೀಗಾಗಿ ೮ನೆಯ ಶತಮಾನದ ಮಧ್ಯಭಾಗದಲ್ಲಿ ಅರಬ್ಬರು ಭಾರತೀಯ ದೊರೆಗಳ ದಾಳಿ ಪ್ರತಿದಾಳಿಗಳನ್ನು ಎದುರಿಸಲಾಗದೆ ಹೇಗೋ ಸಿಂಧ್ ಪ್ರದೇಶದ ಸ್ವಲ್ಪಭಾಗದಲ್ಲಿ ಕಷ್ಟದಿಂದ ಇರುವಂತಾಯಿತು.

ಹರ್ಷವರ್ಧನನ ತರುವಾಯದಲ್ಲಿ ದಕ್ಷಿಣಭಾರತ (ಕ್ರಿ. ಶ. ೬೫೦-೭೫೦) :

ಈ ಕಾಲದಲ್ಲಿ ದಕ್ಷಿಣಭಾರತದ ದೇಶಗಳಲ್ಲಿ ಕರ್ಣಾಟಕವನ್ನು ತಲಕಾಡುಗಂಗರು ಆಳುಪರು ಮುಂತಾದವರು ಆಳುತ್ತಿದ್ದರು; ತಮಿಳುದೇಶವನ್ನು ಪಲ್ಲವರು ಪಾಂಡ್ಯರು ಚೋಳರು ಮುಂತಾದವರು ಆಳುತ್ತಿದ್ದರು.

ತೊಂಡೈಮಂಡಲದ ನೆಲೆಗರಾದ ಕಾಂಚಿಯ ಪಲ್ಲವರು ಕ್ರಿ. ಪೂ. ೩ನೆಯ ಶತಮಾನದ ಆದಿಭಾಗದವರೆಗೆ ಮೊದಲು ಮೌರ್ಯರ ಮತ್ತು ಶಾತವಾಹನರ ಅಂಕೆಯಲ್ಲಿದ್ದು ಶಿವಸ್ಕಂದವರ್ಮನೆಂಬ ಪಲ್ಲವರಾಜನ (೩ನೇ ಶತಮಾನದ ಉತ್ತರಾರ್ಧ) ಕಾಲದಲ್ಲಿ ಪ್ರಕಾಶಕ್ಕೆ ಬಂದರು. ಕ್ರಿ. ಶ. ೩–೪ನೆಯ ಶತಮಾನಗಳಿಂದ ಇವರ ವಿಚಾರವಾಗಿ ಶಿಲಾಶಾಸನಗಳೂ ತಾಮ್ರಪಟಗಳೂ ದೊರೆತಿವೆ. ಶಿವಸ್ಕಂಧವರ್ಮನು ಧರ್ಮಮಹಾರಾಜಾಧಿರಾಜನೆಂದು ಬಿರುದಾಂಕಿತನಾಗಿದ್ದು ಅಗ್ನಿಷ್ಟೋಮ ವಾಜಪೇಯ

ಅಶ್ವಮೇಧಗಳನ್ನು ಆಚರಿಸಿ ಖ್ಯಾತನಾದನು. ಈತನ ಬಳಿಕದ ಪಲ್ಲವರ ಚರಿತ್ರೆ ಸುಮಾರು ಒಂದು ಶತಮಾನದವರೆಗೆ ಸರಿಯಾಗಿ ತಿಳಿದಿಲ್ಲ. ಸಮುದ್ರಗುಪ್ತನು ಸಾಧಿಸಿದ ದಕ್ಷಿಣದ ದೊರೆಗಳಲ್ಲಿ ಕಂಚಿಯ ದೊರೆಯೂ ಒಬ್ಬನೆಂದು ತಿಳಿಯುವುದರಿಂದ; ಆಗ್ಗೆ ವಿಷ್ಣುಗೋಪನೆಂಬುವನು ಆಳುತ್ತಿದ್ದನೆಂದ ತಿಳಿದಿರುವುದರಿಂದ, ಪಲ್ಲವರ ಆಳ್ವಿಕೆ ಮುಂದುವರಿದಿತ್ತೆಂದು ಹೇಳಬಹುದು. ಪ್ರಾಚೀನ ಪಲ್ಲವರಾಜರಲ್ಲಿ ಬುದ್ಧವರ್ಮ ಅಶೋಕವರ್ಮರು ಬೌದ್ಧರೇ ಆಗಿದ್ದು ಬೌದ್ಧವಿಹಾರಗಳನ್ನು ನಿರ್ಮಿಸಿದರೆಂಬುದರಿಂದ ಆ ಕಾಲದ ತಮಿಳುದೇಶದಲ್ಲಿ ಬೌದ್ಧಮತವು ಪ್ರಭಾವಶಾಲಿಯಾಗಿತ್ತೆಂದು ಹೇಳಬಹುದು. ಕಂಚಿಯು ಆ ಮತದ ಒಂದು ಪ್ರಮುಖ ಕೇಂದ್ರವಾಗಿದ್ದು ಖ್ಯಾತ ಬೌದ್ಧಮತಾಚಾರ್ಯರ ಜನ್ಮಸ್ಥಾನವಾಯಿತು. ನಲಂದಾ ವಿಶ್ವವಿದ್ಯಾನಿಲಯದ ಧರ್ಮಪಾಲನು ಕಂಚಿಯವನು. ಸಿಂಹವಿಷ್ಣು ಪಲ್ಲವನ ರಾಜನ (ಕ್ರಿ. ಶ. ೫೭೫–೬೦೦) ಕಾಲದಿಂದ ಪಲ್ಲವರ ಚರಿತ್ರೆ ಚೆನ್ನಾಗಿ ತಿಳಿದಿದೆ. ಈತನ ಕಾಲದಲ್ಲಿ ರಾಜಕೀಯವಾಗಿಯೂ ಸಾಂಸ್ಕೃತಿಕವಾಗಿಯೂ ಪಲ್ಲವರು ಪ್ರಸಿದ್ಧಿಗೆ ಬಂದರು. ಸಿಂಹವಿಷ್ಣುವು ಪ್ರಸಿದ್ಧ ಸಂಸ್ಕೃತಕವಿ ಭಾರವಿಗೆ ಪೋಷಕನು. 'ಅವಂತಿಸುಂದರೀಕಥಾಸಾರ'ದಲ್ಲಿ ಆತನು ಭಾರವಿಗೆ ಪೋಷಣೆಯನ್ನಿತ್ತ ಸಂದರ್ಭವನ್ನು ವಿವರಿಸಿದೆ. ಅಲ್ಲಿ ಸಿಂಹವಿಷ್ಣುವನ್ನು ವಿದ್ವಜ್ಜನ ಪೋಷಕನೆಂದು ಹೇಳಿದೆ. ಪಲ್ಲವರಿಗೂ ಚಾಲುಕ್ಯರಿಗೂ ಸಹಜವೈರವೆಂಬಂತೆ ಹೋರಾಟಗಳು ನಿರಂತರವಾಗಿ ನಡೆದವು. ಈತನ ಪುತ್ರ ಮಹೇಂದ್ರವರ್ಮನ ಕಾಲದಲ್ಲಿ (ಸು. ೬೦೦–೬೩೦) ಆತನು ಚಾಲುಕ್ಯರ ಪ್ರಬಲನಾದ ದೊರೆ ಇಮ್ಮಡಿ ಪುಲಿಕೇಶಿ (ಕ್ರಿ. ಶ. ೬೦೯–೪೨)ಯನ್ನೆದುರಿಸಿ ಹೋರಾಡಬೇಕಾಯಿತು. ಸೋಲಬೇಕಾಯಿತು. ರವಿಕೀರ್ತಿಯ ಐಹೊಳೆ ಶಾಸನದಲ್ಲಿಯೂ (ಕ್ರಿ. ಶ. ೬೩೪) ಈ ವಿಷಯ ಬಂದಿದೆ. ಈತನು ಮೊದಲು ಜೈನನಾಗಿದ್ದು ಬಳಿಕ ಅಪ್ಪರ್ ಎಂಬ ಯತಿಯ ಪ್ರಭಾವದಿಂದ ಶೈವನಾದನೆಂದೂ ಹಲವು ಗುಹಾಂತರ್ದೇವಾಲಯಗಳನ್ನು ಕಟ್ಟಿಸಿ 'ದೇವಾಲಯನಿರ್ಮಾಪಕ'ನೆಂಬ ಬಿರುದಿಗೆ ಪಾತ್ರನಾದನೆಂದೂ ತಿಳಿಯುವುದು. ಈತನು ನಿರ್ಮಿಸಿದ ದೇವಾಲಯಗಳು ತಿರುಚನಾಪಳ್ಳಿ, ವಲ್ಲಂ ಮಹೇಂದ್ರವಾಡಿ ದಳವಾನೂರುಗಳಲ್ಲಿ ಕಂಡುಬಂದಿದೆ. ತ್ರಿಮೂರ್ತಿಗಳಿಗಾಗಿ ದೇವಾಲಯಗಳನ್ನು ಈತನು ಕಟ್ಟಿಸಿದನು. ಈತನಿಗೆ ಸಾಹಿತ್ಯ ಸಂಗೀತ ಚಿತ್ರ ಮೊದಲಾದವುಗಳಲ್ಲಿ ವಿಶೇಷವಾಗಿ ಆಸಕ್ತಿಯಿದ್ದಂತೆ ತಿಳಿದುಬಂದಿದೆ. 'ಮತ್ತವಿಲಾಸಪ್ರಹಸನ'ವೆಂಬ ನಾಟಕದ ಕರ್ತೃವಾದ ಈತನು ಸಂಗೀತದ ಮೇಲೆ ಕೂಡ ಗ್ರಂಥವನ್ನು ಬರೆದಿರಬಹುದೆಂದು ಭಾವಿಸಲಾಗಿದೆ. ಪ್ರಸಿದ್ಧವಾದ ಸಂಗೀತವಿಷಯಕವಾದ ಕುಡಿಮಿಯಾ ಮಲೈ ಸಂಸ್ಕೃತ ಶಾಸನವು ಈತನ ಪ್ರೋತ್ಸಾಹದಂತೆ ಹಾಕಿಸಲಾಯಿತು ಎನ್ನುತ್ತಾರೆ. ಮಹೇಂದ್ರವರ್ಮನ ಪುತ್ರ ನರಸಿಂಹವರ್ಮನು (ಸು. ೬೩೦–೬೬೮) ಪಲ್ಲವದೊರೆಗಳಲ್ಲಿಯೇ ಮಹಾಸಮರ್ಥನಾದವನು. ಈತನು ಪುಲಿಕೇಶಿ II ಯನ್ನು ಸೋಲಿಸಿದ್ದೇ ಅಲ್ಲದೆ ಆತನ ರಾಜಧಾನಿಯನ್ನೇ ಆಕ್ರಮಿಸಿ (ಕ್ರಿ. ಶ. ೬೪೨) 'ವಾತಾಪಿಕೊಂಡ'ನೆನ್ನಿಸಿದನು. ಸಿಂಹಳ ದ್ವೀಪಕ್ಕೆ ನೌಕಾದಳವನ್ನು ನಡಸಿ ಯಶಸ್ವಿಯಾದನು. ಮಹಾಬಲಿಪುರದಲ್ಲಿ ಕೆಲವು ಏಕಶಿಲಾದೇವಾಲಯಗಳನ್ನು ('ರಥಗಳು') ನಿರ್ಮಿಸಿ. ಆ ಸ್ಥಳಕ್ಕೆ ಪ್ರಾಮುಖ್ಯವನ್ನು ತಂದುಕೊಟ್ಟನು. ಕ್ರಿ. ಶ. ೬೪೦ರಲ್ಲಿ ಇಲ್ಲಿಗೆ ಬಂದಿದ್ದ ಹ್ಯೂಯನ್‌ತ್ಸಾಂಗ್ ಕೊಡುವ ವಿವರಣೆಯಂತೆ ಈತನ ಕಾಲಕ್ಕೆ ಕಂಚಿಯಲ್ಲಿ ನೂರಕ್ಕಿಂತ ಹೆಚ್ಚು ಬೌದ್ಧವಿಹಾರಗಳಿದ್ದವು: ಅವುಗಳನ್ನು ಹತ್ತುಸಾವಿರ ಯತಿಗಳಿರಬಹುದಾಗಿದ್ದಿತು. ಇವುಗಳಲ್ಲಿ ಪ್ರಸಿದ್ಧವಾದುದು 'ರಾಜವಿಹಾರ'. ಉಳಿದ ೮೦ ಇತರ ದೇವಾಲಯಗಳಲ್ಲಿ ಹೆಚ್ಚಿನವು ದಿಗಂಬರಶಾಖೆಯ ಜೈನರಿಗೆ ಸೇರಿದವಾಗಿದ್ದವು.

ಇದಿಷ್ಟು ಕ್ರಿ. ಶ. ೬೬೮ರ ಮೊದಲಿನ ಪಲ್ಲವರ ಚರಿತ್ರೆಗೆ ಸೇರಿದ ಸಂಗತಿಗಳು. ಕ್ರಿ. ಶ. ಸು. ೬೭೦ ರಿಂದ ೬೯೫ರವರೆಗೆ ಆಳಿದ, ನರಸಿಂಹವರ್ಮನ ಮೊಮ್ಮಗ ಪರಮೇಶ್ವರವರ್ಮನು I. ಚಾಲುಕ್ಯ ವಿಕ್ರಮಾದಿತ್ಯ Iನ ಪ್ರತಿಭಟನೆಯನ್ನೆದುರಿಸಬೇಕಾಯಿತು. ವಿಕ್ರಮಾದಿತ್ಯನು ತನ್ನ ತಂದೆ ಪುಲಿಕೇಶಿಗೆ ಪಲ್ಲವರಿಂದ ಉಂಟಾದ ಗತಿಗೆ ತಕ್ಕ ಪ್ರತೀಕಾರವನ್ನು ಕೈಕೊಂಡು ಯಶಸ್ವಿಯಾದನು. ಪರಮೇಶ್ವರವರ್ಮನು ಶಿವಭಕ್ತನಾಗಿದ್ದು ಕಂಚಿಯ ಹತ್ತಿರ ಕುರ್ರಂ ಎಂಬಲ್ಲಿ ಒಂದು ಶಿವಾಲಯವನ್ನು ಕಟ್ಟಿಸಿದನು. ಈತನ ಮಗ ನರಸಿಂಹವರ್ಮನು II (ಸು. ೬೯೫–೭೨೨) ತಂದೆಯಂತೆಯೇ ಶಿವಭಕ್ತನಾಗಿದ್ದು ಕಂಚಿಯ ಪ್ರಸಿದ್ಧ ಕೈಲಾಸನಾಥ ದೇವಾಲಯವನ್ನು ಕಟ್ಟಿಸಿದನು. ಚೀನಾದೇಶಕ್ಕೆ ರಾಯಭಾರವನ್ನು ಕಳುಹಿಸಿ

ದನು. ದಂತಿಯು ಈತನ ಆಸ್ಥಾನದಲ್ಲಿದ್ದನೆಂದು ಕೆಲವರು ಹೇಳುತ್ತಾರೆ. ಕ್ರಿ. ಶ. ೭೯೦ರಲ್ಲಿ ಆಳಿದ ನಂದಿವರ್ಮನು ವಿಷ್ಣು ಭಕ್ತನಾಗಿದ್ದು ಕಂಚಿಯಲ್ಲಿ ಮುಕ್ತೇಶ್ವರ ಮತ್ತು ವೈಕುಂಠ ಪೆರುಮಾಳ್ ದೇವಾಲಯಗಳನ್ನು ಕಟ್ಟಿಸಿದನು. ಯತಿಶ್ರೇಷ್ಠರಾದ ತಿರುಮಂಗೈ ಆಳ್ವಾರ್ ಈತನ ಕಾಲದಲ್ಲಿದ್ದವರು. ಕ್ರಿ. ಶ. ೬೦೦ ರಿಂದ ೭೫೦ರವರೆಗೆ ಪಲ್ಲವರು ಉಚ್ಛ್ರಾಯಸ್ಥಿತಿಯಲ್ಲಿದ್ದರು. ಈ ಕಾಲದಲ್ಲಿ ಪಲ್ಲವರು ಚಾಳುಕ್ಯರಿಂದ ಮಾತ್ರವೇ ಅಲ್ಲದೆ ರಾಷ್ಟ್ರಕೂಟರಿಂದಲೂ ಪಶ್ಚಿಮಗಂಗರಿಂದಲೂ ಹೋರಾಟಗಳನ್ನು ಎದುರಿಸಬೇಕಾಯಿತು.

ಪಲ್ಲವರ ಕಾಲದಲ್ಲಿ ಸಾಹಿತ್ಯ ಸಂಗೀತ ಚಿತ್ರ ಶಿಲ್ಪ ಮತ್ತು ವಾಸ್ತುಶಿಲ್ಪಗಳು ಚೆನ್ನಾಗಿ ಅಭಿವೃದ್ಧಿಗೆ ಬಂದವು. ದೇವಾಲಯಗಳು ಮತ್ತು ಗುಹಾಂತರ್ದೇವಾಲಯಗಳಲ್ಲಿ ಮಹೇಂದ್ರಶೈಲಿ ಮಾಮಲ್ಲಶೈಲಿ ಮುಂತಾದ ಶೈಲಿಗಳು ಹುಟ್ಟಿಕೊಂಡವು. ಮಹಾಬಲಿಪುರದ ಪಂಚರಥಗಳೆಂಬ ಹೆಸರಿನ ಏಕಶಿಲಾ ದೇವಾಲಯಗಳು ಕ್ರಿ. ಶ. ೭ನೆಯ ಶತಮಾನದ ಪೂರ್ವಾರ್ಧದಲ್ಲಿ ನಿರ್ಮಾಣವಾದ ವಿಶಿಷ್ಟ ವಾಸ್ತು ಕಲಾ ರಚನೆಗಳು. ಪುದುಕೋಟೆ ಪ್ರಾಂತದ ಸಿತ್ತನ್ನವಾಸಲ್‌ನ ಗುಹಾದೇವಾಲಯದ ಚಿತ್ರಗಳು ಜೈನ ಧರ್ಮದ ತತ್ತ್ವ ಮತ್ತು ಸಂಕೇತಗಳನ್ನು ಕುರಿತವು. ಹಾಗೆಯೇ ಕಂಚಿಯ ಕೈಲಾಸನಾಥ ದೇವ ದೇವಾಲಯದಲ್ಲಿಯೂ ಮಲೆಯಪಟ್ಟಿ ಪಾನಮಲೈಯ ವೈಷ್ಣವ ದೇವಾಲಯದಲ್ಲಿಯೂ ಇಂತಹ ಭಿತ್ತಿಚಿತ್ರಗಳನ್ನು ಕಾಣಬಹುದು. ಪಲ್ಲವದೊರೆಗಳು ವಿದ್ವಾಂಸರಿಗೆ ಪೋಷಕರಾಗಿದ್ದುದೇ ಅಲ್ಲದೆ ಸ್ವತಃ ವಿದ್ವತ್ತನ್ನು ಗಳಿಸಿದವರಾಗಿದ್ದರು. ಕಂಚಿ ಸಂಸ್ಕೃತವಿದ್ಯಾಭ್ಯಾಸದ ಉನ್ನತಕೇಂದ್ರವಾಗಿದ್ದಿತು. ಕುರ್ರಂ ಗ್ರಾಮದೊಂದರಲ್ಲಿಯೇ ೧೦೮ ಸಂನ್ಯಾಸಿಗಳು ೪ ವೇದಗಳನ್ನು ಅಧ್ಯಯನ ಮಾಡಿದವರಾಗಿದ್ದರು.

ಚೋಳರು ಮತ್ತು ಇತರರು: ಚೋಳರು ಕ್ರಿ. ಶ. ೧೧ನೆಯ ಶತಮಾನದಿಂದ ದಕ್ಷಿಣ ಭಾರತದ ಚರಿತ್ರೆಯಲ್ಲಿ ಪ್ರಬಲರಾದರೂ ತಮಿಳು ಮತ್ತು ತೆಲುಗುದೇಶಗಳ ಉರೈಯೂರು ಮತ್ತು ರೇನಾಡು ಗಳಲ್ಲಿ ಅವರು ೯ನೆಯ ಶತಮಾನದವರೆಗೆ ಪ್ರಬಲ ರಾಜಕೀಯಶಕ್ತಿಗಳಾದ ಕಳಭ್ರರು. ಪಲ್ಲವರು. ಪಾಂಡ್ಯರು ಇವರ ಅಧೀನದಲ್ಲಿಯೇ ಸಾಮಾನ್ಯಸ್ಥಿತಿಯಲ್ಲಿರುತ್ತಿದ್ದರು. ಹ್ಯೂಯನ್‌ತ್ಸಾಂಗ್‌ನ ಕಾಲದಲ್ಲಿ ರೇನಾಡುಪ್ರಾಂತದಲ್ಲಿ ಬೌದ್ಧಮತವು ಕ್ಷೀಣಸ್ಥಿತಿಯಲ್ಲಿಯೂ ಹಿಂದೂ ಮತ್ತು ಜೈನಮತಗಳು ಉತ್ತಮ ಸ್ಥಿತಿಯಲ್ಲಿಯೂ ಇದ್ದುದಾಗಿ ತಿಳಿಯುತ್ತದೆ. ಚೋಳರಿಗೂ ಪಾಂಡ್ಯರಿಗೂ ಭಯಾನಕರಾಗಿದ್ದ ಕಳಭ್ರರ ಮೂಲ ಅನೇಕ ಭಿನ್ನಾಭಿಪ್ರಾಯಗಳಿಗೆ ಎಡೆಮಾಡಿದೆ. ಕ್ರಿ. ಶ. ೬ನೆಯ ಶತಮಾನದ ಕೊನೆಯಲ್ಲಿ ಇವರನ್ನು ಅಡಗಿಸಿ ಪಾಂಡ್ಯರು ಅಭ್ಯುದಯಕ್ಕೆ ಬಂದರು. ಕ್ರಿ. ಶ. ೬೪೦ರಲ್ಲಿ ದಕ್ಷಿಣ ಭಾರತಕ್ಕೆ ಬಂದಿದ್ದ ಹ್ಯೂಯನ್‌ತ್ಸಾಂಗ್ ಇವರ ರಾಜ್ಯವನ್ನೂ ದೇಶವಾಸಿಗಳನ್ನೂ ಸ್ವಾರಸ್ಯವಾಗಿ ವರ್ಣಿಸುತ್ತಾನೆ: "ಅದು ಮುತ್ತುಗಳ ಕೋಶ. ಅಲ್ಲಿಯ ಜನ ಬಣ್ಣದಲ್ಲಿ ಕಪ್ಪು. ನಡವಳಿಕೆಯಲ್ಲಿ ಒರಟು. ಅವರು ನಾನಾಧರ್ಮಗಳಿಗೆ ಸೇರಿದವರು. ಸಂಸ್ಕೃತಿಯ ಬಗೆಗೆ ಲಕ್ಷ್ಯವಿಲ್ಲದವರು. ವ್ಯಾಪಾರ ದಕ್ಷ ಮಾತ್ರ ಇದ್ದಾರೆ." ಅರಿಕೇಸರಿ ಮಾರಾಂಕುಶ ಮಾರವರ್ಮನ (ಸು. ೬೭೦-೭೧೦) ಕಾಲದಲ್ಲಿ ಪಾಂಡ್ಯರು ಉನ್ನತಸ್ಥಿತಿಯನ್ನು ಮುಟ್ಟಿದರು. ಈತನು ಜೈನಮತದಿಂದ ಶೈವಮತಕ್ಕೆ ಸಂಬಂದರ್ ಎಂಬ ಯತಿಯಿಂದ ಪರಿವರ್ತಿತನಾದಮೇಲೆ ಜೈನಮತೀಯರ ವಿಚಾರದಲ್ಲಿ ಕ್ರೂರಿಯಾಗಿ ನಡೆದು ಕೊಂಡನೆಂದು ತಿಳಿಯುತ್ತದೆ. ಇನ್ನೊಬ್ಬ ಸಮರ್ಥಶಾಲಿಯಾದ ಪಾಂಡ್ಯದೊರೆ ಮಾರವರ್ಮ ರಾಜಸಿಂಹನು ಪಲ್ಲವರನ್ನು ನಿಗ್ರಹಿಸಿ ಖ್ಯಾತನಾದನು. ಈತನು ಗೋಸಹಸ್ರ, ಹಿರಣ್ಯಗರ್ಭಾದಿ ಮಹಾದಾನಗಳನ್ನು ಮಾಡಿದನು. ಕೊರ್ಕೈ ಅಥವಾ ಮಧುರೆಯಲ್ಲಿ ಬೌದ್ಧಮತವು ಕ್ಷೀಣಸ್ಥಿತಿಯಲ್ಲಿದ್ದಿತು. ಬೌದ್ಧ ವಿಹಾರಗಳು ಜೀರ್ಣಾವಸ್ಥೆಯಲ್ಲಿದ್ದವು. ಹಿಂದೂ ದೇವಾಲಯಗಳು ಅಧಿಕಸಂಖ್ಯಾತವಾಗಿದ್ದವು. ದಿಗಂಬರ ಜೈನರೂ ಬಹುಸಂಖ್ಯಾತರಾಗಿದ್ದರು—ಎಂದು ಮುಂತಾಗಿ ಹ್ಯೂಯನ್‌ತ್ಸಾಂಗ್ ಬರೆದಿರುತ್ತಾನೆ.

ಕ್ರಿ. ಶ. ೮ನೆಯ ಶತಮಾನದ ಉತ್ತರಾರ್ಧದಿಂದ ೧೦ನೆಯ ಶತಮಾನದ ಉತ್ತರಾರ್ಧದವರೆಗೆ ಭಾರತದ ಹಾಗೂ ಕರ್ನಾಟಕದ ಚರಿತ್ರೆಯಲ್ಲಿ ಅತಿ ಪ್ರಸಿದ್ಧರಾಗಿ ರಾಜ್ಯವಾಳಿದ ಅರಸುಮನೆತನವೆಂದರೆ ರಾಷ್ಟ್ರಕೂಟರ ಮನೆತನ.

ರಾಷ್ಟ್ರಕೂಟರ ಕಾಲದ ಉತ್ತರಭಾರತ (ಕ್ರಿ.ಶ. ೮-೯ನೆಯ ಶತಮಾನಗಳು) :

ಪ್ರತೀಹಾರರು: ೧ನೆಯ ನಾಗಭಟನು ಅರಬ್ಬರ ದಾಳಿಯನ್ನು ಯಶಸ್ವಿಯಾಗಿ ಎದುರಿಸಿದ ಮೇಲೆ ಪ್ರತೀಹಾರರ ಮನೆತನ ೮ನೆಯ ಶತಮಾನದ ಪೂರ್ವಾರ್ಧದಲ್ಲಿ ಅಭ್ಯುದಯ ಸ್ಥಿತಿಗೇರಿತು. ಈ ಮನೆತನವು ಅಂದಿನಿಂದ ಒಂದು ಶತಮಾನಕಾಲ (ಕ್ರಿ. ಶ. ೭೫೦–೮೫೦) ಕನೌಜದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಈ ಮನೆತನದ ಮಹತ್ವವನ್ನು ಗುಪ್ತ ಮತ್ತು ಹರ್ಷವರ್ಧನನ ಕನೌಜದ ಸಾಮ್ರಾಜ್ಯಗಳೊಡನೆ ಅಳೆದುನೋಡಿ ಇದಕ್ಕೆ ಚರಿತ್ರಕಾರರು ಹೆಚ್ಚಿನ ಬೆಲೆಯನ್ನು ಕೊಟ್ಟಿರುವುದುಂಟು. ಹಾಗೆಯೇ ಈ ಮನೆತನದ ಭೋಜ (೮೩೬-೮೮೫) ಮತ್ತು ೧ನೆಯ ಮಹೇಂದ್ರಪಾಲ (೮೮೫). ಇವರನ್ನು ರಾಷ್ಟ್ರಕೂಟ ಮತ್ತು ಪಾಲರಲ್ಲಿ ಖ್ಯಾತಿವೆತ್ತ ಅರಸರೊಡನೆ ಹೋಲಿಸಿರುವುದುಂಟು. ಪ್ರತೀಹಾರರಿಗೆ ರಾಷ್ಟ್ರಕೂಟರು ಜನ್ಮವೈರಿಗಳು. ೯ನೆಯ ಶತಮಾನದ ಭಾರತದ ರಾಜಕೀಯ ಚರಿತ್ರೆಯಲ್ಲಿ ಆದಿವರಾಹ ಮಿಹಿರ ಮುಂತಾದ ಹೆಸರುಗಳಿದ್ದ ಭೋಜನು ಮಹಾಯೋಧನೂ ಸಾಮ್ರಾಜ್ಯನಿರ್ಮಾಪಕನೂ ಆಗಿದ್ದನು. ಭಗವತಿಯ ಭಕ್ತನಾಗಿದ್ದನು. ಕಾವ್ಯಮೀಮಾಂಸೆಯ ಕರ್ತೃವಾದ ರಾಜಶೇಖರ ಕವಿಯು ಮಹೇಂದ್ರಪಾಲ (೧) ಮತ್ತು ಆತನ ಪುತ್ರ ಮಹೀಪಾಲನ (ಕ್ರಿ. ಶ. ೯೧೭) ಇವರ ಆಸ್ಥಾನದಲ್ಲಿ ಕವಿಯಾಗಿದ್ದನು. ಮಹೇಂದ್ರಪಾಲನ ಗುರುವಾಗಿದ್ದನು. ಮಹೀಪಾಲನಿಗಾಗಿ ಬಾಲಭಾರತವನ್ನು ರಚಿಸಿದನು. ಅಲ್ಲದೆ ಕೆಲವರ ಅಭಿಪ್ರಾಯದಂತೆ ಕ್ಷೇಮೀಶ್ವರನು ಚಂಡಕೌಶಿಕ ನಾಟಕವನ್ನು ಈ ಮಹೀಪಾಲನಿಗಾಗಿ ರಚಿಸಿದಂತೆ ತಿಳಿಯುತ್ತದೆ. ಭೋಜನು ಕಟ್ಟಿನಿಲ್ಲಿಸಿದ್ದ ಪ್ರತೀಹಾರ ಸಾಮ್ರಾಜ್ಯವನ್ನು ಆಮೇಲಿನ ಇಬ್ಬರೂ ಉಳಿಸಿ ಬೆಳೆಸಿದರು. ಆದರೆ ಮಹೀಪಾಲನ ರಾಜ್ಯ ರಾಷ್ಟ್ರಕೂಟರ ದೆಸೆಯಿಂದ ನಿಷ್ಕಂಟಕವಾಗಿರುವುದು ಸಾಧ್ಯವಾಗದೆ ಸುಮಾರು ೯೧೫ ರಿಂದೀಚೆಗೆ ಅವರ ಕೆಲವು ಪ್ರದೇಶಗಳು ಕೈಬಿಟ್ಟು ಹೋದವು; ಮತ್ತೆ ಮೊದಲಿನಂತೆ ಚೇತರಿಸಿಕೊಳ್ಳುವುದೂ ಸಾಧ್ಯವಾಗಲಿಲ್ಲ. ಈ ಸಂಬಂಧದಲ್ಲಿ ಈ ಮಹೀಪಾಲನನ್ನು ರಾಷ್ಟ್ರಕೂಟ ಚಕ್ರವರ್ತಿ ಮುಮ್ಮಡಿ ಇಂದ್ರನ ಸಾಮಂತನಾಗಿದ್ದ ವೇಮುಲವಾಡ ಚಾಲುಕ್ಯ ನರಸಿಂಹನು ಸೋಲಿಸಿ ಗಂಗಾನದೀತಟದವರೆಗೆ ಬೆನ್ನಟ್ಟಿಕೊಂಡು ಹೋದಂತೆ ಪಂಪಭಾರತದಿಂದ ತಿಳಿಯುತ್ತದೆ. ಅಲ್ಲಿ ಈ ಪದ್ಯಗಳು ಹೀಗಿವೆ: ಸಿಡಿಲ್ವೊಲೆರಗುವ ನರಗನ। ಪಡೆಗಗಿದು ಮಹೀಪಳ ದಿಸಾಪಟಮೊಳಗಾದೆಯುಂ॥ ಕೆಡೆದೆಡೆಯೊಳ್ ಕೆಡೆಯದೆ ನಿಂ। ದೆಡೆಯೊಳ್ ನಿಲ್ಲದೆಯುಮೋಡಿದಂ ಮಹಿಪಾಲಂ॥ (೧–೩೭). ಗಂಗಾಪಾರ್ಥಿಯೊಳಾತ್ತ ತು।ರಂಗಮುಮಂ ಮಿಂಚಿಸಿ ನೆಗಟ್ದೆ ಕಾಳಪ್ರಿಯದೊಳ್ (ಕಾಳಪ್ರಿಯದೊಳ್) ॥ ಸಂಗತಗುಣನರಿಕೇಸರಿಯುಂಗೊಳೆ ಭುಜವಿಜಯ ಗರ್ವದಿಂ ಸ್ಥಾಪಿಸಿದಂ॥ (೧–೩೮)

ಪಾಲರು: ೮ನೆಯ ಶತಮಾನದ ಮಧ್ಯಭಾಗದಿಂದ ವಂಗದೇಶದಲ್ಲಿ ಪಾಲರ ಮನೆತನವು ಪ್ರಾಬಲ್ಯಕ್ಕೆ ಬಂದಿತು. ಅವರಿಗಿದ್ದ ಅರಾಜಕತ್ವ ಗೊಂದಲಗಳು ಕೊನೆಗೊಂಡವು. ಕ್ಷತ್ರಿಯನೂ ಬೌದ್ಧಮತೀಯನೂ ಆದ ಗೋಪಾಲನೆಂಬುವನಿಂದ (ಸು. ೭೫೦–೭೭೦) ಈ ಮನೆತನ ಮೊದಲಾಯಿತು. ಧರ್ಮಪಾಲ (೭೭೦–೮೧೦) ನೆಂಬುವನ ಕಾಲದಲ್ಲಿ ಪಾಲರು ಉಚ್ಛ್ರಾಯಸ್ಥಿತಿಗೆ ಮುಟ್ಟಿದರು. ಪ್ರತೀಹಾರ ರಾಷ್ಟ್ರಕೂಟರ ಹೋರಾಟದಿಂದ ಈತನಿಗೆ ಪ್ರಯೋಜನವಾದಂತೆ ತೋರುತ್ತದೆ. ಧರ್ಮಪಾಲನು ಸಮುದ್ರಗುಪ್ತನಂತೆಯೇ ನೂರು ಯುದ್ಧಗಳ ವಿಜಯಿಸಿದನು. ಮಹಾಸಾಮರ್ಥ್ಯದಿಂದ ಗೌಡಸಾಮ್ರಾಜ್ಯವನ್ನು ಕಟ್ಟಿ ಚಕ್ರವರ್ತಿ ಬಿರುದುಗಳನ್ನು ತಳೆದನು. ಉತ್ತರಾಪಥದ ಸ್ವಾಮಿಯಾದನು. ಕೆಲವು ಟಿಬೆಟಿನ ಮೂಲದ ಗ್ರಂಥಗಳಿಂದ ಈತನು ಬೌದ್ಧ ಮತಕ್ಕೆ ಒಳ್ಳೆಯ ಪ್ರೋತ್ಸಾಹವನ್ನು ಕೊಟ್ಟನೆಂದೂ ಬೌದ್ಧವಿಹಾರಗಳನ್ನು ನಿರ್ಮಿಸಿದನೆಂದೂ ತಿಳಿಯುವುದು. ವಿಕ್ರಮಶಿಲಾವಿಹಾರವು ನಳಂದೆಗೆ ಸಾಟಿಯಿಲ್ಲದ ಬೌದ್ಧವಿದ್ಯಾಕೇಂದ್ರವಾಗಿ ಬೆಳೆದಿದ್ದು ಈತನ ಕಾಲದಲ್ಲಿಯೇ ಎನ್ನಬಹುದು. ಈತನ ಪುತ್ರ ದೇವಪಾಲ (೮೧೦–೮೫೦)ನ ಕಾಲದಲ್ಲಿಯೂ ಬೌದ್ಧಮತಕ್ಕೆ ಒಳ್ಳೆಯ ಪ್ರೋತ್ಸಾಹ ದೊರೆಯಿತು. ಜಾವೆಯ ಬೌದ್ಧ ಮನೆತನದ ಬೇಡಿಕೆಯಂತೆ ನಳಂದದಲ್ಲಿ ವಿಹಾರವನ್ನು ಕಟ್ಟಿಸಲು ಅವನಿಗೆ ಈತನು ಐದು ಹಳ್ಳಿಗಳನ್ನು ಅದರ ಬೇಡಿಕೆಯಂತೆ ಕೊಟ್ಟನು. ಪಾಲರ ಪ್ರತಿಶಕ್ತಿಗಳಾಗಿದ್ದ ರಾಷ್ಟ್ರಕೂಟ ಪ್ರತೀಹಾರರೇ ಪಾಲರ ಅವನತಿಗೆ ಮುಂದೆ ಕಾರಣರಾದರು.

ಪೂರ್ವ ಪಶ್ಚಿಮ ಮತ್ತು ಮಧ್ಯಭಾರತಗಳ ಅರಸುಮನೆತನಗಳು: ರಾಷ್ಟ್ರಕೂಟರು ಪ್ರತೀಹಾರರು ಮತ್ತು ಪಾಲರು ಇವರ ಕಾಲದಲ್ಲಿಯೂ ಅದಕ್ಕೆ ಸ್ವಲ್ಪ ತರುವಾಯದಲ್ಲಿಯೂ ನೇಪಾಳ ಅಸ್ಸಾಂ ಮತ್ತು ಒರಿಸ್ಸಾಗಳಲ್ಲಿ ಕೆಲವು ಸ್ವತಂತ್ರ ರಾಜಮನೆತನಗಳು ಆಳ್ವಿಕೆಗೆ ನಡಸುತ್ತಿದ್ದವು. ಕ್ರಿ. ಶ. ೧೧ನೆಯ ಶತಮಾನದ ಹೊತ್ತಿಗೆ ನೇಪಾಳವು ಟಿಬೆಟ್ಟಿನ ಆಳೊತ್ತಿನಿಂದ ಮುಕ್ತವಾಯಿತು. ಅಸ್ಸಾಂನಲ್ಲಿ ಶಾಲಂಭನಿಂದ ಮೊದಲಾದ ಶಾಲಸ್ತಂಭ ಮನೆತನವು ಸುಮಾರು ಕ್ರಿ. ಶ. ೮೦೦ ರಿಂದ ಎರಡು ಶತಕಗಳ ಕಾಲ ಆಳಿತು. ಒರಿಸ್ಸಾದಲ್ಲಿ ಕರ. ಭಂಜ. ಮೊದಲಾದ ಮನೆತನಗಳು ಆಳುತ್ತಿದ್ದವು. ಪ್ರತೀಹಾರ ರಾಜ್ಯದ ಕಟ್ಟೊಡೆದ ಮೇಲೆ ಮಧ್ಯ ಮತ್ತು ಪಶ್ಚಿಮ ಭಾರತಗಳಲ್ಲಿ ಮೇಲೆದ್ದ ಸಣ್ಣ ಪುಟ್ಟ ಅರಸೊತ್ತಿಗೆಗಳಲ್ಲಿ ಬುಂದೇಲ್‌ಖಂಡವನ್ನು ಕ್ರಿ. ಶ. ೯ನೆಯ ಶತಕದಿಂದ ಚಂದೆಲ್ಲ ಅಥವಾ ಚಂದ್ರಾತ್ರೇಯವೆಂಬ ಮನೆತನವಾಳಿತು. ಚಂದೇಲರ ಹರ್ಷ(೯೦೦–೨೫) ನೆಂಬ ದೊರೆಯ ಕಾಲದಲ್ಲಿ ಭೀಮ ಅಥವಾ ಭೀಮಟನೆಂಬ ಕವಿ ಪ್ರತಿಭಾ ಚಾಣಕ್ಯ ಸ್ವಪ್ನದಶಾನನ ಮುಂತಾದ ೫ ನಾಟಕಗಳನ್ನು ಬರೆದನು. ಇವರ ರಾಜ್ಯಕ್ಕೆ ದಕ್ಷಿಣದ ಗಡಿಯಲ್ಲಿ ಚೇದಿವಂಶದ ಕಲಚುರಿಗಳಿದ್ದರು. ಇವರ ಎರಡು ಶಾಖೆಗಳಲ್ಲಿಯೊಂದು ತ್ರಿಪುರಿಯಲ್ಲಿಯೂ ಇನ್ನೊಂದು ಸರಯೂನದಿಯ ದಂಡೆಯಲ್ಲಿಯೂ ಆಳುತ್ತಿದ್ದವು. ಮಾಳವದ ಪರಮಾರರ ಮುಖ್ಯಶಾಖೆ ೯ನೆಯ ಶತಮಾನದ ಮೊದಲ ಪಾದದಲ್ಲಿ ಕಾಣಿಸಿಕೊಂಡಂತೆ ಭಾವಿಸಲಾಗಿದೆ. ಮಾಳವ ಮತ್ತು ಚೇದಿ ರಾಜ್ಯಗಳಿಗೆ ನೆರೆಯಲ್ಲಿ ಮಧ್ಯಭಾರತದ ಮತ್ತಮಯೂರ ಎಂಬ ಸ್ಥಳದಲ್ಲಿ ಚೌಲುಕ್ಯರು ೯ನೆಯ ಶತಮಾನದ ಮಧ್ಯಭಾಗದಿಂದ ಆಳುತ್ತಿದ್ದಂತೆ ತೋರುತ್ತದೆ. ಕ್ರಿ. ಶ. ೭–೮ನೆಯ ಶತಮಾನಗಳಿಂದಲೇ ಚಾಹಮಾನರ ಎರಡು ಶಾಖೆಗಳು ಲಾಟದಲ್ಲಿಯೂ ಶಾಕಂಭರೀ ಪ್ರದೇಶದಲ್ಲಿಯೂ (ಜಯಪುರಕ್ಕೆ ಹತ್ತಿರದ ಸಾಂಭರ್) ಅಸ್ತಿತ್ವದಲ್ಲಿದ್ದವು. ಕಾಶ್ಮೀರದಲ್ಲಿ ಲಲಿತಾಪೀಡ ಮುಕ್ತಾದಿತ್ಯನಾದಮೇಲೆ ಅವನ ಇಬ್ಬರು ಮಕ್ಕಳಿಂದ ಕಾರ್ಕೋಟ ಮನೆತನವು ಮುಂದುವರಿಯಿತು. ಕಲ್ಹಣನ ರಾಜತರಂಗಿಣಿ ಕಾಶ್ಮೀರದ ಚರಿತ್ರೆಗೊಂದು ಆಕರವಾಗಿದೆ. ಈ ಮನೆತನದ ವಜ್ರಾದಿತ್ಯನ ಮಗ ಜಯಾಪೀಡನ (ಕ್ರಿ. ಶ. ಸು. ೭೭೦) ಆಸ್ಥಾನದಲ್ಲಿ ಕ್ಷೀರ ಉದ್ಭಟ ದಾಮೋದರ ಮುಂತಾದ ವಿದ್ವಾಂಸರಿದ್ದರು. ಅವನ ಮತ್ತು ಅವಂತಿವರ್ಮನ ಕಾಲದಲ್ಲಿ ರಾಜಾನಕ ರತ್ನಾಕರನೆಂಬ ಕವಿ ಶಿವನ ಅಂಧಕಾಸುರ ವಿಜಯವನ್ನು ವರ್ಣಿಸುವ 'ಹರವಿಜಯ'ವೆಂಬ ಕಾವ್ಯವನ್ನು ಬರೆದನು. ಉತ್ಪಲರಾಜನ ಶಂಕರವರ್ಮನಕಾಲದಲ್ಲಿ ನ್ಯಾಯಮಂಜರೀಕರ್ತೃವಾದ ಜಯಂತನೂ ಕಾದಂಬರೀ ಕಥಾಸಾರ ಕರ್ತೃವಾದ ಅಭಿನಂದನೂ ಇದ್ದರು.

ಅರಬ್ಬರು ಕ್ರಿ. ಶ. ೮ನೆಯ ಶತಕದ ಮಧ್ಯಭಾಗದಿಂದ ಸಿಂಧ್‌ನಲ್ಲಿ ಹೇಗೋ ಇದ್ದುಕೊಂಡಿದ್ದರು. ಅವರು ಕಾಶ್ಮೀರದ ಲಲಿತಾದಿತ್ಯನಿಂದಲೂ ಪ್ರತೀಹಾರರ ನಾಗಭಟನಿಂದಲೂ ಬಲವಾಗಿ ಪೆಟ್ಟು ತಿಂದಿದ್ದುದರಿಂದ, ಇನ್ನೂ ಕೆಲವರ ಪ್ರತಿಭಟನೆ ಅವರಿಗೆ ಇದ್ದುದರಿಂದ, ಭಾರತದೊಳಕ್ಕೆ ಧೈರ್ಯವಾಗಿ ಮುನ್ನುಗ್ಗುವಂತಿರಲಿಲ್ಲ. ಹಿಂದೂ ದೊರೆಗಳು ಮನಸ್ಸುಮಾಡಿದ್ದರೆ ಅವರನ್ನು ಪೂರ್ತಿಯಾಗಿ ಭಾರತದಿಂದ ಹೊರಗಟ್ಟಿ ಮುಂದೆ ಮಹತ್ತಾಗಿ ಬರಲಿದ್ದ ವಿಪತ್ತನ್ನು ತಪ್ಪಿಸಬಹುದಾಗಿದ್ದಿತು. ಆದರೆ ರಾಜಕೀಯ ನೈಪುಣ್ಯ ದೂರದೃಷ್ಟಿ ಮೊದಲಾದವುಗಳ ಕೊರತೆಯಿಂದಲೂ ಇತರ ಕಾರಣಗಳಿಂದಲೂ ಅವರು ಅದನ್ನು ಅಲಕ್ಷ್ಯಮಾಡಿದರು.

ದಕ್ಷಿಣದಲ್ಲಿ: ವೇಂಗಿಯ ಚಾಲುಕ್ಯರು—ನಾಲ್ಕನೆ ವಿಷ್ಣುವರ್ಧನನ ಕಾಲದಲ್ಲಿ ರಾಷ್ಟ್ರಕೂಟ ಚಕ್ರವರ್ತಿ ಇಮ್ಮಡಿ ಗೋವಿಂದನು ಕೃಷ್ಣವೇಣಿ ಮತ್ತು ಮೂಸಿ ನದಿಗಳ ಸಂಗಮದಲ್ಲಿ ಆತನನ್ನು ಸೋಲಿಸಿ ಆತನ ರಾಜಕೋಶಾದಿಗಳನ್ನು ಸ್ವಾಧೀನಮಾಡಿಕೊಂಡನು. ರಾಷ್ಟ್ರಕೂಟ ಸಿಂಹಾಸನಕ್ಕೆ ಗೋವಿಂದನಿಗೂ ಧ್ರುವನಿಗೂ ನಡೆದ ಹೋರಾಟದಲ್ಲಿ ಗೋವಿಂದನಿಗೆ ರಾಷ್ಟ್ರಕೂಟರಿಂದ ದಮನ ಮಾಡಲ್ಪಟ್ಟಿದ್ದ ವೇಂಗಿ ಮೊದಲಾದ ರಾಜ್ಯಗಳ ಅರಸರು ನೆರವು ನೀಡಿಯೂ ಧ್ರುವನೇ ಸಿಂಹಾಸನ ಬರುವಂತಾಯಿತು. ಆದರೆ ನಾಲ್ಕನೆ ವಿಷ್ಣುವರ್ಧನನ ಪುತ್ರ ತ್ರಿಭುವನಾಂಕುಶ ಬಿರುದಾಂಕಿತನಾದ ಇಮ್ಮಡಿ ವಿಜಯಾದಿತ್ಯನು (೭೯೯–೮೪೭) ಮೊದಲು ರಾಷ್ಟ್ರಕೂಟರ ಮತ್ತು ಗಂಗರ ನೆರವು ಪಡೆದು ತನಗಿದಿರಾದ ತನ್ನ ಸೋದರ ಭೀಮನನ್ನು ನಿಗ್ರಹಿಸಿದ್ದು ಮಾತ್ರವಲ್ಲದೆ. ಸುಮಾರು ೧೨ ವರ್ಷಕಾಲ ನಡೆದ ಸುದೀರ್ಘ

ಯುದ್ಧ ಪರಂಪರೆಯಲ್ಲಿ ರಾಷ್ಟ್ರಕೂಟ ಮತ್ತು ಗಂಗರನ್ನೇ ಮಹಾಸಾಮರ್ಥ್ಯದಿಂದ ನಿಗ್ರಹಿಸಿ ಯಶೋಭಾಗಿಯಾದನು. ಆದರೆ ಈ ಯಶಸ್ಸು ಸ್ಥಿರವಾಗಲಿಲ್ಲ. ಸ್ವಲ್ಪಕಾಲದಲ್ಲಿಯೇ ೧ನೆಯ ಅಮೋಘವರ್ಷನು (ಕ್ರಿ. ಶ. ೮೧೪-೮೭೭) ಚಾಲುಕ್ಯರನ್ನು ತನ್ನ ರಾಜ್ಯದಿಂದ ಉಚ್ಚಾಟಿಸಿದನು. ಮುಂದೆ ಆಳಿದ ಕೆಲವರಲ್ಲಿ ಮುಮ್ಮಡಿ ವಿಜಯಾದಿತ್ಯನು ಮಹಾಸಮರ್ಥನಾದನು. ಆತನ ದಿಗ್ವಿಜಯೋದ್ಯೋಗವನ್ನು ಕೈಕೊಂಡು ದಕ್ಷಿಣದಲ್ಲಿ ಪಲ್ಲವ ಪಾಂಡ್ಯರು ಮೊದಲಾದವರನ್ನೂ ಉತ್ತರದಲ್ಲಿ ರಾಷ್ಟ್ರಕೂಟರು ಕಳಚುರಿಗಳು ಮೊದಲಾದವರನ್ನೂ ಸೋಲಿಸಿ ಖ್ಯಾತಿಗಳಿಸಿದನು. ವಿಜಯಾದಿತ್ಯನ ಸೋದರ ವಿಕ್ರಮಾದಿತ್ಯನ ಪುತ್ರ ೧ನೆಯ ಚಾಲುಕ್ಯ ಭೀಮನು (೮೯೨-೯೨೨) ದೀನದಲಿತರಿಗೂ ಸಾಧುಸಂತರಿಗೂ ಪರಮಾಪ್ತನೆನ್ನಿಸಿದ ಸಾತ್ತ್ವಿಕ ವ್ಯಕ್ತಿಯಾಗಿದ್ದನು. ರಾಷ್ಟ್ರಕೂಟರೊಡನೆ ವೆಂಗಿಯ ಚಾಲುಕ್ಯರ ಹೋರಾಟ ಈತನ ಕಾಲದಲ್ಲಿಯೂ ಮುಂದುವರಿಯಿತು. ರಾಷ್ಟ್ರಕೂಟ ಇಮ್ಮಡಿ ಕೃಷ್ಣನ ಸಾಮಂತನಾಗಿದ್ದ ವೇಮುಲವಾಡ ಚಾಲುಕ್ಯ ಶಾಖೆಯ ಬದ್ದೆಗನು ಈ ಚಾಲುಕ್ಯ ಭೀಮನನ್ನು ಪರಾಜಿತನನ್ನಾಗಿ ಮಾಡಿದ ವಿಷಯ ಪಂಪಭಾರತದಲ್ಲಿ "...ಮೊಸಳೆಯಂ ಪಿಡಿವಂತಿರೆ ನೀರೊಳೊತ್ತಿ ಭೀ। ಮನನ ತಿಗರ್ದದಿಂ ಪಿಡಿಯೆ ಮೆಯ್ಗಲಿ ಬದ್ದೆಗನನ್ನನಾವನೋ (೧-೨೬)" ಎಂದು ವರ್ಣಿಸಿದೆ. ಹೀಗೆಯೇ ೧ನೆಯ ಅಮ್ಮನ ಮಗ (೯೨೨-೯೨೯) ಐವಡಿ ವಿಜಯಾದಿತ್ಯನನ್ನು (ಕ್ರಿ. ಶ. ೯೨೯) ೧ನೆಯ ಯುದ್ಧಮಲ್ಲನ ಮಗ ತಾಳನು ದಾಯಾದ್ಯ ವೈರದಿಂದ (ಸು. ೯೨೭-೨೬) ಪದಚ್ಯುತಿಗೊಳಿಸಿ ತಾನೆ ದೊರೆಯೆನಿಸಿದಾಗ (ಕ್ರಿ. ಶ. ೯೨೯). ಹೇಗೊ ಸೆರೆಯಿಂದ ತಪ್ಪಿಸಿಕೊಂಡು ವಿಜಯಾದಿತ್ಯನು ಆಗ್ಗ ಪ್ರಬಲನಾಗಿದ್ದ ವೇಮುಲವಾಡದ ಇಮ್ಮಡಿ ಅರಿಕೇಸರಿಗೆ ಶರಣು ಬಂದನೆಂದು ತಿಳಿಯುವುದು. ಈ ಸಂದರ್ಭದ ಪಂಪಭಾರತದಲ್ಲಿ ಬಂದಿರುವ 'ಮುಂ ಬಿಜ್ಜನಂ ಕಾದರಿಗನುಮಿಪರಂ ಕಾವುದೇಂ ಚೋದ್ಯಮಾಯ್ತೇ' ಎಂಬ ಉಕ್ತಿಯನ್ನು ನೆನೆಯಬಹುದು (೧೧-೬೧). ಸಿಂಹಾಸನಕ್ಕಾಗಿ ವೆಂಗಿಯ ಚಾಲುಕ್ಯರಲ್ಲಿ ಹೀಗೆಯೇ ಅಂತಃಕಲಹಗಳು ಮುಂದುವರೆದಂತೆ ತೋರುತ್ತದೆ.

ಕಲಿಂಗದ ಗಂಗರು ಕ್ರಿ. ಶ. ೮ನೆಯ ಶತಮಾನದ ಪೂರ್ವಭಾಗದಿಂದಲೂ ಶ್ರೀಕಾಕುಳಂ ಜಿಲ್ಲೆಯ ಪ್ರದೇಶಗಳನ್ನು ಆಳುತ್ತಿದ್ದು ಕಾಲಕ್ರಮದಲ್ಲಿ ಅವರ ಕೆಲವು ಶಾಖೆಗಳು ಸ್ವೇತಕ ಜಯಂತಪುರ ಮುಂತಾದ ಕೇಂದ್ರಗಳಲ್ಲಿ ಸ್ಥಾಪನೆಯಾದಂತೆ ಕಂಡುಬರುತ್ತದೆ.

ದಕ್ಷಿಣ ಭಾರತ: ಪಲ್ಲವರ ಮನೆತನವು ದಂತಿವರ್ಮ ಮತ್ತು ಮುಮ್ಮಡಿ ನಂದಿವರ್ಮಾದಿಗಳ ಕಾಲದಿಂದ ಮುಂದುವರಿಯಿತು. ನಂದಿವರ್ಮನು ಶಿವಭಕ್ತನಾಗಿದ್ದು ತಮಿಳುಸಾಹಿತ್ಯವನ್ನು ಪೋಷಿಸಿದ ಹಾಗೆ ತಿಳಿಯುತ್ತದೆ. ನೃಪತುಂಗವರ್ಮನ (೮೭೨-೯೧೩) ಕಾಲದಲ್ಲಿ ಆತನ ಮಂತ್ರಿಸಾಮಂತಾದಿಗಳು ವಿದ್ಯೆಗೆ ವಿಶೇಷ ಪ್ರೋತ್ಸಾಹ ಕೊಟ್ಟರು. ೯ನೆಯ ಶತಮಾನದಲ್ಲಿ ಘಟಿಕಾಸ್ಥಾನಗಳು ವಿದ್ಯಾಸ್ಥಾನಗಳೆನಿಸಿದವು. ಅವಕ್ಕೆ ಕೊಟ್ಟ ಬ್ರಹ್ಮದೇಯಗಳು ವಿದ್ಯಾಭೋಗಗಳೆನ್ನಿಸಿದವು. ತಂಜಾವೂರಿನ ಚೋಳರು ಉರೈಯೂರ್ ಪ್ರಾಂತದಲ್ಲಿಯೇ ಅಭ್ಯುದಯಕ್ಕೆ ಬಂದರಾದರೂ ಅವರಿಗೂ ಉರೈಯೂರ್ ಚೋಳರಿಗೂ ಎಂತಹ ಸಂಬಂಧವಿದ್ದಿತ್ತೆಂದು ತಿಳಿಯದು. ಈ ಮನೆತನದ ಅರಸರು ನಿಷ್ಠಾವಂತ ಶೈವರಾಗಿದ್ದರು. ಕ್ರಿ. ಶ. ೮೫೩ರಲ್ಲಿ ಅಸಗನೆಂಬ ಸಂಸ್ಕೃತ ಕನ್ನಡ ಭಾಷೆಗಳಲ್ಲಿ ಕೃತಿರಚನೆ ಮಾಡಿರುವುದಾಗಿ ತಿಳಿದಿರುವ ಪ್ರಸಿದ್ಧಕವಿಯು ಚೋಳದೇಶದಲ್ಲಿಯೇ ವರಲಾ (ಧರಲಾ) ಎಂಬ ಪಟ್ಟಣದಲ್ಲಿ ಅವನ್ನು ರಚಿಸಿದನಾಗಿ 'ವರ್ಧಮಾನಚರಿತೆ' ಎಂಬ ಆತನ ಕೃತಿಯ ಪ್ರಶಸ್ತಿಭಾಗದಿಂದ ತಿಳಿಯುವುದು. ತೊಂಡಮಂಡಲದ ಸುಂದರ ಚೋಳನು ತಮಿಳು ಮತ್ತು ಸಂಸ್ಕೃತ ಸಾಹಿತ್ಯಗಳಿಗೆ ಪೋಷಕನಾಗಿ ಪ್ರಖ್ಯಾತನಾದನು. ಜಟಿಲವರ್ಮನೆಂಬ ಪಾಂಡ್ಯರಾಜನು (೭೬೫-೮೧೫) ಶಿವ ಮತ್ತು ವಿಷ್ಣುವಿನ ದೇವಾಲಯಗಳನ್ನು ಕಟ್ಟಿಸಿದನು.

(ಇದು ಚಾರಿತ್ರಿಕ ಕಾಲದಿಂದ ಕ್ರಿ. ಶ. ೧೧ನೆಯ ಶತಮಾನದವರೆಗಿನ ಭಾರತೀಯ ಜನಜೀವನದ ಪಕ್ಷಿನೋಟ. ಇದರಲ್ಲಿ ಕರ್ನಾಟಕವನ್ನು ಹೊರತುಪಡಿಸಿದೆ. ಸಂ.)

ಭಾರತದ ಏಕತೆ ಮತ್ತು ಐಕ್ಯತೆ ಇತ್ತೀಚಿನ ಘಟನೆಗಳ ಫಲವೆಂದೂ, ಅವು ಗತಕಾಲಗಳಲ್ಲಿ ಅಸ್ತಿತ್ವದಲ್ಲಿರಲಿಲ್ಲವೆಂದೂ ಭಾವಿಸಿದರೆ ತಪ್ಪಾದೀತು. ಭಾರತದ ಮೂಲಭೂತ ಐಕಮತ್ಯವು ಮಹಾಕಾವ್ಯಗಳಲ್ಲಿಯೂ ಮತ್ತು ಪುರಾಣಗಳಲ್ಲಿಯೂ ಇಡೀ ದೇಶಕ್ಕೆ ಕೊಟ್ಟಿರುವ 'ಭಾರತವರ್ಷ' (ಭರತನ ದೇಶ) ಎಂಬ ಹೆಸರಿನಿಂದ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. 'ಭಾರತೀ ಸಂತತಿ' ಎಂಬ ಅಭಿಧಾನ ಭಾರತದ ಜನರಿಗೆ ಅನ್ವಯಿಸುತ್ತವೆ.

ಉತ್ತರಮ್ ಯತ್ ಸಮುದ್ರಸ್ಯ ಹಿಮಾದ್ರೇಶ್ಚೈವ ದಕ್ಷಿಣಂ
ವರ್ಷಂ ತದ್ ಭಾರತಂ ನಾಮ ಭಾರತೀ ಯತ್ರ ಸಂತತಿ:

(ವಿಷ್ಣು ಪುರಾಣ II ೩, ೧)

'ಸಮುದ್ರದ ಉತ್ತರಕ್ಕೆ ಮತ್ತು ಹಿಮಾಚ್ಛಾದಿತ ಪರ್ವತಗಳ ದಕ್ಷಿಣಕ್ಕಿರುವ ನಾಡನ್ನು ಭಾರತವೆನ್ನುತ್ತಾರೆ. ಇಲ್ಲಿ ಭರತನ ವಂಶಜರು ವಾಸಿಸುತ್ತಾರೆ.'

ಈ ಏಕತಾ ಮನೋಭಾವ ದೇಶದ ಶಾಸ್ತ್ರಜ್ಞರಲ್ಲಿ, ರಾಜಕೀಯ ಚಿಂತಕರಲ್ಲಿ ಮತ್ತು ಕವಿಗಳಲ್ಲಿ ಬಂದಿರುವುದೂ ಇದೆ. ಅವರು ಭಾರತವನ್ನು ಹಿಮಾಲಯದಿಂದ ಸಮುದ್ರಗಳವರೆಗೆ ವ್ಯಾಪಿಸಿರುವ ಏಕ ಸಾಮ್ರಾಜ್ಯದ ಆಡಳಿತಕ್ಕೊಳಪಟ್ಟ ಸಹಸ್ರಯೋಜನಗಳ ಭೂಪ್ರದೇಶ ಎಂದಿದ್ದಾರೆ ಮತ್ತು ಉತ್ತರದ ಹಿಮಾವೃತ ಪರ್ವತಗಳಿಂದ ದಕ್ಷಿಣಕ್ಕೆ ಸೇತುಬಂಧನದವರೆಗೆ, ಪೂರ್ವದ ಬ್ರಹ್ಮಪುತ್ರಾ ಕಣಿವೆಯಿಂದ ಪಶ್ಚಿಮದ ಸಿಂಧೂನದಿಯ ಸಪ್ತಮುಖಗಳ ಆಚೆಯ ಭೂಪ್ರದೇಶದವರೆಗೆ ತಮ್ಮ ಪ್ರಭುತ್ವವನ್ನು ಹರಡಲು ಬಯಸಿದ ರಾಜರನ್ನು ಸ್ತುತಿಸಿದ್ದಾರೆ. ಕ್ರಿ.ಪೂ. ಮೂರನೆ ಶತಮಾನದಲ್ಲಿ ಈ ಉಪಖಂಡದಾದ್ಯಂತ ಧರ್ಮಪ್ರಸಾರಕನಾದ ಸಾಮ್ರಾಟನೊಬ್ಬನು ಸಾಮಾನ್ಯ ಪ್ರಜೆಗೂ ತನ್ನ ಧರ್ಮ ಸಂದೇಶವನ್ನು ಸಾರಲು ಪ್ರಾಕೃತ ಭಾಷೆಯೊಂದೇ ಸಾಧನವಾಗಿತ್ತು. ಕೆಲವು ಶತಮಾನಗಳ ತರುವಾಯ ಮತ್ತೊಂದು ಭಾಷೆ ಸಂಸ್ಕೃತ ಪ್ರಸಿದ್ಧಿಗೆ ಬಂದು ಈ ನಾಡಿನ ಮೂಲೆ ಮೂಲೆಯ ರಾಜಪತ್ರಾಗಾರಗಳನ್ನು ಪ್ರವೇಶಿಸಿತು. ಪ್ರಾಚೀನ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳನ್ನು ತಕ್ಷಶಿಲೆಯ ವಿದ್ವತ್ ಕ್ಷೇತ್ರಗಳಲ್ಲಿಯೂ, ಮೇಲಣ ಗಂಗಾಕಣಿವೆಯ ನೈಮಿಷಾರಣ್ಯದಲ್ಲಿಯೂ ಪಠಿಸುತ್ತಿದ್ದಂತೆಯೇ, ಕನ್ನಡನಾಡಿನ ಮತ್ತು ತಮಿಳು ದೇಶದ ರಾಜರ ಆಸ್ಥಾನಗಳಲ್ಲಿ ಸಹ ಅವುಗಳನ್ನು ಶ್ರದ್ಧೆಯಿಂದ ಪಠಿಸುತ್ತಿದ್ದರು. ವೇದ ಮತ್ತು ಪುರಾಣಗಳ ಪ್ರಾಚೀನ ಧರ್ಮ ಈಗಲೂ ಸಹ ಈ ನಾಡಿನ ಜನತೆಗೆ ನೆಮ್ಮದಿಯನ್ನುಂಟುಮಾಡುತ್ತಿವೆ. ಶಿವದೇವಾಲಯಗಳೂ, ವಿಷ್ಣುದೇವಾಲಯಗಳೂ ಹಿಮಾಚ್ಛಾದಿತ ಹಿಮಾಲಯ ಪರ್ವತಗಳಲ್ಲಿ ಕಂಗೊಳಿಸುವಂತೆಯೇ ಕೃಷ್ಣಾ ಮತ್ತು ಕಾವೇರಿ ಪ್ರಸ್ಥಭೂಮಿಗಳಲ್ಲಿ ಸಹ ರಾರಾಜಿಸುತ್ತಿವೆ. ಈ ದೇವಾಲಯಗಳಲ್ಲಿ ಪೂಜಿಸಲ್ಪಡುವ ಇತರ ಧರ್ಮಾವಲಂಬಿಗಳು ತಮ್ಮ ಹಿಂದೂ ಪರಿಸರದಿಂದ ಯಾವ ರೀತಿಯಲ್ಲಿಯೂ ತೊಂದರೆಗೊಳಗಾಗಿಲ್ಲ

(ಉದ್ಧೃತ–ಭಾರತದ ಪ್ರೌಢ ಇತಿಹಾಸ ಪು–೪–೫
ಮೂಲ– ಆರ್. ಸಿ. ಮಜುಮ್‌ದಾರ್, ಎಚ್. ಸಿ. ರಾಯಚೌಧರಿ,
ಕಾಲೀಕಿಂಕರದತ್ತ; ಅನು: ಎನ್. ಎಸ್. ಶಾರದಾಪ್ರಸಾದ್)

ವಿ. ಎಸ್. ಶೇಷಗಿರಿರಾವ್

ಗಾಂಧೀದರ್ಶನ—ಕೆಲವು ತಾತ್ತ್ವಿಕ ಟಿಪ್ಪಣಿಗಳು

ಆಧುನಿಕ ಭಾರತೀಯ ತಾತ್ತ್ವಿಕ ಚಿಂತನೆಯಲ್ಲಿ ಗಾಂಧೀಜಿಯವರದು ಬಹುದೊಡ್ಡ ಹೆಸರು. ಅವರು ಜೀವನದ ಸಕಲ ರಂಗಗಳ ಬಗ್ಗೆಯೂ ನಿರ್ದಿಷ್ಟ ಹಾಗೂ ಖಚಿತ ಅಭಿಪ್ರಾಯಗಳನ್ನು ಹೊಂದಿದ್ದ ಚಿಂತನಶೀಲ. ವಿವಿಧ ಅನಿಸಿಕೆಗಳ ಕೇವಲ ಕಲಸುಮೇಲೋಗರವಲ್ಲ ಅವರ ತತ್ತ್ವದರ್ಶನ. ತತ್ತ್ವಶಾಸ್ತ್ರದ ಪ್ರಾಧ್ಯಾಪಕರಂತೂ ಅವರಾಗಿರಲಿಲ್ಲ. ಆದಾಗ್ಯೂ ವ್ಯವಸ್ಥಾಬದ್ಧವಾದ ಸುಸಂಗತ ತರ್ಕಶುದ್ಧ ವಿಚಾರಸರಣಿ ಅವರ ದರ್ಶನದಲ್ಲಿ ಇಲ್ಲದಿಲ್ಲ. ಸಮಾಜದ ರೂಢಮೂಲ ಸಮಸ್ಯೆಗಳ ತೀಕ್ಷ್ಣ ವಿಶ್ಲೇಷಣೆ, ವರ್ಗೀಕರಣ, ಸ್ಪಷ್ಟತೆ ಮತ್ತು ಅವುಗಳ ಪರಿಹಾರೋಪಾಯಗಳನ್ನು ಕಂಡುಹಿಡಿಯುವ ಪ್ರಯತ್ನದಲ್ಲಿ ಅವರು ಜ್ವಲಂತ ಕಿಡಿಯಾಗಿ ಪ್ರಜ್ವಲಿಸುತ್ತಾರೆ. ತಮ್ಮ ಸಮರ್ಪಕ ವಿಚಾರಧಾರೆಯಿಂದ ಜಗತ್ತಿನ ಕಣ್ಣು ತೆರೆಯಿಸಿದ ಕೆಲವೇ ಮಹಾನ್‌ವ್ಯಕ್ತಿಗಳಲ್ಲಿ ಒಬ್ಬರಾಗಿದ್ದಾರೆ. ಸದ್ದುಗದ್ದಲವಿಲ್ಲದೆ ತಮ್ಮ ಅಂತಃಸಾಕ್ಷಿಗೆ ಸಮ್ಮತಿಸಿದ್ದನ್ನು ಪಟ್ಟುಹಿಡಿದು ಮಾಡುವುದು ಅವರ ಜಾಯಮಾನವಾಗಿತ್ತು. ಅವರ ಮಾನವ ಪ್ರೇಮ ಮತ್ತು ಮಾನವ ಸೇವೆಯ ನಿಷ್ಠೆ ಅಚಲವಾದುದು. ಅವರ ದರ್ಶನದ ಪ್ರಮುಖ ಲಕ್ಷಣಗಳನ್ನು ಹೀಗೆ ಹಿಡಿದಿಡಬಹುದು:

೧. ಸರಳತೆ

ಗಾಂಧೀಜಿ ಸರಳತೆಯನ್ನು ಜೀವನದ ಹಿರಿಮೆಯನ್ನಾಗಿಸಿಕೊಂಡಿದ್ದ ಕರ್ಮಯೋಗಿ. ಜೀವನದಲ್ಲಿ ಸೊಬಗಿರಬೇಕಾದರೆ ಸರಳತೆ ಇರಬೇಕೆಂಬುದು ಅವರ ಸ್ಪಷ್ಟ ಅಭಿಪ್ರಾಯವಾಗಿತ್ತು. ಸರಳ ಸ್ವಭಾವವನ್ನು ಮೈಗೂಡಿಸಿಕೊಂಡಿದ್ದ ಅವರು ನಿಷ್ಠಾವಂತ ಸಮಾಜ ಸೇವಕರಾಗಿದ್ದರು. ಅವರ ಪ್ರಕಾರ ಸರಳತೆ ಯಥಾರ್ಥವಾದ ಸೌಖ್ಯ ತೃಪ್ತಿಗಳ ನೆಲೆ; ಸೇವಾಸಾಮರ್ಥ್ಯದ ಚಿಲುಮೆ; ಸ್ವಗೌರವದ ಗಣಿ; ಮಾನವ ಬಾಂಧವ್ಯವನ್ನು ಕೂಡಿಸುವ ಆತ್ಮೀಯ ಕೊಂಡಿ; ಆತ್ಮವಿಶ್ವಾಸದ ಭದ್ರಕೋಟೆ; ಪ್ರಾಮಾಣಿಕತೆಯ ಉತ್ಕೃಷ್ಟ ಅಸ್ತಿಭಾರ. ಸರಳತೆ ಕಾರ್ಪಣ್ಯವಲ್ಲ; ಜೀವನದ ರಮಣೀಯತೆ ಮತ್ತು ಲಾವಣ್ಯಗಳು ಮುಪ್ಪುರಿಗೊಂಡ ಸುಮಧುರ ರಸಾಯನ.

ಗಾಂಧೀಜಿಯವರ ಪ್ರಕಾರ ಸಮರಸವಾದದ್ದೆಲ್ಲ ಸರಳವಾದುದು; ವಿಷಮವಾದದ್ದೆಲ್ಲ ಸಂಕೀರ್ಣವಾದುದು. ಜೀವನ ಸಂಕೀರ್ಣವಾದಷ್ಟೂ ಗೊಂದಲವೇ ಹೆಚ್ಚು. ಸಂಕೀರ್ಣತೆಯೆಂದರೆ ಎಲ್ಲಾ ವಿಧವಾದ ಸಂಕೋಲೆಗಳಿಂದ ಬಂಧಿತವಾಗುವುದು. ಸಂಕೀರ್ಣ ಜೀವನ ಅನಂತ ಅತೃಪ್ತಿಗಳ ಮುಳ್ಳಿನ ದಾರಿ, ಸಂಕೀರ್ಣತೆಯೇ ಜೀವನದ ದುರಂತ ಎಂದು ಗಾಂಧೀಜಿ ದೃಢವಾಗಿ ನಂಬಿದ್ದರು. ಜೀವನ ಸಂಕೀರ್ಣತೆಯೆಡೆಗೆ ಸಾಗುವುದನ್ನು 'ಪ್ರಗತಿ' ಎಂದು ಕರೆಯುವುದು ತಪ್ಪು ಗ್ರಹಿಕೆ; ಅದು ಅಜ್ಞಾನದ ಮಹಾಪಾಪ; ಸರಳತೆ ಏರುಮುಖವಾಗಿ ಸಂಕೀರ್ಣತೆ ಇಳಿಮುಖವಾದಾಗ ಜೀವನ ಅತ್ಯಂತ ಆಕರ್ಷಕವಾಗುತ್ತದೆ ಎಂಬ ಅವರ ನಿಲುವು ತುಂಬ ಮಾರ್ಮಿಕವಾಗಿದೆ.

'ಸರಳಜೀವನ, ಉದಾತ್ತ ಚಿಂತನೆ' (Simple living. High thinking) ಗಾಂಧೀಜಿ

ಯುವರ ಆದರ್ಶವಾಗಿತ್ತು. ಸರಳ ಜೀವನದಲ್ಲಿ ಎಲ್ಲ ವಿಧದ ಎಳೆತ-ಸೆಳೆತಗಳು, ಜಿಗುಪ್ಸೆ-ಬಳಲಿಕೆಗಳು, ನಿರಾಶೆ-ನಿಟ್ಟುಸಿರುಗಳು ಹಮ್ಮು-ಬಿಮ್ಮುಗಳು ಮಿಥ್ಯಾರೋಪ-ಅಧ್ಯಾಸಗಳ ಅಭಾವವಿದೆ. ಅದು ಶಾಂತಿಯ ನೆಲೆ; ಐಹಿಕ ಕ್ಲಿಷ್ಟ ಸಮಸ್ಯೆಗಳಿಗೆ ಏಕೈಕ ಪರಿಹಾರ. ಅದರ ಮೂರ್ತರೂಪವೇ ನಿಸ್ಪೃಹತೆ ಹಾಗೂ ನಿರ್ಲಿಪ್ತತೆ. ಅದಕ್ಕೆ ಕೊಡಬಹುದಾದ ಬಹಳ ಒಳ್ಳೆಯ ಉದಾಹರಣೆಯೆಂದರೆ ರೈತನ ಜೀವನ. "ಪ್ರಕೃತಿಗನುಸಾರವಾಗಿ ನಡೆ" (Live according to Nature) ಎಂಬ ಗ್ರೀಕ್ ತಾತ್ತ್ವಿಕರಾದ ಸ್ಟೋಯಿಕರ ತೀರ್ಮಾನವೇ ಗಾಂಧೀಜಿಯವರ ಜೀವನವಾಕ್ಯ. ಮಾನವ ಮೂಲತಃ ಸಂಕೀರ್ಣ ಸ್ವಭಾವದ್ದವನು ಎಂಬ ಕೆಲವು ಆಧುನಿಕ ಮನಶ್ಶಾಸ್ತ್ರಜ್ಞರ ಅಭಿಪ್ರಾಯವನ್ನು ಗಾಂಧೀಜಿ ಸ್ವಲ್ಪವೂ ಒಪ್ಪುವುದಿಲ್ಲ. ಸರಳತೆ ಮಾನವನ ಗುಣಧರ್ಮ; ಕೃತ್ರಿಮತೆ, ಕೃತಕತೆಗಳಿಂದ ವಿಮುಖನಾಗಿರುವುದೇ ಅವನ ಸ್ವಭಾವ; ನಿಷ್ಕಪಟತ್ವವೇ ಅವನ ನೈಸರ್ಗಿಕ ಸ್ಥಿತಿ; ಅವನು ಸರಳ ರೀತಿಯಲ್ಲಿ ನೈಸರ್ಗಿಕವಾಗಿ ಬೆಳೆಯಬೇಕು; ಆಗಲೇ ಅವನು ನಿಷ್ಕಲ್ಮಷನಾಗಿರಲು ಸಾಧ್ಯ ಎಂಬ ಪ್ರಸಿದ್ಧ ಫ್ರೆಂಚ್ ದಾರ್ಶನಿಕನೂ ರಾಜನೀತಿಜ್ಞನೂ ಆದ ರೂಸೋನ ಮಾನವ ಸ್ವಭಾವದ ಪ್ರತಿಪಾದನೆಯನ್ನು ಗಾಂಧೀಜಿ ಅಕ್ಷರಶಃ ಒಪ್ಪಿ ಅನುಮೋದಿಸುತ್ತಾರೆ.

ಗಾಂಧೀಜಿಯವರ ಪ್ರಕಾರ ಸರಳತೆಯನ್ನು ಸಂಗೀತ, ಸಾಹಿತ್ಯ, ಕುಶಲಕಲೆ—ಹೀಗೆ ಜೀವನದ ಎಲ್ಲಾ ರಂಗಗಳಲ್ಲಿಯೂ ತಪ್ಪದೆ ಅಳವಡಿಸಿ ಅನುಸರಿಸಬೇಕು. ಅದರ ಸರಳವೂ, ಸ್ಪಷ್ಟವೂ, ನೇರವೂ ಮನಮೋಹಕವೂ ಸುಂದರವೂ ಆದ ಅಂಗಭಾಷೆಯು ಗದ್ಯಶೈಲಿಯನ್ನು ಇಷ್ಟೇ ತಪ್ಪದೆ ಪಾಲಿಸಬೇಕು.

೨. ಆಧ್ಯಾತ್ಮಿಕತೆ (Spirituality)

ಆಧುನಿಕ ಪ್ರಪಂಚದ ಜಟಿಲ ಸಮಸ್ಯೆಗಳು ನೂರೆಂಟು. ಅವುಗಳು ಪರಿಹಾರವಾಗದೇ ಉಳಿದಿರುವುದಕ್ಕೆ ಅದು ಆಧ್ಯಾತ್ಮದ ಬಗ್ಗೆ ತೋರಿರುವ ನಿರ್ಲಕ್ಷ್ಯವೇ ಬಹು ಮುಖ್ಯವಾದ ಕಾರಣ ಎಂಬ ಕೂಗು ಈಗೀಗ ಐಹಿಕ ಶಿಕ್ಷಣವೇತ್ತರಲ್ಲೂ ವಿಜ್ಞಾನಿಗಳಲ್ಲೂ ಕೆಲವು ಜ್ಞಾನಿಗಳಲ್ಲೂ ಕೇಳಿಬರುತ್ತಿದೆ. ಇದನ್ನು ಗಾಂಧೀಜಿ ಎತ್ತಿಹಿಡಿಯುತ್ತಾರೆ. ಅವರ ಪ್ರಕಾರ ಆಧ್ಯಾತ್ಮ ಎಲ್ಲ ರಂಗಗಳ ಅಂತರಂಗ; ಅದನ್ನು ಸಾತ್ವಿಕಶಕ್ತಿ; ಅಗೋಚರ, ನಿರ್ಮಲ ಚೇತನ; ಸಕಲ ಮಾನವರ ಅಂತಸ್ಸತ್ವ; ಸಚ್ಚಿದಾನಂದ ಸ್ವರೂಪ. ಅದನ್ನೆಂದಿಗೂ ನಿರ್ಲಕ್ಷಿಸಲಾಗದು. ಗಾಂಧೀಜಿ ಭಾರತದ ಸ್ವಾತಂತ್ರ್ಯ ಶಿಲ್ಪಿಗಳ ಪ್ರಧಾನ ಆಚಾರ್ಯರಾದರೂ, ಸ್ವಾತಂತ್ರ್ಯ ಲಭಿಸಿದ ಮೇಲೆ ಯಾವುದೇ ಉನ್ನತ ಪದವಿಯ ಅಧಿಕಾರ ಪೀಠವನ್ನು ಅಲಂಕರಿಸಲಿಲ್ಲ; ಅವರು ಕೋಟ್ಯಾಧೀಶರೂ ಆಗಿರಲಿಲ್ಲ. ಅವರಲ್ಲಿದ್ದ ಒಂದೇ ಒಂದು ಶಕ್ತಿಯೆಂದರೆ ಆಧ್ಯಾತ್ಮಶಕ್ತಿ. ಅದೇ ಅವರ ಆಸ್ತಿ. ಶ್ರದ್ಧಾವಂತ ಧಾರ್ಮಿಕ ದಂಪತಿಗಳ ಸುಪುತ್ರರಾಗಿ ಜನಿಸಿದ ಅವರಿಗೆ ಬಾಲ್ಯದಲ್ಲಿಯೇ ಆಧ್ಯಾತ್ಮದ ಬೀಜ ಅಂಕುರವಾಗಿತ್ತು.

ಭಾರತಕ್ಕೆ ಸ್ವಾತಂತ್ರ್ಯವನ್ನು ಗಳಿಸಿಕೊಡುವಲ್ಲಿ ಮುಂದೆ ಅವರು ಬಳಸಿದ ತಂತ್ರ 'ಸತ್ಯಾಗ್ರಹ' ಆಧ್ಯಾತ್ಮಿಕತೆಯ ಮತ್ತೊಂದು ರೂಪ. ಆಧ್ಯಾತ್ಮ ಸತ್ಯವಾದ ಆತ್ಮ, ಸ್ವಾತಂತ್ರ್ಯದ ಹಾಗೂ ಜ್ಞಾನದ ಆಶ್ರಯ; ಅದು ಅಜರಾಮರ; ಅನಂತ; ನಿತ್ಯ; ಶಾಶ್ವತ; ತ್ರಿಕಾಲಾಬಾಧಿತ; ಅಭೌತಿಕ; ಏಕ; ಅಖಂಡ. ಅನಾತ್ಮ ಅಥವಾ ದೇಹ ಅಜ್ಞಾನ, ಬಂಧನಗಳ ನೆಲೆ; ಅದು ಯಾವಾಗಲೂ ಚೇತನಶಕ್ತಿಯ (ಆತ್ಮ) ಅಧೀನದಲ್ಲಿರಬೇಕು. ಮಾನವಸಮಾಜ ಎಂಬುದು ಆತ್ಮಗಳ ಒಂದು ಸಮೂಹ; ಆಧ್ಯಾತ್ಮ ಪ್ರಕಾರದ ಅರಿವಿಕೆ; ಅದು ಕೇವಲ ಭೌತಜೀವಿಗಳ ಸಂಘವಲ್ಲ. ಆತ್ಮ-ಅನಾತ್ಮಗಳ ನಡುವೆ ನಿರಂತರವಾದ ಹೋರಾಟ ನಡೆದರೂ ಅಂತಿಮ ಜಯ ಆತ್ಮಕ್ಕೇ ಹೊರತು ಅನಾತ್ಮಕ್ಕಲ್ಲ ಎಂಬುದು ಗಾಂಧೀಜಿಯವರ ಪ್ರಬಲ ನಂಬಿಕೆ, ಅವರ ಆಶಾವಾದ. ಈ ಜಗತ್ತಿನಲ್ಲಿ ಮೌಲ್ಯವೆಂಬುದೇನಾದರೂ ಇದ್ದರೆ ಅದು ಆತ್ಮದ ದೃಷ್ಟಿಯಲ್ಲಿ ಮಾತ್ರ. ಹೀಗೆ ಆಧ್ಯಾತ್ಮವಸ್ತುವಾದ ಆತ್ಮ ಇಡೀ ಜಗತ್ತಿನ ಪ್ರತಿಷ್ಠಾನ, ಆಧಾರ. ಅಸ್ತಿಭಾರವನ್ನೇ ನಿರ್ಲಕ್ಷಿಸಿದರೆ ಪ್ರಗತಿ ಹೇಗೆ ತಾನೇ ಸಾಧ್ಯವಾದೀತು?

ನೈಜ ಆಧ್ಯಾತ್ಮಿಕತೆಯ ಬಗ್ಗೆ ಜನರಲ್ಲಿ ತಪ್ಪುಗ್ರಹಿಕೆಯಿದೆ. ಆಧ್ಯಾತ್ಮಿಕತೆ ಎಂಬ ಜಬರದಸ್ತಿನ ಆಟಾಟೋಪವಲ್ಲ; ಬಾಹ್ಯಾಡಂಬರವಲ್ಲ; ಆಷಾಢಭೂತತನವಲ್ಲ; ಅನೈತಿಕ ಕಾರ್ಯಚಟುವಟಿಕೆಗಳ

ಸಹಿತವಾದ ಹೊರವೊದಿಕೆಯಲ್ಲ; ಅನ್ಯಾಯ, ಅನಾಚಾರ ಅಕ್ರಮಗಳ ಸ್ವೀಕಾರವಲ್ಲ; ಕೀಳುತನ, ಕಂದಾಚಾರ ಮೌಢ್ಯಗಳ ಪ್ರಸಾರ ಮಾಧ್ಯಮವಲ್ಲ; ಲೋಭಿಯ ನಾಜೂಕತನವಲ್ಲ; ವ್ಯಕ್ತಿಯ ದೊಡ್ಡಸ್ತಿಕೆಯಲ್ಲ; ಮಾನವನ ಲೋಪದೋಷಗಳನ್ನೂ ದೌರ್ಬಲ್ಯಗಳನ್ನೂ 'ನೈಸರ್ಗಿಕ ಪ್ರಕ್ರಿಯೆ' ಎಂಬ ಮರೆಯಲ್ಲಿ ಮುಚ್ಚಿ ಸಾಗಿಸಿಕೊಳ್ಳುವ 'ಜಾಣತನ'ವಲ್ಲ; ಬೇಜವಾಬ್ದಾರಿಯ ದುಂಡುತನವಲ್ಲ; ಕೈಲಾಗದವನ ನಾಟಕೀಯ ಕೂಗಲ್ಲ; ನರಸತ್ತ ಬದುಕಲ್ಲ; ಮಾರುಕಟ್ಟೆಯಲ್ಲಿ ಮಾರಾಟವಾಗುವ ವಸ್ತುವಲ್ಲ; ಗೊಡ್ಡು ಆಚಾರವಲ್ಲ; ತೋರಿಕೆಯ ಢಂಬಾಚಾರವಂತೂ ಅಲ್ಲವೇ ಅಲ್ಲ. ಅದು ಅಂತರಿಕವಾದ ಹೃದಯಕ್ಕೆ ಸಂಬಂಧಿಸಿದ ಸಾರ್ವತ್ರಿಕ ಅದಮ್ಯ ಪ್ರೇರಕ ಶಕ್ತಿ. ಗಾಂಧೀಜಿಯವರ ಸ್ಪಷ್ಟ ಮಾತುಗಳಲ್ಲಿ ಹೇಳುವುದಾದರೆ: "ಪವಿತ್ರಗ್ರಂಥಗಳನ್ನು ಓದಿ, ತಾತ್ತ್ವಿಕ ಚರ್ಚೆಗಳಲ್ಲಿ ಭಾಗವಹಿಸುವ ವಿಚಾರವಲ್ಲ ಆಧ್ಯಾತ್ಮಿಕತೆ. ಅದು ಹೃದಯ ವಿಕಾಸದ ವಿಚಾರ. ಅದಕ್ಕೆ ಅಳೆಯಲಾಗದ ಬಲವಿದೆ. ಆಧ್ಯಾತ್ಮಿಕತೆಗೆ ನಿರ್ಭೀತಿ ಪ್ರಥಮ ಅವಶ್ಯಕತೆ. ಹೇಡಿಗಳು ಎಂದಿಗೂ ನೀತಿವಂತರಾಗಲಾರರು."[1]

ನೈಜ ಆಧ್ಯಾತ್ಮಿಕತೆ ಜೀವನದ ಸರ್ವಾಂಗಗಳನ್ನೂ ಆವರಿಸಬೇಕು. ರಾಜಕೀಯ ಕ್ಷೇತ್ರದಲ್ಲಂತೂ ಅದರ ಅವಶ್ಯಕತೆ ಅತಿ ಹೆಚ್ಚಿನದು. ರಾಜಕೀಯಕ್ಕೂ ಆಧ್ಯಾತ್ಮಿಕತೆಗೂ ಯಾವ ಸಂಬಂಧವೂ ಇಲ್ಲವೆಂದು ಹೇಳುವುದು ತಿಳಿಗೇಡಿತನದ ಪರಮಾವಧಿ. ರಾಜಕೀಯ ಕಾರ್ಯಚಟುವಟಿಕೆಗಳಿಗೆ ಆಧ್ಯಾತ್ಮವೇ ಬುನಾದಿ. ಆಧ್ಯಾತ್ಮಿಕ ನೆಲಗಟ್ಟಿಲ್ಲದ ಯಾವ ಚಟುವಟಿಕೆಯೂ ಅಪೂರ್ಣ. ಧರ್ಮ ಬಾಹಿರವಾದ ರಾಜಕಾರಣ ಅರ್ಥಶೂನ್ಯ ಎಂದು ಗಾಂಧೀಜಿ ಅಭಿಪ್ರಾಯ ಪಡುತ್ತಾರೆ.

೩. ನೈತಿಕತೆ (Morality)

ಗಾಂಧೀಜಿಯವರ ದೃಷ್ಟಿಯಲ್ಲಿ ಈ ವಿಶ್ವವು ಅಡ್ಡಾದಿಡ್ಡಿಯಾದ ಯದ್ವಾತದ್ವಾವಾದ ಒಂದು ಅನಿರ್ದಿಷ್ಟ ವ್ಯವಸ್ಥೆಯಲ್ಲ. ಅದರಲ್ಲಿ ಒಂದು ಕ್ರಮವಿದೆ; ಒಂದು ವ್ಯವಸ್ಥೆಯಿದೆ; ಒಂದು ನೀತಿ ಇದೆ. ವಿಶ್ವದಲ್ಲಿ ಕೇವಲ ಸ್ವಾಭಾವಿಕ ವ್ಯವಸ್ಥೆಯೊಂದೇ ಇಲ್ಲ; ಅಲ್ಲಿ ನೈತಿಕ ವ್ಯವಸ್ಥೆಯೂ ಉಂಟು. ಗಾಂಧೀದರ್ಶನ, ವಿಧಿ ನಿಷೇಧಗಳ ಪರಿಕಲ್ಪನೆಗಳಿಂದ ತುಂಬಿಹೋಗಿದೆ. ಅವರದು ಬಹಳ ಬಿಗಿಯಾದ ಕಠಿಣ ಜೀವನ ಕ್ರಮ. ಇವರು ಪುರಾತನ ಗ್ರೀಕ್ ನೀತಿಶಾಸ್ತ್ರಜ್ಞರಾದ ಸ್ಟೋಯಿಕ್‌ರನ್ನು ನೆನಪಿಗೆ ತರುತ್ತಾರೆ. ನೀತಿ ನಿಯಮಗಳಿಗೆ ಭದ್ರವಾಗಿ ಅಂಟಿಕೊಂಡಿದ್ದ ಅವರನ್ನು ಆಧುನಿಕ ಸ್ಟೋಯಿಕರೆಂದು ಕರೆಯುವುದೇ ರೂಢಿ. ಗಾಂಧೀದರ್ಶನದಲ್ಲಿ ನೀತಿಗೆ ಸಂಬಂಧಪಟ್ಟ ತೀರ್ಮಾನಗಳು ನೀತಿಯ ಮೂಲಸೂತ್ರಗಳಿಂದ, ಜ್ಯಾಮಿತಿಯ ತೀರ್ಮಾನಗಳಷ್ಟು ಖಚಿತವಾಗಿ ಹೊರಹೊಮ್ಮುತ್ತವೆ. ಪಾಶ್ಚಾತ್ಯ ತಾತ್ತ್ವಿಕ ಬರಹಗಾರನಾದ ಸಿ.ಇ.ಎಮ್ ಜೋಡ್ ಗಾಂಧೀಜಿಯವರನ್ನು 'ನೀತಿಯ ನಿಷ್ಣಾತ' (moral genius) ಎಂದೇ ವರ್ಣಿಸಿದ್ದಾನೆ.

ಜರ್ಮನಿಯ ಪ್ರಸಿದ್ಧ ತಾತ್ತ್ವಿಕ ಚಿಂತಕನಾದ ಕ್ಯಾಂಟ್‌ನಂತೆ ಗಾಂಧೀಜಿಯವರೂ 'ಕರ್ತವ್ಯ' ಪರಿಕಲ್ಪನೆಯನ್ನು ತಮ್ಮ ನೀತಿಶಾಸ್ತ್ರದಲ್ಲಿ ಒತ್ತಿ ಹೇಳಿದ್ದಾರೆ. 'ಕರ್ತವ್ಯಕ್ಕಾಗಿ ಕರ್ತವ್ಯ' ಅವರ ನೈತಿಕ ಜೀವನದ ಒಳಗುಟ್ಟು. ಸುಂದರವಾದದ್ದು ಪರಮ ಸತ್ಯವೆಂದು ರವೀಂದ್ರರು ಹೇಳಿದರೆ, ಮಾಡೇ ತೀರಬೇಕಾದ್ದು (ಕರ್ತವ್ಯ) ಪರಮ ಸತ್ಯವೆಂದು ಗಾಂಧೀಜಿ ಹೇಳುತ್ತಾರೆ. ಕರ್ತವ್ಯ ಎಂಬುದು ಯಾವ ಷರತ್ತು ಮತ್ತು ನಿಬಂಧನೆಗಳಿಗೂ ನಿಲುಕದ್ದು; ಯಾವ ಫಲಾಪೇಕ್ಷೆಯೂ ಇಲ್ಲದೆ ಬೇಷರತ್ತಾಗಿ ಮಾಡಲೇ ಬೇಕಾದ ಕಾರ್ಯವೇ ಕರ್ತವ್ಯ. ಕರ್ತವ್ಯಚ್ಯುತನಾಗುವುದಕ್ಕಿಂತ ಮಿಗಿಲಾದ ಘೋರಪಾಪ ಮತ್ತೊಂದಿಲ್ಲ ಎಂದು ಗಾಂಧೀಜಿ ಪ್ರತಿಪಾದಿಸುತ್ತಾರೆ. ಈಶಾವಾಸ್ಯ ಉಪನಿಷತ್ತು ಇಡೀ ಜಗತ್ತಿನ ನೈತಿಕ ಜೀವನದ ಸಾರಸಂಗ್ರಹವಾಗಿದೆ ಎಂದು ಅವರು ನಂಬಿದ್ದರು.

ಮಾನವ ಶಿಸ್ತಿನ ಅವತಾರವಾಗಬೇಕು. ನೀತಿ ಸೂತ್ರಗಳನ್ನು ಬಾಯಿಪಾಠಮಾಡಿಕೊಂಡು ಒಂದು ಭಾಷಣ ಬಿಗಿಯುವವನು ನಿಜವಾದ ನೀತಿವಂತನೆನಿಸುವುದಿಲ್ಲ. ತನ್ನ ನಿಜಸ್ವರೂಪವನ್ನು ಅರಿತು ತನುಮನ ಅಂತಃಕರಣಗಳನ್ನು ಹದವಾಗಿ ಮಿಳಿತಗೊಳಿಸಿದಾಗ ಮಾತ್ರ ಅವನು ನಿಜವಾದ ನೀತಿವಂತನೆನಿಸುತ್ತಾನೆ. ಕೀರ್ತಿ ಕಾಮಿಯಾಗಲೀ ಆಡಂಬರ ಪ್ರಿಯನಾಗಲೀ ನಿಜವಾದ ನೀತಿವಂತ

ನಾಗಲಾರ. ಸ್ವಾರ್ಥದ ಸೋಂಕು ತಗಲಿದರೆ ಎಂತಹ ಉತ್ತಮ ಕಾರ್ಯವೂ ನೀತಿಯ ಜಾಡನ್ನು ಬಿಡುತ್ತದೆ. ಯಾರ ಮನಸ್ಸು ಸ್ವಾರ್ಥ ದ್ವೇಷಗಳಿಂದ ಲೇಪಿತವಾಗಿಲ್ಲವೋ, ಯಾರು ನಿಷ್ಕಾಮ ಸೇವೆ ಮಾಡುತ್ತ ನಿರ್ಮಲಜೀವನವನ್ನು ನಡೆಸುವರೋ ಅವರೇ ನಿಜವಾದ ನೀತಿವಂತರೆಂದು ಗಾಂಧೀಜಿ ಅಭಿಪ್ರಾಯ ಪಡುತ್ತಾರೆ.

ನೀತಿನಿಯಮಗಳ ಒಂದು ಪ್ರಮುಖ ಅಂಶವೆಂದರೆ ಅವುಗಳ ನಿತ್ಯ ನಿರ್ವಿಕಾರತ್ವ. ಅವುಗಳಿಗೆ ದೇಶ, ಜಾತಿ ಬೇಧವಿಲ್ಲ. ಅವು ನಮ್ಮ ಭಾವನೆ, ಅಭಿಪ್ರಾಯಗಳಿಗೆ ಅಧೀನವಲ್ಲ; ಅವು ಪೂರ್ಣ ಸ್ವತಂತ್ರ. ಮಾನವರಾಶಿಯಂತೆ ಅವು ಅಸ್ಥಿರವಲ್ಲ; ಶಾಶ್ವತ, ನಿತ್ಯ ಸತ್ಯ. ರಾಜ್ಯಶಾಸನಕ್ಕಿಂತಲೂ ನೀತಿಶಾಸನವೇ ಹೆಚ್ಚೆಂದು ಗಾಂಧೀಜಿಯವರು ಹೇಳುತ್ತಾರೆ. ಆಧುನಿಕ ಜಗತ್ತಿನಲ್ಲಿ ಮಾನವೀಯ ಮೌಲ್ಯಗಳು ಮಸಿಯಾಗಿ ಹೋಗುತ್ತಿರುವುದನ್ನು ನೋಡಿ ನೊಂದು ಬೆಂದ ಜೀವ ಅವರದು.

ನೈತಿಕತೆಗೆ ಸಂಬಂಧಪಟ್ಟ ಇನ್ನೊಂದು ಅಂಶವನ್ನು ಇಲ್ಲಿ ಹೇಳಬೇಕು. ಅದೇ ನೀತಿಗೂ ಧರ್ಮಕ್ಕೂ ಇರಬೇಕಾದ ಸಂಬಂಧ. ಇಲ್ಲಿ ಧರ್ಮವೆಂದರೆ ಯಾವುದೋ ಒಂದು ಮತ, ಪಂಥ ಎಂದು ಅರ್ಥವಲ್ಲ; ಸಂಪ್ರದಾಯದ ಬರಿ ಹೊರಗಿನ ಕಟ್ಟುಪಾಡುಗಳೂ ಅಲ್ಲ. ಈ ಜಗತ್ತಿನಲ್ಲಿ ಎಷ್ಟು ಮತ ಪಂಥಗಳಿವೆಯೋ ಅವೆಲ್ಲಕ್ಕೂ ಮೂಲಾಧಾರವಾದ ಶಕ್ತಿ. ಅದು ಒಬ್ಬ ವ್ಯಕ್ತಿಯ ಸಂಪೂರ್ಣ ವ್ಯಕ್ತಿತ್ವವನ್ನೇ ಮಾರ್ಪಡಿಸುವಂತಹುದು. ಒಟ್ಟಾರೆ ದೇವರೆಡೆಗೆ ಮಾನವರನ್ನು ಕೊಂಡೊಯ್ಯುವಂತಹುದು.[2] ಗಾಂಧೀಜಿಯವರ ಪ್ರಕಾರ ಧರ್ಮ ಮತ್ತು ನೀತಿಗಳ ನಡುವಿನ ಸಂಬಂಧ ಅತ್ಯಂತ ನಿಕಟವಾದುದು. ಪ್ರತ್ಯೇಕಿಸಲಾಗದು. ಧರ್ಮ ಬಾಹಿರವಾದ ನೀತಿ, ನೀತಿಯೇ ಅಲ್ಲ; ಅದು ಶೂನ್ಯತೆಗೆ ಸಮಾನ. ಹಾಗೆಯೇ ನೀತಿಬಾಹಿರವಾದ ಧರ್ಮ ಧರ್ಮವೇ ಅಲ್ಲ. ಧಾರ್ಮಿಕವಂತನೆಂದು ಹೇಳಿಕೊಂಡು ಮೆರೆಯುವವನು ನೀತಿಹೀನನಾಗಿದ್ದರೆ ಅವನು ನಿಜವಾದ ಧಾರ್ಮಿಕನಲ್ಲ; ಮಿಥ್ಯಾಚಾರಿ. ಹಾಗೆಯೇ ನೀತಿವಂತನಾದವನು, ಅವನು ಯಾವುದೇ ಧರ್ಮದ ಅನುಯಾಯಿಯಾಗಿರದಿದ್ದರೂ, ನಿಜವಾದ ಧಾರ್ಮಿಕ ಎಂದು ಗಾಂಧೀಜಿ ಅಭಿಪ್ರಾಯ ಪಡುತ್ತಾರೆ. ಹೀಗೆ, ಅವರ ಪ್ರಕಾರ, ನೀತಿ ಮತ್ತು ಧರ್ಮ ಒಂದೇ ಅರ್ಥವನ್ನುಳ್ಳ ಎರಡು ಪದಗಳು. ಧಾರ್ಮಿಕ ಆಚರಣೆಗಳು ಮತ್ತು ಲೌಕಿಕ ವ್ಯವಹಾರಗಳ ನಡುವೆ ಬೇಧವಿರಕೂಡದೆಂದು ಗಾಂಧೀಜಿ ಸಾರುತ್ತಾರೆ.

೪. ವಿರೋಧ ಕಲ್ಪನೆಗಳ ಸುಮಧುರ ಸಮನ್ವಯ

(ಅ) ಅನುಭಾವ ಮತ್ತು ಕ್ರಿಯಾತ್ಮಕವಾದಗಳ ಅಪೂರ್ವಸಂಗಮ: (A rare blend of Activism and Mysticism)

ಗಾಂಧೀದರ್ಶನದ ಇನ್ನೊಂದು ಪ್ರಮುಖ ಲಕ್ಷಣವೆಂದರೆ ಪರಸ್ಪರ ವಿರೋಧವೆನಿಸುವ ಪರಿಕಲ್ಪನೆಗಳ ಸುಮಧುರ ಸಮನ್ವಯ. ಉದಾಹರಣೆಗೆ, ಅವರ ದರ್ಶನದಲ್ಲಿ, ಕ್ರಿಯಾಶೀಲತೆ ಮತ್ತು ಅನುಭಾವ ಈ ಎರಡೂ ಅತ್ಯಂತ ಆಕರ್ಷಕ ರೀತಿಯಲ್ಲಿ ಬಿಂಬಿತವಾಗಿದೆ. ಗಾಂಧೀಜಿ ಪ್ರಧಾನತಃ ಕರ್ಮಯೋಗಿ. ಕಾಯಕದಲ್ಲಿ ಕೈಲಾಸವನ್ನು ಕಾಣುವ ಅನಾಸಕ್ತಯೋಗಿ. ನೈತಿಕ ಕಾರ್ಯವನ್ನು ಎಸಗುವುದು—ಅದು ಎಷ್ಟೇ ಅಲ್ಪವಿರಲಿ—ಪ್ರವಚನಗಳನ್ನು ಕೊಡುವುದಕ್ಕಿಂತ ಸಾವಿರಪಾಲು ಹೆಚ್ಚೆಂದು ಅವರು ದೃಢವಾಗಿ ನಂಬಿದ್ದರು. ತಮ್ಮನ್ನು ಭೇಟಿಮಾಡಲು ಸಾಲುಗಟ್ಟಿ ನಿಂತಿರುತ್ತಿದ್ದ ಪ್ರೇಕ್ಷಕರನ್ನು ಕಾಣುವಾಗಲೂ ತಮ್ಮ ನೂಲುವ ಚರಕವನ್ನು ನಿಲ್ಲಿಸುತ್ತಿರಲಿಲ್ಲ. 'ಚಕ್ರದ ಸಂಗೀತ'ವನ್ನು ಕೇಳಲು ಅವರೆಂದೂ ತಪ್ಪಿಸಿಕೊಳ್ಳುತ್ತಿರಲಿಲ್ಲ. ಸೋಜಿಗವೆಂದರೆ ಅದೇ ಕ್ಷಣದಲ್ಲಿ ಗಾಂಧೀಜಿಯವರು ಅನುಭಾವಿಯ ಲಕ್ಷಣಗಳನ್ನು ಹೊಂದಿರುತ್ತಿದ್ದರು. ಅವರ ಕಣ್ಣುಗಳಲ್ಲಿ ಯಾವಾಗಲೂ ದೈವಿಕ ಕಾಂತಿ ಮಿಂಚುತ್ತಿತ್ತು. ಎಷ್ಟೇ ಜನಜಂಗುಳಿಯಿದ್ದರೂ ಅವರು ಧ್ಯಾನಮಗ್ನಸ್ಥಿತಿಯಿಂದ ವಂಚಿತರಾಗುತ್ತಿರಲಿಲ್ಲ. ಪ್ರಸಿದ್ಧ ಅನುಭಾವಿಗಳಂತೆ ಅವರು ಸಮಾಧಿ ಸ್ಥಿತಿಗೇರಿಯದಿದ್ದರೂ, ಅನುಭಾವದ ಆಳವನ್ನು ಅಳೆಯುವ ಸಾಮರ್ಥ್ಯ ಶುಷ್ಕತರ್ಕಕ್ಕಿಲ್ಲ ಎಂಬ ಅವರ ನಿಲುವು, ಅವರ ದರ್ಶನದಲ್ಲಿ ಕ್ರಿಯಾಶೀಲತೆ ಮತ್ತು ಅನುಭಾವಗಳು ಒಟ್ಟೊಟ್ಟಿಗಿರುವುದನ್ನು ಸ್ಪಷ್ಟಪಡಿಸುತ್ತದೆ.

(೮) ಆದರ್ಶ ಹಾಗೂ ವಸ್ತುಸ್ಥಿತಿವಾದಗಳ (Idealism and Realism) ಸಮನ್ವಯ:

ಹಾಗೆಯೇ ಆದರ್ಶ ಮತ್ತು ವಸ್ತುಸ್ಥಿತಿವಾದಗಳ ಸಮನ್ವಯವನ್ನು ಇಲ್ಲಿ ನಾವು ಕಾಣುತ್ತೇವೆ. ಗಾಂಧೀಜಿ ತಮ್ಮನ್ನು 'ಅನುಷ್ಠಾನ ಆದರ್ಶವಾದಿ' (Practical Idealist) ಎಂದು ಕರೆದುಕೊಂಡಿದ್ದಾರೆ. ಸಾಮಾನ್ಯವಾಗಿ ಆದರ್ಶವಾದಿ ಭಾವನಾಜೀವಿ. ವಸ್ತುಸ್ಥಿತಿ ಅವನಿಗೆ ತೀರ ಕಹಿ. ಕೆಲವು ಸಲ ಹುಚ್ಚು. ವಸ್ತುಸ್ಥಿತಿವಾದಿ ಮೊಂಡ ನಿಷ್ಠುರವಾದಿ; ಭಾವನಾಲೋಕ ಅವನ ಕಡುವೈರಿ. ಆದರೆ ಗಾಂಧೀದರ್ಶನದಲ್ಲಿ ಈ ಎರಡು ಕಲ್ಪನೆಗಳ ಸಂಗಮವಿದೆ. ಧ್ಯೇಯವಿಲ್ಲದ ಬದುಕು ಬದುಕೇ ಅಲ್ಲ. ಒಂದು ಆದರ್ಶವನ್ನು ಸಾಕ್ಷಾತ್ಕರಿಸಿಕೊಂಡಮೇಲೆ ಅದು ವಸ್ತುಸ್ಥಿತಿಯಾಗುತ್ತದೆ ಎಂಬುದು ಸಾಮಾನ್ಯ ಅಭಿಪ್ರಾಯ. ಆದರೆ ಆಶ್ಚರ್ಯವೆಂದರೆ ವಸ್ತುಸ್ಥಿತಿಗೂ ಆದರ್ಶಕ್ಕೂ ಅಂತರ ಎಂದೆಂದಿಗೂ ಇದ್ದೇ ಇರುತ್ತದೆ. ಆದರ್ಶವೆಂದೂ ವಸ್ತುಸ್ಥಿತಿಯಾಗದು; ವಸ್ತುಸ್ಥಿತಿ ಎಂದೂ ಆದರ್ಶವನ್ನು ಮುಟ್ಟದು. ವಸ್ತುಸ್ಥಿತಿ. ಆದರ್ಶವನ್ನು ಮುಟ್ಟುವ ಪ್ರಯತ್ನ ಒಂದು ನಿರಂತರ ಕ್ರಿಯೆ. ವಸ್ತುಸ್ಥಿತಿ. ಆದರ್ಶದ ಹತ್ತಿರ ಹತ್ತಿರ ಹೋದ ಹಾಗೆಲ್ಲಾ, ಆದರ್ಶ ಇನ್ನೂ ದೂರ ಸರಿಯುತ್ತದೆ. ಜೀವನವೆಂಬುದು ಪೂರ್ಣತೆಯೆಡೆಗೆ ಸಾಗುತ್ತಿರುವ ಒಂದು ಸತತ ಪ್ರಯತ್ನ. ಈ ನಿರಂತರ ಪ್ರಯತ್ನದಲ್ಲೇ ಜೀವನದ ಗುಟ್ಟು ಅಡಗಿರುವುದು. ಪೂರ್ಣತೆಯನ್ನು ಯಾವಾಗ ಮುಟ್ಟುತ್ತೇವೆಂಬುದು ತಿಳಿಯಲಾಗದ ವಿಷಯ. ಹಾಗೆಂದ ಮಾತ್ರಕ್ಕೆ ಅದನ್ನು ಅರಸುವ ಪ್ರಯತ್ನ (ಅನುಷ್ಠಾನ) ನಿಷ್ಪ್ರಯೋಜಕವೆಂದಲ್ಲ. ಹೀಗೆ ಆದರ್ಶ ಮತ್ತು ವಸ್ತುಸ್ಥಿತಿ ಇವೆರಡರ ಸಮನ್ವಯ ದೃಷ್ಟಿಯಲ್ಲಿ ಜೀವನದ ಸಾರ್ಥಕ್ಯ ಇದೆ ಎಂದು ಗಾಂಧಿ ಪ್ರತಿಪಾದಿಸುತ್ತಾರೆ.

(೯) ನಿರಪೇಕ್ಷವಾದ (Absolutism) ಮತ್ತು ದೈವಾಸ್ತಿತ್ವವಾದ (Theism)ಗಳ ಸಮನ್ವಯ:

ಗಾಂಧೀದರ್ಶನದಲ್ಲಿ ನಿರಪೇಕ್ಷವಾದ ಮತ್ತು ದೈವಾಸ್ತಿತ್ವವಾದಗಳ ಸಮನ್ವಯ ಪ್ರಯತ್ನವನ್ನು ಕಾಣುತ್ತೇವೆ. ತಮ್ಮ ಬಾಲ್ಯದಿಂದಲೇ ವೈಷ್ಣವ ಧರ್ಮದ ಪ್ರಭಾವಕ್ಕೊಳಗಾಗಿದ್ದ ಅವರು ದೈವಾಸ್ತಿತ್ವವಾದದಲ್ಲಿ ಅತೀವ ಶ್ರದ್ಧೆಯನ್ನು ಇಟ್ಟಿದ್ದರು. ದೈವಾಸ್ತಿತ್ವವಾದದ ಪ್ರಕಾರ ಅಂತಿಮ ಸತ್ಯ ದೇವರು. ಅದು ಸಾಕಾರವೂ ಸಗುಣವೂ ಸವಿಶೇಷವೂ ಆದುದಾಗಿದೆ. ಅದು ಕಲ್ಯಾಣ ಗುಣಗಳ ಆಗರ. ಅದಕ್ಕೆ ತನ್ನದೇ ಆದ ಲೋಕ ಉಂಟು; ಸೃಷ್ಟಿ ಸ್ಥಿತಿ ಲಯಗಳು ಅದರ ಕಾರ್ಯ. ಸಂಸಾರದ ಬಂಧನದಲ್ಲಿ ಬಿದ್ದು ತೊಳಲಾಡುತ್ತಿರುವ ಜೀವಿಯ ಬಗ್ಗೆ ದೇವರಿಗೆ ಅತೀವ ಅನುಕಂಪವಿದೆ ಜೀವಿಯನ್ನು ಯಾತನೆಯ ತೊಳಲಾಟದಿಂದ ಬಿಡಿಸಲು ಅವಕಾಶವನ್ನು ಕಾಯುತ್ತಿರುತ್ತಾನೆ. ಯೋಗ್ಯಕಾಲ ಬಂದಾಗ ತಾನೇ ಮುಂದೆ ಬಂದು ಅದರ ಯಾತನೆಯನ್ನು ಕೊನೆಗೊಳಿಸುವುದರ ಮೂಲಕ ತನ್ನ ಪ್ರೀತಿಯನ್ನು ತೋರಿಸುತ್ತಾನೆ ಎಂದು ದೈವಾಸ್ತಿತ್ವವಾದ ಪ್ರತಿಪಾದಿಸುತ್ತದೆ.

ಗಾಂಧೀಜಿ ತಮ್ಮ ವಿಚಾರಧಾರೆಯನ್ನು ಮುಂದುವರಿಸಿದಂತೆಲ್ಲಾ ಅವರಲ್ಲೂ ಸತ್ಯವೇ ದೇವರೆಂದು ಕಂಡುಬಂದಮೇಲೆ ನಿರಪೇಕ್ಷವಾದವನ್ನು ತಮ್ಮದನ್ನಾಗಿ ಮಾಡಿಕೊಳ್ಳುತ್ತಾರೆ. ನಿರಪೇಕ್ಷವಾದದ ಪ್ರಕಾರ ಅಂತಿಮ ಸತ್ಯ ನಿರಾಕಾರವೂ, ನಿರ್ಗುಣವೂ, ನಿರ್ವಿಶೇಷವೂ, ನಿರವಯವವೂ ನಿರ್ವಿಷಯಕವೂ ನಿರಂಜನವೂ ಆದುದಾಗಿದೆ. ಮಾನವ ತನ್ನ ಭಾಷೆಯ ಮೂಲಕ ಹೇಳುವ ಯಾವ ಗುಣವೂ ಆ ನಿರಪೇಕ್ಷತತ್ತ್ವವನ್ನು ಮುಟ್ಟುವುದಿಲ್ಲ. ಅದು ಗುಣಾತೀತವಾದದ್ದು; ಆಕಾರ ಕಲ್ಪನೆ ಅದನ್ನು ಮಿತಗೊಳಿಸುವುದರಿಂದ ನಿರಾಕಾರ ತತ್ತ್ವವೆಂದೇ ಅದು ಕರೆಯಲ್ಪಡುತ್ತದೆ. ಸತ್ಯವೇ ದೇವರೆಂದು ಒಪ್ಪುವ ಗಾಂಧೀಜಿ. ಸತ್ಯವು ನಿರಾಕಾರವೂ, ಅನಂತವೂ, ಸಾರ್ವತ್ರಿಕವೂ ಆಗಿರುವಂತೆ, ದೇವರೂ ನಿರಾಕಾರ, ನಿರವಯವನೆಂದೂ ಒಪ್ಪಬೇಕಾಗಿ ಬರುತ್ತದೆ. ಹಾಗಾದರೆ ಗಾಂಧೀಜಿ, ದೇವರು ಸಗುಣ, ಸಾಕಾರನೆಂಬ ನಂಬಿಕೆಯನ್ನು ತಿರಸ್ಕರಿಸಿದಂತಾಯಿತೆ? ಇಲ್ಲವೆಂಬುದೇ ಅವರ ನಿಜ ಉತ್ತರ. ಏಕೆಂದರೆ ಅವರು ಇನ್ನೂ ಮುಂದುವರಿದು ದೇವರು ಶುದ್ಧ ಪ್ರೇಮವೆಂದೂ ತಿಳಿಸುತ್ತಾರೆ. ಪ್ರೇಮ ಅಥವಾ ಪ್ರೀತಿ ನಿರಾಕಾರವಲ್ಲ, ನಿರವಯವವೂ ಆಗಿರಲು ಸಾಧ್ಯವಿಲ್ಲ; ಪ್ರೇಮ ಅಥವಾ ಪ್ರೀತಿ ಯಾವಾಗಲೂ ಮೂರ್ತಸ್ವರೂಪದ್ದು. ಹೀಗೆ ಸತ್ಯವೇ ದೇವರೆಂದಾಗ ನಿರಪೇಕ್ಷವಾದವನ್ನೂ, ದೇವರು ಶುದ್ಧ ಪ್ರೇಮವೆಂದಾಗ ದೈವಾಸ್ತಿತ್ವವಾದವನ್ನು ಸಮನಾಗಿ ಒಪ್ಪುವುದರ ಮೂಲಕ ನಿರಪೇಕ್ಷ-

ದ್ವೈವಾಸ್ತಿತ್ವವಾದಗಳೆರಡನ್ನೂ ಬಹಳ ಸ್ವಾರಸ್ಯವಾಗಿ ತಮ್ಮ ತಾತ್ತ್ವಿಕ ಚಿಂತನೆಯಲ್ಲಿ ಸಮನ್ವಯಗೊಳಿಸುತ್ತಾರೆ.

೫. ಪ್ರಯೋಜನವಾದ (Pragmatism)

ಗಾಂಧೀಜಿಯವರ ಪ್ರಕಾರ ಸತ್ಯ ಅನುಷ್ಠಾನ ಯೋಗ್ಯವಾಗಿರಬೇಕು. ಸತ್ಯ ತಾರ್ಕಿಕವಾಗಿ ಸತ್ಯವಾಗಿದ್ದರೂ ಅನುಷ್ಠಾನ ಯೋಗ್ಯವಾಗಿಲ್ಲದಿದ್ದರೆ ಅದು ಸತ್ಯವೇ ಅಲ್ಲ ಎಂಬ ಅವರ ನಿಲುವು ಪ್ರಯೋಜನವಾದವನ್ನು ತೀವ್ರರೀತಿಯಲ್ಲಿ ಪ್ರತಿಪಾದಿಸಿದ ಅಮೇರಿಕದ ತಾತ್ತ್ವಿಕ ಚಿಂತಕನಾದ ವಿಲಿಯಂ ಜೇಮ್ಸ್‌ನನ್ನು ನೆನಪಿಗೆ ತರುತ್ತದೆ. ಅಂದರೆ ಸತ್ಯವನ್ನು ಸತ್ಯವನ್ನಾಗಿಸುವುದು ಅದರ ಅನುಷ್ಠಾನಯೋಗ್ಯತೆ. ಗಾಂಧೀಜಿ ಯಾವುದನ್ನು ಸತ್ಯವೆಂದು ನಂಬಿದ್ದರೋ ಅದನ್ನು ತಮ್ಮ ನಿತ್ಯಜೀವನದಲ್ಲಿ ಅನುಷ್ಠಾನಮಾಡುತ್ತಿದ್ದರು. ಅವರ ಮಾತುಗಳಲ್ಲಿ ಹೇಳುವುದಾದರೆ: "ನನ್ನ ಮಾತು ಮತ್ತು ಬರಹಗಳು. ಸತ್ಯ ಅಹಿಂಸೆಯ ಮಹಾತತ್ತ್ವಗಳನ್ನು ರಕ್ತಗತ ಮಾಡಿಕೊಳ್ಳಲು ನಿಮಗೆ ನೆರವು ನೀಡುವಷ್ಟರ ಮಟ್ಟಿಗೆ ಮಾತ್ರ ಉಪಯುಕ್ತ. ಅವುಗಳನ್ನು ನೀವು ಹಾಗೆ ರಕ್ತಗತ ಮಾಡಿಕೊಳ್ಳದಿದ್ದರೆ ನನ್ನ ಬರಹಗಳಿಂದ ನಿಮಗೆ ಯಾವ ಪ್ರಯೋಜನವೂ ಇಲ್ಲ."[3]

೬. ಆಶ್ರಮ ಜೀವನದ ಅವಶ್ಯಕತೆ

ಗಾಂಧೀಜಿಯವರು ಆಶ್ರಮ ಜೀವನವನ್ನು ಬಾಳಲು ಕರೆಯುತ್ತಿದ್ದಾರೆ. ಹಿಂದೂ ಧರ್ಮ ನಂಬಿ ನಡೆದು ಬರುತ್ತಿರುವ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸನ್ಯಾಸ ಆಶ್ರಮಗಳು ಮಾನವನ ಸಮಗ್ರ ವ್ಯಕ್ತಿತ್ವವನ್ನು ರೂಪಿಸುವ ಬಹಳ ಮಹತ್ವಪೂರ್ಣವಾದ ಮೆಟ್ಟಿಲುಗಳಾಗಿವೆ ಎಂಬುದನ್ನು ಅವರು ಒಪ್ಪಿ, ಅವನ್ನು ಇಂದಿನ ಆಧುನಿಕ ಯುಗದಲ್ಲೂ ಯುಕ್ತ ರೀತಿಯಲ್ಲಿ ಅನುಸರಿಸಬೇಕೆಂದು ಕರೆಯುತ್ತಿದ್ದಾರೆ. ಗೃಹಸ್ಥನಾಗಿದ್ದುಕೊಂಡೇ ಮಾನವ ಹೇಗೆ ಬ್ರಹ್ಮಚರ್ಯ, ವಾನಪ್ರಸ್ಥ ಮತ್ತು ಸನ್ಯಾಸ ಆಶ್ರಮಗಳನ್ನು ಅಳವಡಿಸಿಕೊಳ್ಳಬಹುದು ಎಂಬುದನ್ನು ತಮ್ಮ ಜೀವನದಲ್ಲಿ ಪ್ರತ್ಯಕ್ಷವಾಗಿ ತೋರಿಸಿದ್ದಾರೆ. ಸರಳ ಜೀವನವನ್ನು ಪ್ರೋತ್ಸಾಹಿಸುತ್ತಿದ್ದ ಅವರು ಸಾಬರಮತಿ ಮತ್ತು ವಾರ್ಧಾಗಳಲ್ಲಿ ಆಶ್ರಮಗಳನ್ನು ಸ್ಥಾಪಿಸಿದ್ದರು.

೭. ಸತ್ಯ, ಪ್ರೇಮ, ಅಹಿಂಸೆ ಮತ್ತು ಅಭಯ—ಈ ಗುಣಗಳ ಪ್ರಾಮುಖ್ಯತೆ ಮತ್ತು ಅವಶ್ಯಕತೆ

ಗಾಂಧೀದರ್ಶನಕ್ಕೆ ಜೀವಂತಿಕೆಯನ್ನು ತಂದುಕೊಟ್ಟಿರುವ ಪರಿಕಲ್ಪನೆಯೇ ಶುದ್ಧ ಪ್ರೇಮ ಅಥವಾ ಪ್ರೀತಿ. ಅವರ ತಾತ್ತ್ವಿಕ ಚಿಂತನೆಯಲ್ಲಿ ಅದು ಹೀರಿರುವ ಪಾತ್ರ ಬಹಳ ಹಿರಿದು. ಎಲ್ಲಾ ಬೇಧಭಾವನೆಗಳನ್ನೂ ಒಂದೇ ಬಾರಿಗೆ ವಿಲಯಮಾಡುವ ಒಂದು ಯುಕ್ತಿಯ ದಂಡದಂತೆ ಇದು ಎಂದು ರವೀಂದ್ರರಂತೆ ಗಾಂಧೀಜಿಯವರೂ ನಂಬಿದ್ದರು. ಶುದ್ಧಪ್ರೇಮ 'ಸತ್ಯನಿಧಿಯ' ಸ್ವರ್ಣಕೀಲಿ. ಅದು ಎಲ್ಲವನ್ನೂ ಗೆಲ್ಲಬಲ್ಲದು. ಪ್ರಪಂಚ ಅನಿಷ್ಟದಿಂದ ತುಂಬಿದ್ದರೂ ಅದನ್ನು ನಿವಾರಿಸಬಹುದು ಎಂಬ ಅಂಶವನ್ನು ಶುದ್ಧ ಪ್ರೇಮ ಸೂಚಿಸುತ್ತದೆ.

ಶುದ್ಧಪ್ರೇಮ ಸ್ವಾರ್ಥತ್ಯಾಗಕ್ಕೆ ಮತ್ತೊಂದು ಹೆಸರು. ಅದು ಬೇರೆ ಏನನ್ನೂ ಅಪೇಕ್ಷಿಸದು: ತ್ಯಾಗಮಾಡಲು ಸದಾ ಸಿದ್ಧವಾಗಿರುವುದೇ ಅದರ ಸ್ವಭಾವ. ಅನಂತ ಯಾತನೆಯಲ್ಲೂ ಅದು ಪ್ರತೀಕಾರವನ್ನು ಬಯಸುವುದಿಲ್ಲ. ಶ್ರೀ ಸಾಮಾನ್ಯನಿಗೆ ನಾವು ಮಾಡಬಹುದಾದ ಬಹುದೊಡ್ಡ ಸೇವೆಯೆಂದರೆ ಅವನನ್ನು ಪ್ರೀತಿಸುವುದು ಎಂದು ಗಾಂಧೀಜಿ ತಿಳಿಸುತ್ತಾರೆ.

ಗಾಂಧಿ ಒಬ್ಬ ನಿಷ್ಠಾವಂತ ಸತ್ಯಶೋಧಕ. ಸತ್ಯ ಶೋಧನೆಯೇ ಆತ್ಮಸಾಕ್ಷಾತ್ಕಾರ. ಅವರ ಪ್ರಕಾರ ಸತ್ಯವೇ ದೇವರು. ದೇವರೇ ಸತ್ಯ. "ಭಗವಂತನೇ ಪ್ರಾಣಶಕ್ತಿ, ಆವನೇ ಸತ್ಯ ಮತ್ತು ಜ್ಯೋತಿ

ಎಂಬುದ ನನ್ನ ವಿಶ್ವಾಸ. ಆತ ಪ್ರೇಮ ಸ್ವರೂಪ. ಆತನೇ ಪರಮ ಶ್ರೇಯಸ್ಸು"[4] ಸತ್ಯ ಸ್ವಯಂ ಘೋಷಿತವಾದುದು. ಸತ್ಯದ ದಾರಿ ನೇರ. ಆದರೆ ಅದು ಕತ್ತಿಯ ಅಲಗಿನಂತೆ. ಅದರ ಮೇಲೆ ನಡೆಯುವ ಛಲ ಮಾತ್ರ ಬೇಕು ಎಂದು ಗಾಂಧೀಜಿ ಎಚ್ಚರಿಸುತ್ತಾರೆ.

ಗಾಂಧೀಜಿಯವರ ಅಭಿಪ್ರಾಯದಲ್ಲಿ ಭಗವಂತನನ್ನು ಕಾಣಲು ಇರುವ ಒಂದೇ ಒಂದು ನಿಶ್ಚಿತ ಮಾರ್ಗವೆಂದರೆ ಅಹಿಂಸೆ, ಪ್ರೇಮ. "ಅಹಿಂಸೆ ನನ್ನ ದೇವರು. ಸತ್ಯ ನನ್ನ ದೇವರು. ಅಹಿಂಸೆಯ ಸಾಧನೆಗಾಗಿ ನಾನು ಶ್ರಮಿಸುವಾಗ ಸತ್ಯ ಹೇಳುತ್ತದೆ: 'ನನ್ನ ಮೂಲಕವೇ ಅದರ ಸಿದ್ಧಿ' ಎಂದು ಸತ್ಯದ ಸಾಧನೆಗಾಗಿ ನಾನು ಶ್ರಮಿಸುವಾಗ ಅಹಿಂಸೆ ಹೇಳುತ್ತದೆ: 'ನನ್ನ ಮೂಲಕವೇ ಅದರ ಸಿದ್ಧಿ'"[5]

ಅಹಿಂಸೆ ಎಂದರೆ ಕಾಯಾ ವಾಚಾ ಮನಸಾ ಇತರರಿಗೆ ಹಿಂಸೆ ಮಾಡದೇ ಇರುವುದು. ಅಹಿಂಸೆ ಮಾನವನ ಸ್ವಭಾವದಲ್ಲೇ ಇದೆ. ಅದು ಅವನ ಸಹಜ ಪ್ರವೃತ್ತಿ; ಅವನ ಮೇಲೆ ಅದನ್ನು ಹೇರಿಲ್ಲ. ಅದರ ಜನನವಾಗಲೀ ಬೆಳವಣಿಗೆಯಾಗಲೀ ಕೃತಕವಾದುದಲ್ಲ. ಮಾನವ ಚೇತನ ಸ್ವರೂಪನಾದುದರಿಂದ ಅವನು ಅಹಿಂಸಾವಾದಿಯೇ ಆಗಿರಬೇಕು. ಕೆಲವು ಸಾರಿ ಮಾನವ ಮೃಗದಂತೆ ವರ್ತಿಸಲು ಕಾರಣ ಅವನಲ್ಲಿರುವ ಅನಾತ್ಮ (ದೇಹ) ಆತ್ಮತತ್ತ್ವದೊಡನೆ ಹೋರಾಟವನ್ನು ನಡೆಸುವುದು. ಅದನ್ನು ತನ್ನ ಅಧೀನದಲ್ಲಿಟ್ಟುಕೊಳ್ಳಲು ಮಾಡುವ ಪ್ರಯತ್ನ. ಇದು ವಿಫಲ ಪ್ರಯತ್ನ. ಎಂದೆಂದಿಗೂ ಆತ್ಮಕ್ಕೆ ಜಯ ಎಂದು ಗಾಂಧೀಜಿ ನಂಬಿದ್ದರು. ಹಿಂಸೆಯ ಆಧಾರದ ಮೇಲೆ ಶಾಶ್ವತವಾದ ಏನನ್ನೂ ಕಟ್ಟಲಾಗುವುದಿಲ್ಲ ಎಂಬುದು ಅವರ ಸ್ಪಷ್ಟ ಅಭಿಪ್ರಾಯವಾಗಿತ್ತು.

ಅಹಿಂಸೆಯ ನೈಜ ಅರ್ಥ ಇಷ್ಟು: ಹೇಡಿ ಎಂದಿಗೂ ಅಹಿಂಸಾವಾದಿಯಾಗಲಾರ. ಅಹಿಂಸಾವಾದಿಯನ್ನು ಅಂಜುಬುರುಕನೆಂದೂ ದುರ್ಬಲ ಮನುಷ್ಯನೆಂದೂ ಅರ್ಥೈಸಲಾಗದು. ಅಹಿಂಸೆ ಧೈರ್ಯಶಾಲಿಯ ಸದ್ಗುಣ; ಅಂಜುಬುರುಕನ ರಕ್ಷಣಾ ಕವಚವಲ್ಲ. ಅಹಿಂಸಾವಾದಿಗೆ ತನ್ನ ಎದುರಾಳಿಯೆನಿಸಿಕೊಳ್ಳುವವನನ್ನು ಕೊಲ್ಲುವ ಶಕ್ತಿ ಇದೆ. ಆದರೆ ಅದು ಪಾಶವೀ ಕೃತ್ಯ. ಚೇತನ ಸ್ವರೂಪನಾದ ಮಾನವನ ಸ್ವಭಾವಕ್ಕೆ, ಅವನ ಗತ್ತಿಗೆ, ಅದು ತಕ್ಕುದಲ್ಲ. ಅಹಿಂಸೆ ಮತ್ತು ಹೇಡಿತನ ಎಂದಿಗೂ ಒಟ್ಟೊಟ್ಟಿಗೆ ಹೋಗಲಾರವು: ಅಹಿಂಸಾವಾದಿ ಎಂದೆಂದಿಗೂ ಹೇಡಿಯಾಗಿರಲಾರ; ಹೇಡಿಯಾದವನು ಸುತರಾಂ ಅಹಿಂಸಾವಾದಿಯಾಗಲಾರ.

ಅಹಿಂಸೆ, ಸ್ವಾರ್ಥ ತ್ಯಾಗದ ಪ್ರತೀಕ. ಅಹಿಂಸೆ ಮತ್ತು ಪರಿಗ್ರಹ ಎರಡೂ ಒಟ್ಟಿಗೆ ಇರಲಾರವು. ತಪ್ಪಿತಸ್ಥ ತನ್ನ ತಪ್ಪನ್ನು ತಿದ್ದಿಕೊಳ್ಳುವಂತೆ ಮಾಡಿ ಅವನ ಮನಃ ಪರಿವರ್ತನೆಯನ್ನು ಮಾಡಲು ಸ್ವಇಚ್ಛೆಯಿಂದ ಅಹಿಂಸಾವಾದಿ ಅಗಾಧ ಯಾತನೆಯನ್ನು ತುಂಬು ಹೃದಯದಿಂದ ಆಹ್ವಾನಿಸುತ್ತಾನೆ. ಅಹಿಂಸಾವಾದಿಯಲ್ಲಿ ವೈರಕ್ಕಾಗಲೀ, ಪ್ರತಿಹಿಂಸೆ, ಸೇಡಿಗಾಗಲೀ ಮುಳ್ಳಿನ ಕೊನೆಯಷ್ಟೂ ಸ್ಥಳವಿಲ್ಲ. ಪೆಟ್ಟಿಗೆ ಪ್ರತಿಯಾಗಿ ಪೆಟ್ಟುಕೊಟ್ಟರೆ ಅಹಿಂಸಾತತ್ತ್ವ ದೂರ ಸರಿಯುತ್ತದೆ. ಪ್ರತಿ ಹಿಂಸೆ ಮಾಡುವ ಪ್ರವೃತ್ತಿಯನ್ನು ಹತ್ತಿಕ್ಕುವಂತೆ ಮಾಡುವ ಮಾನವಸ್ವರೂಪಾಂತರದ ಶಕ್ತಿಯೇ ಅಹಿಂಸೆ. ಅಹಿಂಸಾವಾದಿ, ತಪ್ಪಿತಸ್ಥನ ತಪ್ಪನ್ನು ಅಧರ್ಮವನ್ನು ದ್ವೇಷಿಸುತ್ತಾನೆಯೇ ಹೊರತು ತಪ್ಪಿತಸ್ಥನನ್ನಲ್ಲ.

ಗಾಂಧೀಜಿಯವರ ಪ್ರಕಾರ ಕೇವಲ ಅಹಿಂಸಾವಾದಿಯಾದವನು ಮಾತ್ರ ಅಭಯಹಸ್ತವನ್ನು ನೀಡಲು ಸಮರ್ಥ. ಅವನೊಬ್ಬನೇ ನಿರ್ಭಯನಾಗಿರಲು ಸಾಧ್ಯ. ಏಕೆಂದರೆ ಭಯಪಡುವ ಎಂಥ ಕೆಲಸವನ್ನೂ ಅವನು ಮಾಡುವುದಿಲ್ಲ. "ಎಲ್ಲಿ ಭೀತಿ ಇದೆಯೋ ಅಲ್ಲಿ ಧರ್ಮವಿಲ್ಲ."[6] ಅಹಿಂಸೆಯನ್ನು ಆಚರಿಸುವ ಮೂಲಕ ಮಾನವ ನಿರ್ಭೀತ ಜೀವನವನ್ನು ನಡೆಸಬೇಕೆಂದು ಗಾಂಧೀದರ್ಶನ ಸಾರುತ್ತದೆ.

ಗಾಂಧೀಜಿಯವರ ಪ್ರಕಾರ ಸತ್ಯಾರ್ಥಿ, ಸತ್ಯವ್ರತ ಮಾತ್ರ ಅಹಿಂಸಾವಾದಿಯಾಗಿರಲು ಸಾಧ್ಯ. ಸತ್ಯವಂತನಾಗಿ ಅಹಿಂಸಾತ್ಮಕವಾದ ಅಭಯಜೀವನವನ್ನು ಬಾಳುವುದು, ಮೋಕ್ಷವನ್ನು ಪಡೆಯುವುದಕ್ಕಿಂತ ಬೇರೆ ಅಲ್ಲ ಎಂದು ಗಾಂಧೀಜಿ ಅಭಿಪ್ರಾಯ ಪಡುತ್ತಾರೆ. "Truth is the highest law. Ahimsa is the highest duty".

ಗಾಂಧೀದರ್ಶನದಲ್ಲಿ, ಸತ್ಯ, ಅಹಿಂಸೆ, ಅಭಯ—ಇವು ಕೇವಲ ಅದಲು ಬದಲು ಪದಗಳು.

ಇವೆಲ್ಲವೂ ಒಂದೇ ಅರ್ಥವನ್ನು ಸೂಚಿಸುತ್ತವೆ. ಅಹಿಂಸೆಯ ಬಗ್ಗೆ ಇರುವ ಒಂದು ತಪ್ಪುಗ್ರಹಿಕೆಯನ್ನು ಗಾಂಧೀಜಿ ಸ್ಪಷ್ಟಪಡಿಸುತ್ತಾರೆ. ಅಹಿಂಸೆಯೆಂಬುದು ಕೇವಲ ಋಷಿಗಳಿಗೆ, ಸಾಧುಸಂತರಿಗೆ ಅನ್ವಯಿಸುವಂತಹುದು: ಸಾಮಾನ್ಯ ಮಾನವನಿಗೆ ನಿಲುಕದ ಆದರ್ಶ—ಇದೇ ಆ ಬಹುದೊಡ್ಡ ತಪ್ಪುಗ್ರಹಿಕೆ. ಅದು ಸಾಧುಸಂತರ ಋಷಿಗಳ ಆಸ್ತಿಯಷ್ಟೇ ಅಲ್ಲ; ಸಕಲ ಮಾನವ ಕುಲದ ಆಧ್ಯಾತ್ಮಿಕ ಸಂಪತ್ತು. ಅದು ನರರ ಜೀವನ ಧರ್ಮ, ಅವರ ಬದುಕಿನುಸಿರು, ಎಂದು ಗಾಂಧೀಜಿ ಸಾರುತ್ತಾರೆ. ಒಂದು ಅರ್ಥದಲ್ಲಿ ಸತ್ಯ ಮತ್ತು ಅಹಿಂಸೆ ಎಂಬ ಎರಡು ಬೃಹತ್ಸ್ತಂಭಗಳ ಮೇಲೆ ಇಡೀ ಗಾಂಧೀ ದರ್ಶನವೆಂಬ ಸುಂದರ ಸೌಧ ನಿಂತಿದೆ ಎಂದು ಹೇಳಬಹುದು. ಹಿಂದೂ, ಜೈನ, ಬೌದ್ಧ, ಕ್ರೈಸ್ತ, ಇತರ ಬಹುತೇಕ ಜಾಗತಿಕ ಧರ್ಮಗಳ ರತ್ನಸೂತ್ರವಾದ ಅಹಿಂಸೆ ತತ್ತ್ವವನ್ನು ಆಧುನಿಕ ಪ್ರಪಂಚದಲ್ಲಿ ಅದರ ಮಹತ್ತ್ವವನ್ನೂ ಸಮಯೋಚಿತವನ್ನೂ ತೋರಿಸಿಕೊಟ್ಟ ಕೆಲವೇ ಮಾನವ ಶ್ರೇಷ್ಠರಲ್ಲಿ ಗಾಂಧೀಜಿ ಒಬ್ಬರಾಗಿದ್ದಾರೆ. ಅಹಿಂಸಾ ತತ್ತ್ವವನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವ್ಯವಹಾರಗಳಿಗೆ ಅನ್ವಯಿಸಿದರು. ಅವರು ಅದರ ವಿಪುಲ ಶಕ್ತಿಯನ್ನು ಇಡೀ ಜಗತ್ತಿಗೇ ತೋರಿಸಿಕೊಟ್ಟಿದ್ದಾರೆ. ವಿಜ್ಞಾನದ ಚಕಮಕಿಯ ದಿನಗಳ ಈ ಯುಗಕ್ಕೆ ಅಹಿಂಸೆಯ ಅವಶ್ಯಕತೆ ಎಂದಿಗಿಂತಲೂ ಹೆಚ್ಚಾಗಿದೆ. ವಿಜ್ಞಾನ ಮತ್ತು ಆತ್ಮಜ್ಞಾನಗಳೆರಡರ ಸಮರಸ ಗ್ರಹಿಕೆಯಿಂದ ಮಾತ್ರ ಈಗ ತಲೆದೋರಿರುವ ಸ್ಫೋಟಕ ಪರಿಸ್ಥಿತಿಯನ್ನು ನಿವಾರಿಸಲು ಸಾಧ್ಯ.

೮. ಗುರಿ ಹಾಗೂ ಸಾಧನೆಗಳೆರಡರ ಪರಿಶುದ್ಧತೆಯ ಅವಶ್ಯಕತೆ

ಗುರಿಯ ಶುದ್ಧತೆಯಷ್ಟೇ ಸಾಧನದ ಶುದ್ಧತೆಯೂ ಅತ್ಯಾವಶ್ಯಕ ಎಂದು ಒತ್ತಿ ಹೇಳುವುದು ಗಾಂಧೀ ದರ್ಶನದ ಮತ್ತೊಂದು ಪ್ರಮುಖ ಅಂಶ. ಕೆಲವು ವಿಮರ್ಶಕರು ಸಾಧನೆ ಎಂದೆಂದಿಗೂ ಸಾಧನೆ ಮಾತ್ರವೆಂದೂ, ಅದರ ಪರಿಶುದ್ಧತೆಗೆ ಅಷ್ಟಾಗಿ ಪ್ರಾಮುಖ್ಯತೆ ಕೊಡಕೂಡದೆಂದೂ, ಗುರಿಯೇ ಪ್ರಮುಖವೆಂದೂ ಅದರ ಶುದ್ಧತೆ ಒಂದೇ ಸಾಕೆಂದು ಹೇಳುವರು. ಸಾಧನೆಯ ಶುದ್ಧತೆಯನ್ನು ನೋಡಿಕೊಂಡು ಕುಳಿತರೆ ಯಾವ ಸಾಮಾಜಿಕ ಕ್ರಾಂತಿಯೂ ಅಸಾಧ್ಯವೆಂದೂ ಅಭಿಪ್ರಾಯ ಪಡುವರು. ಗಾಂಧೀಜಿ ಇವರ ಅಭಿಪ್ರಾಯವನ್ನು ಎಳ್ಳಷ್ಟೂ ಒಪ್ಪುವುದಿಲ್ಲ. ಸಾಧನೆಯ ಪರಿಶುದ್ಧತೆಯನ್ನು ನೋಡಿಕೊಂಡರೆ ಗುರಿ ತನ್ನ ಶುದ್ಧತೆಯನ್ನು ತಾನೇ ನೋಡಿಕೊಳ್ಳುತ್ತದೆ. ಅನೈತಿಕ ಅಶುದ್ಧ ಸಾಧನ ಎಂದಿಗೂ ಶುದ್ಧಗುರಿಯೆಡೆಗೆ ನಮ್ಮನ್ನು ಕೊಂಡೊಯ್ಯಲಾರದು ಎಂದು ಗಾಂಧೀಜಿ ಎಚ್ಚರಿಸುತ್ತಾರೆ. ಒಂದು ವೇಳೆ ಹಾಗೆ ಸಾಧ್ಯವಾಗುವುದಾದರೆ ಇಡೀ ಮಾನವಕುಲದ ನಾಶ ಖಂಡಿತವೆಂದು ಅವರು ನಂಬಿದ್ದರು. ಹೀಗೆ ಇಲ್ಲಿ ಸಾಧನೆ ಮತ್ತು ಗುರಿ ಒಂದೇ ನಾಣ್ಯದ ಎರಡು ಮುಖಗಳು; ಎರಡರ ಪರಿಶುದ್ಧತೆಯೂ ಅನಿವಾರ್ಯ ಎಂದು ಈ ದರ್ಶನ ಅಭಿಪ್ರಾಯ ಪಡುತ್ತದೆ. ಸತ್ಯವೇ ಗುರಿ, ಅಹಿಂಸೆಯೇ ಮಾರ್ಗ.

ಅಹಿಂಸೆಯ ಮೂಲಕ ಸತ್ಯವನ್ನು ಹುಡುಕುವುದು, ಸತ್ಯಕ್ಕಾಗಿ ಆಗ್ರಹಪಡಿಸುವುದು ಸತ್ಯಾಗ್ರಹವೆನಿಸುವುದು. ವ್ಯಕ್ತಿ ಹಾಗೂ ಸಮಾಜದ ಮನಃಪರಿವರ್ತನೆಯ ತಂತ್ರವೇ ಸತ್ಯಾಗ್ರಹ. ಅಧರ್ಮ ವಿರೋಧವೇ ಸತ್ಯಾಗ್ರಹಿಯ ಗುರಿ. ಅನ್ಯಾಯಕ್ಕೆ ಪ್ರತಿರೋಧವನ್ನೊಡ್ಡುವ ಗುಣಧರ್ಮವುಳ್ಳವನೇ ಸತ್ಯಾಗ್ರಹಿ." "ಸತ್ಯಾಗ್ರಹವೆಂದರೆ ಪೂರ್ಣ ಸಮರ್ಪಣೆ, ವಿನಮ್ರತೆಯ ಪರಾಕಾಷ್ಠೆ. ಅದರ ತಾಳ್ಮೆಯು ಚರಮ ಸೀಮೆ, ಶ್ರದ್ಧೆಯು ಪರಮಾವಧಿ. ಅದರ ಸಿದ್ಧಿ ಅದರ ಆಚರಣೆಯಲ್ಲಿಯೇ ಅಡಕವಾಗಿದೆ. ಅದಕ್ಕೆ ಬೇರೆ ಫಲಾಪೇಕ್ಷೆ ಇಲ್ಲ."

೯. ಮಾನವೀಯತೆ (Humanism)

ಮಾನವೀಯತೆ ಗಾಂಧೀದರ್ಶನದ ಒಂದು ಮಹತ್ವದ ಅಂಶ. ಮಾನವ ಇತರ ಎಲ್ಲಾ ಪ್ರಾಣಿಗಳಿಗಿಂತಲೂ ಶ್ರೇಷ್ಠನೆಂದು ಪರಿಗಣಿಸಲ್ಪಟ್ಟಿದ್ದಾನೆ. ಇದಕ್ಕೆ ಕಾರಣ ಅವನ ಸ್ವತಂತ್ರ ಮನೋವೃತ್ತಿ ಮತ್ತು ಬುದ್ಧಿಶಕ್ತಿ. ಮಾನವನಿಗೆ ಮಾನವತ್ವವನ್ನು ತಂದುಕೊಟ್ಟಿರುವ ಸ್ವಾತಂತ್ರ್ಯ ಮತ್ತು ಬುದ್ಧಿಶಕ್ತಿಗಳನ್ನು ಯಾವುದೇ ಕಾರಣಕ್ಕೂ ಯಾರಲ್ಲಿಯೂ 'ಅಡವು' ಇಡಲಾಗದು. ಹಾಗೆಯೇ ಮಾನವೀಯ

ಗುಣಗಳಾದ ಸತ್ಯ, ಅಹಿಂಸೆ, ದಯೆ, ಸೇವಾಮನೋಭಾವ, ನ್ಯಾಯಶೀಲತೆ, ಸ್ನೇಹಪರತೆ, ಅನುಕಂಪ, ವಿಶ್ವಪ್ರೇಮ, ಹೃದಯವೈಶಾಲ್ಯ, ನಮ್ರತೆ–ಇವುಗಳನ್ನು ಪ್ರಜ್ಞಾಪೂರ್ವಕವಾಗಿ ಹೊಂದದೆ ಇರುವವರು ಮಾನವರೇ ಅಲ್ಲ, ಮಾನವ ರೂಪದ ಪಶುಪ್ರಾಣಿಗಳು. ಮಾನವೀಯತೆಯನ್ನು ಬಿಟ್ಟು ಧರ್ಮ ಎಂಬುದಿಲ್ಲ. ದೇವರು ಒಬ್ಬನೆಂದೂ, ಸರ್ವರೂ ಅವನ ಅಂಶಸ್ವರೂಪರೆಂದೂ ಸಾರುವ ಹಿಂದೂ ಧರ್ಮದ ಬೋಧನೆಯನ್ನು ಸಂಕುಚಿತಗೊಳಿಸಿ ಅಸ್ಪೃಶ್ಯರನ್ನು ಸೃಜಿಸಿದ 'ಪಂಡಿತರ ಧರ್ಮ'ವನ್ನು ಹಿಂದೂಧರ್ಮ ಎನ್ನಲು ಅವರು ಸ್ವಲ್ಪವೂ ಒಪ್ಪುವುದಿಲ್ಲ. ದೇವರ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ ಮಾನವ-ಮಾನವರಲ್ಲಿ ಭೇದವನ್ನುಂಟುಮಾಡುವ, ಮಾನವೀಯತೆಯನ್ನು ದುರುಪಯೋಗ ಪಡಿಸಿ ಕೊಳ್ಳುವ ಮಾನವನ ವಿಪರೀತ ಬುದ್ಧಿಯನ್ನು ಅವರು ತರಾಟೆಗೆ ತೆಗೆದುಕೊಳ್ಳುತ್ತಾರೆ. ನಿಜವಾದ ಧರ್ಮ, ಮಾನವತಾ ಧರ್ಮ. ಅದನ್ನು ಮೀರಿದ ಧರ್ಮವಾಗಲೀ ದೇವರಾಗಲೀ ಇಲ್ಲ ಎಂದು ಗಾಂಧೀಜಿ ತಮ್ಮ ಬರಹಗಳಲ್ಲಿ ಸ್ಪಷ್ಟಪಡಿಸಿದ್ದಾರೆ: "ಈಶ್ವರ ದರ್ಶನಕ್ಕಿರುವ ಏಕೈಕ ಮಾರ್ಗವೆಂದರೆ ಆತನ ಸೃಷ್ಟಿಯಲ್ಲಿಯೇ ಆತನನ್ನು ಕಂಡು ಅದರಲ್ಲಿಯೇ ಒಂದಾಗಿರುವುದು. ಸರ್ವರ ಸೇವೆಯೊಂದೇ ಇದಕ್ಕೆ ಸಾಧನ."[8] "ದೀನ ಸೇವೆಯೇ ಧರ್ಮ. ದೀನರ ಮತ್ತು ಪೀಡಿತರ ರೂಪದಲ್ಲಿ ದೇವರು ನಮಗೆ ಪ್ರತ್ಯಕ್ಷನಾಗುತ್ತಾನೆ."[9]

ಗಾಂಧೀಜಿಯವರ ಪ್ರಕಾರ ವ್ಯಕ್ತಿಯ ಒಳಿತು ಸಮಾಜದ ಒಳಿತಿಗೆ ವಿರುದ್ಧವಾಗಿಲ್ಲ; ಅದು ಸಮಾಜದ ಒಳಿತಿನಲ್ಲಿ ಅಡಕವಾಗಿದೆ. ಅವರ ದೃಷ್ಟಿಯಲ್ಲಿ ಯಾವ ಕಾಯಕವೂ ಹೀನವಾದುದಲ್ಲ. ಬುದ್ಧಿಜೀವಿಯಾದ ವಕೀಲನ ಕೆಲಸ ನಾಯಿಂದನ ಕೆಲಸಕ್ಕಿಂತ ಮೇಲಾದುದು, ಶ್ರೇಷ್ಠಮಟ್ಟದ್ದು ಎಂದು ಭಾವಿಸುವುದು ತಪ್ಪು. ತಮ್ಮ ತಮ್ಮ ವೃತ್ತಿಯಿಂದ ಜೀವನ ಹೊರೆಯುವ ಹಕ್ಕು ಪ್ರತಿಯೊಬ್ಬರಿಗೂ ಇದ್ದೇ ಇದೆ ಎಂದು ಗಾಂಧೀಜಿ ಒತ್ತಿ ಹೇಳುತ್ತಾರೆ.

ಹಾಗೆಯೇ ದೈಹಿಕಶ್ರಮದ ಆವಶ್ಯಕತೆಯನ್ನೂ ಅದರ ಮಹತ್ವವನ್ನೂ ಗಾಂಧೀಜಿ ಪ್ರಬಲವಾಗಿ ಪ್ರತಿಪಾದಿಸುತ್ತಾರೆ. ದೈಹಿಕ ಶ್ರಮದ ಮೂಲಕ ಬೆವರನ್ನು ಸುರಿಸಿ ತನ್ನ ದಿನದ ಆಹಾರವನ್ನು ಸೇವಿಸ ಬೇಕು. ದೈಹಿಕ ಶ್ರಮದಿಂದ ನುಣಿಚಿಕೊಳ್ಳುವ ವ್ಯಕ್ತಿ ಸಮಾಜಗಳ್ಳ, ಪರಾವಲಂಬಿ ಎಂದು ಅವರು ಹೇಳುತ್ತಾರೆ. 'ದೈಹಿಕ ಶ್ರಮದ ಮೂಲಕ ದಿನದ ಹಿಟ್ಟು' ಎಂಬ ಟಾಲ್‌ಸ್ಟಾಯ್ ಅವರ ತತ್ತ್ವದಿಂದ ಗಾಂಧೀಜಿ ಬಹಳ ಪ್ರಭಾವಗೊಂಡಿದ್ದಾರೆ.

ಸರ್ವೋದಯ ಮಾನವ ಧರ್ಮದ ಗುರಿ. ಸರ್ವೋದಯವೆಂದರೆ ಸರ್ವರ ಏಳಿಗೆ; ಎಲ್ಲಾ ಮಾನವರ, ಜೀವನದ ಸರ್ವಕ್ಷೇತ್ರಗಳ ಸರ್ವತೋಮುಖ ಬೆಳವಣಿಗೆ. ಜ್ಞಾನೋದಯ, ಸರ್ವಧರ್ಮ ಸಮಾನತ್ವ, ಸರ್ವಧರ್ಮ ಸಮನ್ವಯ—ಇವು ಸರ್ವೋದಯ ಸಮಾಜದ ಬುನಾದಿ. ವಿಶ್ವದ ವಿವಿಧ ಧರ್ಮಗಳು ಮಾನವರನ್ನು ಒಂದೇ ಗುರಿಯೆಡೆಗೆ ಕೊಂಡೊಯ್ಯುವ ವಿವಿಧ ಮಾರ್ಗಗಳಷ್ಟೆ; ಯಾವ ಧರ್ಮವೂ ಮೇಲಲ್ಲ, ಯಾವ ಧರ್ಮವೂ ಕೀಳಲ್ಲ; ಸರ್ವಧರ್ಮಗಳಿಗೂ ಸಮಾನ ಗೌರವವನ್ನು ತೋರಿಸಬೇಕು. ಎಲ್ಲಾ ಧರ್ಮಗಳ ಸಾರಸರ್ವಸ್ವವಾದ ಮಾನವ ಸೇವೆಯಿಂದ ಸ್ವಲ್ಪವೂ ವಿಮುಖ ರಾಗದೆ ವಿಚಲಿತರಾಗದೆ ಸದಾ ಕಾರ್ಯತತ್ಪರರಾಗಿರಬೇಕು; ಧರ್ಮಾಂಧತೆ ದುರಭಿಮಾನ ಸಲ್ಲದು—ಎಂಬ ಶ್ರೀ ರಾಮಕೃಷ್ಣಪರಮಹಂಸರ ಹೃದಯಾಂತರಾಳದ ದಿವ್ಯಬೋಧನೆಯನ್ನು ಗಾಂಧೀದರ್ಶನ ಸ್ವಾಗತಿಸಿ ಪುನರುಚ್ಚರಿಸುತ್ತದೆ.

೧೦. ಪರಿಕಲ್ಪನೆಗಳ ಹರಿದಾಡುವಿಕೆ (Telescoping of Concepts)

ಎಷ್ಟು ಪ್ರಯತ್ನಿಸಿದರೂ ವಿಷಯ ಪ್ರತಿಪಾದನೆಯ ಪುನರಾವರ್ತನೆಯನ್ನೂ, ಪರಿಕಲ್ಪನೆಗಳ ಅನಿರ್ದಿಷ್ಟತೆ ಯನ್ನೂ ತಪ್ಪಿಸುವುದು ಗಾಂಧೀದರ್ಶನದಲ್ಲಿ ತ್ರಾಸದಾಯಕವಾದ ಕೆಲಸವೇ ಸರಿ. ಪರಿಕಲ್ಪನೆಗಳನ್ನು ಪ್ರತ್ಯೇಕಿಸುವ ಪ್ರಯತ್ನವೋ ಮತ್ತೂ ದುಸ್ಸಾಧ್ಯ. ಗಾಂಧೀಜಿಯವರ ಬರಹಗಳು ಸರಳವೂ ರಸ ವತ್ತಾದವುಗಳಾದರೂ, ಅವರ ಕೈಯಲ್ಲಿ ಒಂದು ಪರಿಕಲ್ಪನೆ ಅನಾಯಾಸವಾಗಿ ಮತ್ತೊಂದು ಕಲ್ಪನೆ ಯಾಗಿ ಪರಿವರ್ತನೆಗೊಳ್ಳುತ್ತದೆ. ಉದಾಹರಣೆಗೆ 'ಸತ್ಯಾಗ್ರಹ' ಪರಿಕಲ್ಪನೆಯನ್ನೇ ತೆಗೆದುಕೊಳ್ಳೋಣ.

ಸತ್ಯಾಗ್ರಹ ಕಲ್ಪನೆ. ಸತ್ಯಾಗ್ರಹ ಕಲ್ಪನೆಯಾಗಿ ಉಳಿಯದೆ 'ಆತ್ಮಶಕ್ತಿ' ಕಲ್ಪನೆಯಾಗಿ ಹರಿಯುತ್ತದೆ. ಅದನ್ನು ಹೀಗೆ ತೋರಿಸಬಹುದು: ಸತ್ಯಕ್ಕೆ ಎಡಬಿಡದೆ ಅಂಟಿಕೊಂಡಿರುವುದೇ ಸತ್ಯಾಗ್ರಹವೆನಿಸುವುದು. ಅಂದರೆ ಸತ್ಯಾಗ್ರಹ ಸತ್‌ಶಕ್ತಿ. ಆದರೆ ಸತ್ಯ ಆತ್ಮಕ್ಕಿಂತ ಬೇರೆಯಲ್ಲ. ಆದುದರಿಂದ ಸತ್ಯಾಗ್ರಹ ಆತ್ಮಶಕ್ತಿಯೇ ಆಗಿದೆ ಎಂದು ಗಾಂಧೀಜಿ ಬರೆಯುತ್ತಾರೆ. ಹೀಗೆ ಗಾಂಧೀದರ್ಶನದಲ್ಲಿ ಪರಿಕಲ್ಪನೆಗಳು ನಿರ್ದಿಷ್ಟ ಪರಿಕಲ್ಪನೆಗಳಾಗಿ ಉಳಿಯದೆ ಇತರ ಕಲ್ಪನೆಗಳಾಗಿ ಮಾರ್ಪಾಟು ಹೊಂದುತ್ತವೆ. ಈ ಲಕ್ಷಣವನ್ನು 'ಪರಿಕಲ್ಪನೆಗಳ ಹರಿಯುವಿಕೆ' ಎಂದು ಕರೆಯಬಹುದು. ಅವರ ದರ್ಶನದ ಈ ಲಕ್ಷಣಕ್ಕೆ ಮುಖ್ಯ ಕಾರಣ ಹೀಗಿದೆ: ಗಾಂಧೀಜಿ ತಮ್ಮ ತತ್ತ್ವಚಿಂತನೆಯನ್ನು ಎಂದೂ ನಾಲ್ಕು ಗೋಡೆಗಳ ಮಧ್ಯದಲ್ಲಿ ಬೆಳೆಸಿದವರಲ್ಲ. ಅವರದು ಬಹಳ ವಿಶಾಲವಾದ ಸಕ್ರಿಯ ಸಾರ್ವಜನಿಕ ಕ್ಷೇತ್ರ. ಸಾರ್ವಜನಿಕರನ್ನು ಕುರಿತೇ ಅವರ ಹೇಳಿಕೆಗಳು ಇರುತ್ತವೆ. ಆ ಕ್ಷೇತ್ರಗಳಲ್ಲಿನ ಜ್ವಲಂತ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಹಿಡಿಯುವ ಪ್ರಯತ್ನದಲ್ಲಿ ವಿಷಯ ಪುನರಾವರ್ತನೆ ಹಾಗೂ ಪರಿಕಲ್ಪನೆಗಳ ಹರಿಯುವಿಕೆ ಅನಿವಾರ್ಯ.

ಅಡಿ ಟಿಪ್ಪಣಿಗಳು

೧. ಯಂಗ್ ಇಂಡಿಯಾ, ೧೩–೧೦–೨೧.

೨. "By Religion I do not mean formal religions or customary religion. but that religion which underlies all religions, which brings face to face with our Maker" by Doke: *M. K. Gandhi*. p. 7.
ಈಶಾವಾಸ್ಯ ಉಪನಿಷತ್ತಿನ ಮೊದಲನೆ ಮಂತ್ರ ಪ್ರಪಂಚದ ಎಲ್ಲಾ ಧರ್ಮಗಳ ಸಾರವನ್ನು ಬಹಳ ಚೆನ್ನಾಗಿ ವಿವರಿಸುತ್ತದೆ: "ಈ ಎಲ್ಲವೂ (ಚರಾಚರ ಜಗತ್ತು) ಈತನ ಆವಾಸಸ್ಥಾನ: ಅದೆಲ್ಲವೂ ಅವನಿಗೆ ಮಾತ್ರ ಸಂಬಂಧಿಸಿದ್ದು, ಬೇರಾವ ಮನುಜರಿಗೂ ಅಲ್ಲ. ಸ್ವಾರ್ಥ ತ್ಯಾಗದ ಮೂಲಕ ಜೀವನದ ಸವಿಯನ್ನು ಸವಿಯಿರಿ. ಇನ್ನೊಬ್ಬರ ಧನಕ್ಕೆ ಕಿಂಚಿತ್ತೂ ಆಶೆ ಪಡದೆ"—ಇದು ಈ ಕೆಳಗೆ ಉಲ್ಲೇಖಿಸಿರುವ ಮಂತ್ರದ ಭಾವಾನುವಾದ.

ಈಶಾವಾಸ್ಯಂ ಇದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್
ತೇನ ತ್ಯಕ್ತೇನ ಭುಂಜೀಥಾ ಮಾಗೃಧಃ ಕಸ್ಯಸ್ವಿದ್ಧನಂ

ಗಾಂಧೀಜಿಗೆ ಈ ಮಂತ್ರ ಬಹಳ ಪ್ರಿಯವಾಗಿತ್ತು; ಅವರ ಮಾತುಗಳಲ್ಲೇ ಹೇಳುವುದಾದರೆ: "ಸಕಲ ಶಾಸ್ತ್ರಗಳೂ ಒಂದು ವೇಳೆ ನಾಶ ಹೊಂದುವುದಾದರೂ ಹಿಂದೂಧರ್ಮದ ಸಾರವನ್ನು ಸಾರಲು ಈಶೋಪನಿಷತ್ತಿನ ಒಂದು ಮಂತ್ರ ಸಾಕು." (ಹರಿಜನ, ೧–೫–೩೭)

೩. ಹರಿಜನ, ೧–೫–೩೭.

೪. ಯಂಗ್ ಇಂಡಿಯ, ೧೦–೧೦–೨೮.

೫. ಅದೇ, ೪–೬–೨೫.

೬. ಅದೇ, ೨–೯–೨೬.

೭. ರಂಗನಾಥ ದಿವಾಕರ: ಮಹಾತ್ಮರ ಮನೋರಂಗ,

೮. ಹರಿಜನ, ೨೯–೮–೩೬.

೯. ಯಂಗ್ ಇಂಡಿಯ, ೧೪–೩–೨೪.

ಮೂಲ: ಸ್ವಾಮಿ ಹರ್ಷಾನಂದ
ಅನುವಾದ: ಬಿ. ಕೃಷ್ಣ

ಯೋಗ ಸಾಧನೆ—ವಿಘ್ನಗಳು ಮತ್ತು ಪರಿಹಾರಗಳು

ಒಂದು ಸಲ ಒಬ್ಬ ಲಕ್ಷಾಧೀಶನು ತನ್ನ ಮಗನನ್ನು ಕುರಿತು ಸುಖವಾಗಿರಲು ಏನೆಲ್ಲವನ್ನು ಸಂಪಾದಿಸಲು ಬಯಸುತ್ತೀಯೋ ಅವುಗಳ ಪಟ್ಟಿ ಮಾಡು ಎಂದು ಹೇಳಿದನು. ಬಹಳ ಉತ್ಸಾಹದಿಂದ ಆ ಹುಡುಗನು ಹದಿನೇಳು ಅಂಶಗಳ ಒಂದು ಪಟ್ಟಿ ಮಾಡಿ ತಂದನು. ಅದನ್ನು ನೋಡಿದನಂತರ ಅವನ ತಂದೆಯು ಅದನ್ನು ಅಳಿಸಿಹಾಕಿ "ಮನಶ್ಶಾಂತಿ" ಎಂಬುದನ್ನು ದಪ್ಪ ಅಕ್ಷರಗಳಲ್ಲಿ ಬರೆದನು. ಅನಂತರ ಅವನಿಗೆ ಈ ರೀತಿ ಬುದ್ಧಿ ಹೇಳಿದನು: "ಪ್ರಿಯ ಪುತ್ರನೆ! ಈ ಹದಿನೇಳು ವಸ್ತುಗಳನ್ನು ಸಂಪಾದಿಸಿದ ನಂತರವೂ ನಿನಗೆ ಮನಶ್ಶಾಂತಿ ಇಲ್ಲವಾದರೆ, ಅವುಗಳೆಲ್ಲವೂ ವ್ಯರ್ಥ. ಆದರೆ ನೀನು ಮನಶ್ಶಾಂತಿಯನ್ನು ಹೊಂದಿದ್ದರೆ, ಈ ಹದಿನೇಳು ವಸ್ತುಗಳು ಗೌಣವಾಗುತ್ತವೆ!" ಜೀವನದ ಒಳದೃಷ್ಟಿಗೆ ಇದು ಎಂತಹ ನಿದರ್ಶನ!

ತಿಳಿದೋ ತಿಳಿಯದೆಯೋ ನಾವೆಲ್ಲ ಶಾಂತಿಗಾಗಿ ಹೋರಾಡುತ್ತಿದ್ದೇವೆ. ಎಲ್ಲಿಯವರೆಗೆ ನಮ್ಮ ಮನಸ್ಸು ಛಿದ್ರವಾಗಿರುತ್ತದೆಯೋ ಮತ್ತು ಈ ಛಿದ್ರಗಳು ಪರಸ್ಪರ ತೊಳಲಾಟದಲ್ಲಿ ನಿರಂತರವಾಗಿ ಸಿಲುಕಿರುತ್ತವೆಯೋ, ಅಲ್ಲಿಯವರೆಗೂ ಶಾಂತಿಯು ನಮಗೆ ದೊರೆಯುವುದಿಲ್ಲ. ಯಾವಾಗ ನಾವು ಈ ಛಿದ್ರಗಳನ್ನು ಒಟ್ಟುಗೂಡಿಸುವುದರ ಮೂಲಕ ಮನಸ್ಸನ್ನು ಹದಗೊಳಿಸಲು ಮತ್ತು ಸಮಗ್ರಗೊಳಿಸಲು ಕಲಿಯುತ್ತೇವೆಯೋ, ಆವಾಗ ನಾವು ಕೈವಲ್ಯದ ಶಾಂತಿಯನ್ನು ಪಡೆಯುತ್ತೇವೆ.

ಹೇಳುವುದು ಸುಲಭ, ಮಾಡುವುದು ಕಷ್ಟ. ಪತಂಜಲಿಯಂತಹ ಸಮರ್ಥರು ಅಪಾರ ಕರುಣೆಯಿಂದ ಮಾರ್ಗದರ್ಶನ ನೀಡಲು ಸಿದ್ಧರಾಗಿರುವಾಗ ಈ ಕಾರ್ಯವು ಅಷ್ಟೇನೂ ಕಠಿಣವಾಗಲಾರದು. ಯೋಗಶಾಸ್ತ್ರದ ಮಹಾಸಿದ್ಧಪುರುಷನಾದ ಪತಂಜಲಿಯು, ಎಂದೂ ಸ್ಥಿಮಿತಗೊಳ್ಳದ ಆದರೆ ಸದಾ ಮೇಲೇಳುತ್ತಿರುವ ಮನಸ್ಸಿನ ಛಿದ್ರಗಳನ್ನು "ವೃತ್ತಿಗಳು" ಅಥವಾ "ವಿಕೃತಿಗಳು" (Modifications) ಎಂದು ಕರೆಯುತ್ತಾನೆ. ಯಾವಾಗ ಈ ವೃತ್ತಿಗಳನ್ನು ಸರಿಯಾದ ಶಿಸ್ತಿನಿಂದ ಹಾಗೂ ಅಭ್ಯಾಸದಿಂದ ಹತೋಟಿಯಲ್ಲಿಡಲು ಮತ್ತು ತೊಡೆದು ಹಾಕಲು ಸಾಧ್ಯವಾಗುವುದೋ ಆಗ ಯೋಗದ ಅಥವಾ ಸಮಾಧಿಯ ಮೂಲಕ (ಯುಜ್ = ಸಮಾಧಿಯನ್ನು ಅಥವಾ ಪೂರ್ಣ ಏಕಾಗ್ರತೆಯನ್ನು ಹೊಂದುವಿಕೆ) ಜೀವಾತ್ಮ ಪರಮಾತ್ಮನೊಡನೆ ಒಂದಾಗಲು, ಯೋಗವನ್ನು ಹೊಂದಲು (ಯುಜ್ = ನೊಗ ಹೂಡು, ಒಂದಾಗು) ಸಾಧ್ಯವಾಗುತ್ತದೆ. ಈ ಶಿಸ್ತು, ಅಭ್ಯಾಸಗಳೇ ಯೋಗ.

ಆರೋಗ್ಯವಂತನಾಗಿಯೂ ಬಲಾಢ್ಯನಾಗಿಯೂ ಇರಬಯಸುವವನು ಆರೋಗ್ಯವನ್ನು ನಾಶ ಮಾಡುವಂತಹ ಕಾಯಿಲೆಗಳ ಹಾಗೂ ಶಕ್ತಿಯನ್ನು ಕುಗ್ಗಿಸುವಂತಹ ಕಾರಣಗಳ ಬಗ್ಗೆ ಚೆನ್ನಾಗಿ ತಿಳುವಳಿಕೆಯನ್ನು ಹೊಂದಿರಬೇಕು. ಏನೇ ಆಗಲಿ, ನಿವಾರಣೆಯು ಗುಣಪಡಿಸುವುದಕ್ಕಿಂತ ಲೇಸು! ತಡೆಗಟ್ಟುವುದು ವಾಸಿಮಾಡುವುದಕ್ಕಿಂತಲೂ ಉತ್ತಮವಲ್ಲವೆ? ಇದೇ ರೀತಿಯಲ್ಲಿ, ಯಾರು ಯೋಗ

ವನ್ನು ಬಯಸುವರೋ ಅವರು ಯೋಗವನ್ನು ನಾಶಮಾಡುವ ಹಾಗೂ ಅದಕ್ಕೆ ಪ್ರತಿಕೂಲವಾದ ಅಂಶಗಳ ಬಗ್ಗೆ ಪೂರ್ಣ ತಿಳುವಳಿಕೆಯನ್ನು ಹೊಂದಿರಬೇಕು. ಪತಂಜಲಿಯು ತನ್ನ ವೈಜ್ಞಾನಿಕ ದೃಷ್ಟಿಯ ಮೂಲಕ ಯೋಗ ಮಾರ್ಗದಲ್ಲಿ ಅಡ್ಡಬರುವ ಅಂಶಗಳನ್ನು ವ್ಯವಸ್ಥಿತವಾಗಿ ಪಟ್ಟಿ ಮಾಡಿರುವನು. ಇವುಗಳನ್ನು "ಅಂತರಾಯ"ಗಳೆಂದು (ಯೋಗದ ಮಾರ್ಗದಲ್ಲಿರುವ ಅಡಚಣೆಗಳೆಂದು) ಕರೆದಿರುವನು. ಇವುಗಳನ್ನು ಎರಡು ಬಗೆಗಳಾಗಿ ವಿಂಗಡಿಸಿರುವನು. ಮೊದಲನೆಯದನ್ನು 'ಅಂತರಾಯ ಎಂದೂ ಎರಡನೆಯದನ್ನು "ವಿಕ್ಷೇಪಸಹಭುವಃ" (ಮನಸ್ಸಿನ ವಿಕ್ಷೇಪ ದೊಡನೆಯೇ ಇರತಕ್ಕವು) ಎಂದೂ ಕರೆದಿದ್ದಾನೆ.

'ಅಂತರಾಯಗಳು' ಒಂಬತ್ತು (ಯೋಗಸೂತ್ರಗಳು ೧.೩೦): ವ್ಯಾಧಿ (ಖಾಯಿಲೆ), ಸ್ತ್ಯಾನ (ಮಾನಸಿಕ ಆಲಸ್ಯ), ಸಂಶಯ (ಶಂಕೆ), ಪ್ರಮಾದ (ನಿರ್ಲಕ್ಷ್ಯ), ಆಲಸ್ಯ (ದೇಹಾಲಸ್ಯ), ಅವಿರತಿ (ವಿರಕ್ತಿಯ ಅಭಾವ), ಭ್ರಾಂತಿದರ್ಶನ (ಭ್ರಮೆ), ಅಲಬ್ಧ-ಭೂಮಿಕತ್ವ (ಯೋಗಭೂಮಿಕೆಗಳನ್ನು ಹೊಂದದೆ ಇರುವುದು) ಮತ್ತು ಅನವಸ್ಥಿತತ್ವ (ಯೋಗಭೂಮಿಕೆಗಳನ್ನು ಹೊಂದಿದಾಗ ಅವುಗಳಿಂದ ಜಾರಿ ಬೀಳುವುದು). ಇವುಗಳನ್ನು ಒಂದೊಂದಾಗಿ ಪರಿಶೀಲಿಸೋಣ.

೧. ವ್ಯಾಧಿ (ದೈಹಿಕ ಖಾಹಿಲೆ)

ಆರೋಗ್ಯ ಹಾಗೂ ದೀರ್ಘಾಯುಷ್ಯದ ಹಿಂದೂ ವಿಜ್ಞಾನವಾದ ಆಯುರ್ವೇದವು, ದೈಹಿಕ ಖಾಯಿಲೆಯನ್ನು ವಾತ, ಪಿತ್ತ ಮತ್ತು ಶ್ಲೇಷ್ಮವೆಂಬ ದೇಹದ ಮೂರು ಮುಖ್ಯ ರಸಧಾತುಗಳ ಅಸಮಸ್ಥಿತಿ ಎಂದು ವಿವರಿಸುತ್ತದೆ. ಆಹಾರ ಮತ್ತು ಪಾನೀಯಗಳು ಉತ್ಪತ್ತಿಮಾಡುವ ರಸದ ಅಸಮ ಪ್ರವಾಹ ಹಾಗೂ ಹಂಚಿಕೆ ಮತ್ತು ಇಂದ್ರಿಯಗಳ ಹೆಚ್ಚು ಕಡಿಮೆಯೂ ಕೂಡಿ ಖಾಯಿಲೆಯು ಇನ್ನೊಂದು ಕಾರಣವಾಗಿದೆ. ದೇಹ ಮತ್ತು ಮನಸ್ಸು ನಿಕಟವಾದ ಸಂಬಂಧವನ್ನು ಹೊಂದಿರುವುದರಿಂದ, ದೇಹದ ವ್ಯಾಧಿಗಳು ಮನಸ್ಸಿನ ಮೇಲೆ ಅಹಿತಕರ ಪರಿಣಾಮವನ್ನುಂಟುಮಾಡುವ ಮೂಲಕ ಯೋಗಾಭ್ಯಾಸವನ್ನು ಅಸಾಧ್ಯಗೊಳಿಸುವುದು ಸಹಜ. ಆದ್ದರಿಂದ ಖಾಯಿಲೆಯನ್ನು ವಾಸಿಮಾಡುವುದು, ಆರೋಗ್ಯವನ್ನು ಕಾಪಾಡಿಕೊಂಡು ಹೊಸ ಚೈತನ್ಯವನ್ನು ಪಡೆಯುವುದು ಯೋಗಕ್ಕೆ ಅಗತ್ಯವಾಗಿದೆ. ಔಷಧಿಗಳನ್ನು ತೆಗೆದುಕೊಳ್ಳುವುದು, ಆಹಾರದಲ್ಲಿ ಪಥ್ಯ ಹಾಗೂ ಆರೋಗ್ಯ ಮತ್ತು ನೈರ್ಮಲ್ಯದ ನಿಯಮಗಳನ್ನು ಪಾಲಿಸುವುದೂ, ಇವುಗಳ ಜೊತೆ ಆಸನಗಳ ಅಭ್ಯಾಸ ಈ ದಿಕ್ಕಿನಲ್ಲಿ ಬಹಳ ಸಹಾಯಕವಾಗುತ್ತದೆ. ಆಸನಗಳು ಪಕ್ಷಿ ಮತ್ತು ಪ್ರಾಣಿಗಳ ಭಂಗಿಗಳ ಅನುಕರಣೆಗಳಾಗಿರುವುದರಿಂದ, ಆರೋಗ್ಯ ಹಾಗೂ ಶಕ್ತಿಯನ್ನು ಕೊಡುವುದೇ ಅಲ್ಲದೆ, ಆಯಾಯ ಪ್ರಾಣಿಗಳ ನಿರ್ದಿಷ್ಟ ಚಟುವಟಿಕೆಗಳನ್ನೂ ಕೊಡುತ್ತವೆ. ಎಲ್ಲ ಬಗೆಯ 'ಅತಿ'ಯೂ ಆರೋಗ್ಯವನ್ನು ಕೆಡಿಸಿ ಯೋಗಾಭ್ಯಾಸವನ್ನು ಅಸಾಧ್ಯಗೊಳಿಸುವುದರಿಂದ, ಯೋಗಿಯು ಆಹಾರದಲ್ಲಿ, ನಿದ್ರೆಯಲ್ಲಿ, ಮನರಂಜನೆಯಲ್ಲಿ ಮತ್ತು ಕೆಲಸದಲ್ಲಿ 'ಇತಿ-ಮಿತಿ'ಯಿಂದಿರಬೇಕೆಂದು ಭಗವಂತನಾದ ಶ್ರೀಕೃಷ್ಣನು ಹೇಳಿರುವ ಉಪದೇಶ (ಗೀತೆ ೬-೧೬, ೧೭) ಈ ಸಂದರ್ಭದಲ್ಲಿ ಬಹಳ ಸಮಂಜಸವಾಗಿದೆ.

೨. ಸ್ತ್ಯಾನ (ಮಾನಸಿಕ ಆಲಸ್ಯ)

ತಂತ್ರಗಳನ್ನು ಹೂಡುವುದರಲ್ಲಿ ಮನಸ್ಸು ಚತುರವಾದದ್ದು. ಅಲ್ಲದೆ, ಅದು ತನಗೆ ಏನು ಬೇಕೋ ಅದನ್ನು ಆರಿಸಿಕೊಳ್ಳುವ ಸ್ವಭಾವವುಳ್ಳದ್ದು. ಸುಖವನ್ನು ಸವಿಯುವ ಸಂದರ್ಭ ಬಂದಾಗ ಅಥವಾ ತಕ್ಷಣವೇ ಫಲ ದೊರಕುವಂತಿದ್ದರೆ ಮನಸ್ಸು ಕೂಡಲೆ ಕಾರ್ಯಮಗ್ನವಾಗುವುದು. ಎಲ್ಲೆಲ್ಲಿ ಪರಿಶ್ರಮದ ಅಗತ್ಯವಿದೆಯೋ ಅದು ಅಲ್ಲಿಂದ ದೂರವೇ ಉಳಿಯುತ್ತದೆ! ಒಳ್ಳೆಯದಕ್ಕಾಗಿ ಶ್ರಮ ಪಡದೆ ಒಳ್ಳೆಯ ಫಲಗಳನ್ನು ಬಯಸುವುದೂ, ಕೆಟ್ಟದರಿಂದ ದೂರವಿರಲು ಪ್ರಯತ್ನಿಸದೆ ಕೆಟ್ಟ ಫಲಗಳನ್ನು ದೂಷಿಸುವುದೂ ಮಾನವ ಸ್ವಭಾವ (ತದ್ವಿರುದ್ಧವಾಗಿ, ಅನೇಕ ಸಲ ಜನರು ದಾರಿ ಬಿಟ್ಟುಹೋಗಿ ಪಾಪಕಾರ್ಯಗಳನ್ನೆಸಗುವರು!).

ವಿವೇಚನೆ ಮತ್ತು ಸಂಕಲ್ಪ ಶಕ್ತಿಗಳನ್ನು ಬೆಳೆಸಿಕೊಳ್ಳುವುದರಿಂದ ಮಾತ್ರ ಕಾಮುಕನ್ನು ಜಯಿಸ ಬಹುದಾಗಿದೆ. ಏಕಾಗ್ರತೆ ಮತ್ತು ಶಾಂತಿಯನ್ನು ಸಂಪಾದಿಸಲು ಯೋಗ ಶಿಕ್ಷಣವು ಸಹಾಯ ಮಾಡು ತ್ತದೆ ಎಂಬ ಮನವರಿಕೆಯನ್ನು ವಿವೇಚನೆ ಮಾಡಿಕೊಡುತ್ತದೆ. ಒಂದು ಸಲ ಈ ದೃಢ ನಂಬಿಕೆ ಮೂಡಿತೆಂದರೆ, ತನ್ನ ಒಡೆಯನ, ಸಾಧಕನ ಅನುಜ್ಞೆಯನ್ನು ಮನಸ್ಸು ಪಾಲಿಸುವಂತೆ ಅದನ್ನು ಒತ್ತಾಯಿಸಬೇಕು.

ಸಾಮಾನ್ಯವಾಗಿ ಸಂಕಲ್ಪಶಕ್ತಿಯನ್ನು ಬೆಳೆಸಿಕೊಳ್ಳುವುದು ಎಲ್ಲರೂ ಎದುರಿಸಬೇಕಾಗಿರುವ ಒಂದು ಸಮಸ್ಯೆಯಾಗಿದೆ. ವ್ಯಾಯಾಮದಿಂದ ದೇಹಶಕ್ತಿಯನ್ನು ಕ್ರಮಬದ್ಧವಾಗಿ ಪಡೆಯುವುದು ಸಾಧ್ಯ ವಾದರೆ, ಅದೇ ರೀತಿಯ ಪ್ರಯತ್ನವನ್ನು ಮನಶ್ಶಕ್ತಿಯನ್ನು ಸಂಪಾದಿಸಲು ಮಾಡುವುದು ಸಾಧ್ಯ ವಿಲ್ಲ ಎಂಬುದಕ್ಕೆ ಯಾವ ಕಾರಣವೂ ಇಲ್ಲ. ಮೊದಮೊದಲು ಅಲ್ಪ ಸುಖ ಮತ್ತು ಪ್ರಲೋಭನೆ ಗಳಿಗೆ ಬಲಿಯಾಗದೆ ಕ್ರಮವಾಗಿ ಆದರೂ ಖಂಡಿತವಾಗಿ ನಮ್ಮ ಸಂಕಲ್ಪಶಕ್ತಿಯನ್ನು ಹೆಚ್ಚಿಸಿಕೊಳ್ಳ ಬಹುದು. "ರೈತನೊಬ್ಬನು ಸಣ್ಣ ಕರುವೊಂದನ್ನು ಪ್ರತಿದಿನ ಹೊರುತ್ತಿದ್ದು, ಅದು ದೊಡ್ಡ ಗೂಳಿ ಯಾದಾಗಲೂ ಸುಲಭವಾಗಿ ಹೊತ್ತುಕೊಳ್ಳುವಂತಾದ" ಎಂಬ ಶ್ರೀಮಾತೆಯವರು ಕೊಡುವ ಉದಾಹರಣೆಯು ಇಲ್ಲಿಯೂ ಕೂಡ ನಮಗೆ ಅತ್ಯಾವಶ್ಯಕವಾದ ಪ್ರೋತ್ಸಾಹವನ್ನು ಕೊಡುತ್ತದೆ.

೩. ಸಂಶಯ (ಅನುಮಾನ)

ಹೊಸದಾದ ಯಾವುದೇ ಸಾಹಸದಲ್ಲಿ ಶಂಕೆ, ಭೀತಿಗಳು ಇದ್ದೇ ಇರುತ್ತವೆ. ನಮ್ಮ ಸ್ಪರ್ಶಕ್ಕೂ ಸಿಗಲಾರದ ಮತ್ತು ಅತಿಸೂಕ್ಷ್ಮವಾದ ಮನಸ್ಸಿನ ನಿಯಂತ್ರಣ ಹಾಗೂ ಏಕಾಗ್ರತೆ ಎಂಬ ಕ್ಷೇತ್ರಗಳ ಸಂಬಂಧದಲ್ಲಿ ಅಂತಹ ಅನುಮಾನಗಳು ಹುಟ್ಟುವುದು ಅನಿವಾರ್ಯ. ಅಂತಹ ಸಂದೇಹಗಳು ಕೆಲಸ ಮಾಡುವ ಕ್ಷೇತ್ರವೂ ಬಹುಮಟ್ಟಿಗೆ ಮೇರೆಯಿಲ್ಲದ್ದು. ಶಾಸ್ತ್ರಗಳು ಮತ್ತು ಗುರು ಹೇಳುವ ಸತ್ಯದ ಬಗ್ಗೆ ಸಂದೇಹ ಪ್ರಾರಂಭವಾಗಿ ಅನಂತರ ಯೋಗ ಸಾಧನೆಯಲ್ಲಿ ತನ್ನ ಸಾಮರ್ಥ್ಯದ ಬಗ್ಗೆಯೇ ಸಂದೇಹ ಬೆಳೆದರೆ, ಕಟ್ಟಕಡೆಗೆ ಅದು ತನ್ನ ಸ್ವಂತ ಅಸ್ತಿತ್ವದಲ್ಲಿಯೇ ಸಂಶಯ ಬರುವುದರಲ್ಲಿ ಕೊನೆಗೊಳ್ಳಬಹುದು! ಅಜ್ಞಾನಿಗಳು, ನಾಸ್ತಿಕರು ಮತ್ತು ಸಂಶಯಗ್ರಸ್ತರ ಬಗ್ಗೆ ಪ್ರಸ್ತಾಪಿಸುವಾಗ, ಕಡೆಯ ಗುಂಪಿನವರು ಇಹಲೋಕ ಮತ್ತು ಪರಲೋಕ ಎರಡನ್ನೂ ಕಳೆದುಕೊಂಡು ನಾಶಹೊಂದುವರೆಂದು ಭಗವಾನ್ ಶ್ರೀಕೃಷ್ಣ ಅವರನ್ನು ಖಂಡಿಸಿದ್ದಾನೆ. (ಗೀತೆ ೪.೪೦)

ಪವಿತ್ರ ಗ್ರಂಥಗಳಲ್ಲಿ, ಆಧ್ಯಾತ್ಮಿಕ ಗುರುವಿನಲ್ಲಿ ಹಾಗೂ ತನ್ನಲ್ಲಿ ಶ್ರದ್ಧೆಯನ್ನು ಬೆಳೆಸಿಕೊಳ್ಳುವುದು ಮಾತ್ರವೇ ಈ ರೋಗಕ್ಕೆ ಮದ್ದಾಗಿದೆ. ತನ್ನ ಬಂಧುಗಳಲ್ಲಿ, ಸ್ನೇಹಿತರಲ್ಲಿ ಮತ್ತು ನೆರೆ ಹೊರೆಯವರಲ್ಲಿ ನಂಬಿಕೆಯಿಲ್ಲದಿದ್ದರೆ ದಿನನಿತ್ಯದ ಜೀವನವೂ ಅಸಾಧ್ಯ ಎಂಬುದನ್ನು ತನಗೆ ತಾನೇ ಮನವರಿಕೆ ಮಾಡಿ ಕೊಳ್ಳಬೇಕು. ಹಾಗಾದರೆ, ಕಾಣದ ಮತ್ತು ತಿಳಿಯದೇ ಇರುವುದರತ್ತ ಪ್ರಯಾಣವಾಗಿರುವ ಆಧಾತ್ಮಿಕ ಜೀವನದಲ್ಲಿ ಇನ್ನೂ ಎಷ್ಟು ಹೆಚ್ಚಿನ ನಂಬಿಕೆಯೂ ಅಗತ್ಯವಿದೆ!

೪. ಪ್ರಮಾದ (ನಿರ್ಲಕ್ಷ್ಯ)

ಲೌಕಿಕ ಸ್ವಾತಂತ್ರ್ಯದ ಬೆಲೆ 'ನಿರಂತರವಾದ ಜಾಗರೂಕತೆ' ಆಗಿರುವುದೇ ಆದರೆ, ಆಧ್ಯಾತ್ಮಿಕ ಸ್ವಾತಂತ್ರ್ಯಕ್ಕೆ ಅದಕ್ಕಿಂತಲೂ ಮಿಗಿಲಾದ ಬೆಲೆಯನ್ನು ಕೊಡಬೇಕಾಗುತ್ತದೆ. ಇಲ್ಲಿ, ಅಜಾಗರೂಕತೆಯು ಸ್ವಾತಂತ್ರ್ಯಕ್ಕೆ ಅದಕ್ಕಿಂತಲೂ ಮಿಗಿಲಾದ ಬೆಲೆಯನ್ನು ಕೊಡಬೇಕಾಗುತ್ತದೆ. ಇಲ್ಲಿ, ಅಜಾಗರೂಕತೆಯು (ಹುಟ್ಟು-ಸಾವುಗಳ ನಿರಂತರ ಚಕ್ರವಾದ) ಸಂಸಾರದೆಡೆಗೆ ಎಳೆದೊಯ್ಯುತ್ತದೆ. ಆದ್ದರಿಂದಲೆ ಪ್ರಮಾದವೇ ಮೃತ್ಯು ಎಂದು ಸನತ್ಸುಜಾತ ಮಹರ್ಷಿಯು ಸಾರಿ ಹೇಳುವನು. (ಸನತ್ ಸುಜಾತೀಯ ೧.೪)

ಯೋಗಕ್ಕೆ ಸಾಧನಗಳೆಂದು ನಿರ್ಧರಿಸಲ್ಪಟ್ಟಿರುವ ಜ್ಞಾನ ಮತ್ತು ಸತ್ಯ-ಅಹಿಂಸೆ ಮೊದಲಾದ ಸದ್ಗುಣಗಳನ್ನು ಬೆಳೆಸಿಕೊಳ್ಳುವಲ್ಲಿ ಉಂಟಾಗುವ ಮರೆವು ಮತ್ತು ನಿರ್ಲಕ್ಷ್ಯವೇ ಪ್ರಮಾದ. ಈ ಸದ್ಗುಣಗಳನ್ನು ಪರಿಶ್ರಮ ಪೂರ್ವಕವಾಗಿ ಬೆಳೆಸಿಕೊಂಡು ರಕ್ಷಿಸದೆ ಹೋದರೆ ಯೋಗವು ಸಾಧ್ಯ

ವಾಗುವುದಿಲ್ಲ. ಗಮನವಿಲ್ಲದೆ ಚಂಡಿನಾಟ ಆಡುತ್ತಿರುವ ಮಗುವಿನ ಕೈಯಿಂದ ಚೆಂಡು ಜಾರಿ ಮಹಡಿಯ ಮೇಲಿಂದ ಕೆಳಗೆ ಬೀಳುವಂತೆ ಜಾಗರೂಕತೆಯ ಅಭಾವವು ಆಧ್ಯಾತ್ಮಿಕ ಜೀವನದಿಂದ ಬಹಳ ಬೇಗನೆ ಅಧೋಗತಿಗಿಳಿಯುವಂತೆ ಮಾಡುತ್ತದೆ. (ವಿವೇಕ ಚೂಡಾಮಣಿ ೩೨೫). ಪ್ರಪಂಚದಲ್ಲಿ ಕ್ಷುಲ್ಲಕ ಐಶ್ವರ್ಯ ಕ್ಕಾಗಿ ಮತ್ತು ಕೀಳು ಲಾಭಕ್ಕಾಗಿ ಬಹಳ ಗಮನವನ್ನು ಕೊಡಲಾಗಿದೆ. ಆಧ್ಯಾತ್ಮಿಕ ಸಂಪತ್ತಾದ ಯೋಗದ ಸಾಧನೆಗಳಿಗೆ ಕಡೆಯಪಕ್ಷ ಅಷ್ಟೇ ಗಮನವನ್ನು ಕೊಡಬಾರದೇ?

೫. ಆಲಸ್ಯ (ದೈಹಿಕ ಸೋಮಾರಿತನ)

"ಸೋಮಾರಿತನ ಎಷ್ಟು ನಿಧಾನವಾಗಿ ಸಾಗುತ್ತದೆಯೆಂದರೆ ದಾರಿದ್ರ್ಯ ಅದನ್ನು ಬಹುಬೇಗ ಹಿಂದಕ್ಕೆ ಹಾಕುತ್ತದೆ" ಎಂಬ ಚಮತ್ಕಾರದ ನುಡಿಯಿದೆ! ಸೋಮಾರಿತನವು ಶ್ರೇಯಸ್ಸಿಗೇ ಹೀಗೆ ವೈರಿ ಯಾಗುವುದಾದರೆ ಶ್ರೇಯಸ್ಸಿಗೆ (ಆಧ್ಯಾತ್ಮಿಕ ಸಂಪತ್ತಿಗೆ) ಅದು ಇನ್ನೆಷ್ಟಾಗಬೇಕು! ಸತ್ಕಾರ್ಯ ಗಳೂ ಸೇರಿದ ಹಾಗೆ ಆರೋಗ್ಯಕರವಾದ ಚಟುವಟಿಕೆಗಳಲ್ಲಿ ನಿರತರಾಗಿರುವುದರ ಮೂಲಕ ಮಾತ್ರ ಸೋಮಾರಿತನವನ್ನು ಗೆಲ್ಲಬಹುದು.

೬. ಅವಿರತಿ (ವೈರಾಗ್ಯದ ಅಭಾವ)

ಯೋಗವು ಆಧ್ಯಾತ್ಮಿಕ ವಿಚಾರಗಳಿಗೆ ಸಂಬಂಧಪಟ್ಟಿದೆ. ಆತ್ಮಸಾಕ್ಷಾತ್ಕಾರದೆಡೆಗೆ ಒಯ್ಯುವಂಥ ಆತ್ಮಾನುಸಂಧಾನವೇ. ಆತ್ಮವನ್ನು ಕುರಿತ ಪೂರ್ಣ ಏಕಾಗ್ರತೆಯೇ ಯೋಗ. ತನ್ನೆಲ್ಲಾ ಕೋಳಗಳಿಂದ ಮುಕ್ತವಾದ ಹೊರತು ಇದು ಸಾಧ್ಯವಿಲ್ಲ. ಅನಾತ್ಮವಾದುದರೊಂದಿಗೆ. ಪ್ರಾಪಂಚಿಕ ವಸ್ತುಗಳೊಂದಿಗೆ. ಶ್ರೀ ರಾಮಕೃಷ್ಣರು ಹೇಳುವಂತೆ ಕಾಮಿನಿ ಮತ್ತು ಕಾಂಚನಗಳಿಗೆ ಅಂಟಿಕೊಂಡಿರುವುದೇ ಆ ಕೋಳಗಳು. ದೈವ ಮತ್ತು ದೆವ್ವ ಜೊತೆಯಾಗಿರಲು ಸಾಧ್ಯವಿಲ್ಲ. ಆದ್ದರಿಂದ ಯೋಗಾಕಾಂಕ್ಷಿಯು ನಿರ್ಲಿಪ್ತತೆ ಮತ್ತು ವಿರಕ್ತಿಯನ್ನು ನಿರಂತರವಾಗಿ ಅಭ್ಯಾಸಮಾಡಬೇಕು. ಸಂಕಲ್ಪ ಶಕ್ತಿಯನ್ನು ರೂಢಿಸಿಕೊಳ್ಳು ವುದರಲ್ಲಿರುವಂತೆಯೇ. ಇಲ್ಲಿಯೂ ಸಹ. ಸಣ್ಣ ಪುಟ್ಟ ವಸ್ತುಗಳಿಂದ ದೂರವಿರುವುದನ್ನು ಅಭ್ಯಸಿಸು ವುದರ ಮೂಲಕ ನಿರ್ಲಿಪ್ತತೆಯನ್ನು ಬೆಳೆಸಿಕೊಳ್ಳಬಹುದು. ಆದರೆ ಇದು ಕೇವಲ ನಿಷೇಧಾರ್ಥಕ ವಾದದ್ದು. ವಿವೇಚನೆಯನ್ನು ಬೆಳೆಸಿಕೊಳ್ಳುವುದರ ಮೂಲಕ ಪ್ರಲೋಭನೆಯ ವಸ್ತುಗಳಲ್ಲಿರುವ ನಿಜವಾದ ಅಪಾಯವನ್ನು ನೋಡುವುದು ಉತ್ತಮ ಮಾರ್ಗ.

೭. ಭ್ರಾಂತಿ ದರ್ಶನ (ಭ್ರಮೆ)

ಇದು ಮತ್ತು ಮುಂದಿನ ಎರಡು ಅಡಚಣೆಗಳು ಹೆಚ್ಚು ಗಂಭೀರವಾದುವಾದ್ದರಿಂದ ಅವನ್ನು ದಾಟಲು ಹೆಚ್ಚಿನ ಪ್ರಯತ್ನ ಮತ್ತು ಬಹಳ ಜಾಗ್ರತೆಯ ನಿಗಾವಹಿಸಿ ಅಗತ್ಯ. ಬೌದ್ಧಿಕ ಮಟ್ಟದಲ್ಲಿ. ಗುರುವಿನ ಹಾಗೂ ಶಾಸ್ತ್ರಗಳ ಬೋಧನೆಗಳನ್ನು ತಪ್ಪಾಗಿ ಅರ್ಥಮಾಡಿಕೊಳ್ಳುವ ರೀತಿಯಲ್ಲಿ ಭ್ರಾಂತಿಯು ದೃಷ್ಟಿ ಪ್ರಕಟವಾಗುವುದು. ಇದು ಬುದ್ಧಿ ಮಾಂದ್ಯದಿಂದ ಅಥವಾ ಬುದ್ಧಿ ವಿಕಲ್ಪದಿಂದ ಪರಿಣಮಿಸಬಹುದು. ಅನೇಕ ಸಲ ಇದು ದುರಹಂಕಾರದಿಂದಲೂ ಸಂಭವಿಸುತ್ತದೆ. ಹೇಗೇ ಇರಲಿ. ನಮ್ರತೆಯಿಂದ ಗುರುವಿ ನೊಡನೆ ನಡೆಸುವ ಸಂವಾದ ಮತ್ತು ಸಂಭಾಷಣೆಗಳು ಈ ಅಡಚಣೆಯನ್ನು ಪರಿಹರಿಸುತ್ತದೆ.

ಮಾನಸಿಕ ಮಟ್ಟದಲ್ಲಿಯೂ ಭ್ರಮೆಯ ಸಾಧ್ಯತೆ ಇದೆ. ಅಭ್ಯಾಸದ ತಪ್ಪು ವಿಧಾನಗಳು ಭ್ರಾಂತಿ ಯನ್ನು ಉಂಟು ಮಾಡಲು ಸಾಧ್ಯ: ಗುರುವಿನೊಡನೆ ಅಥವಾ ಆಧ್ಯಾತ್ಮಿಕ ಜೀವನದಲ್ಲಿ ಮುಂದು ವರೆದಿರುವವರೊಡನೆ ಸಮಾಲೋಚನೆ ನಡೆಸುವುದರಿಂದ ಭ್ರಾಂತಿಯನ್ನು ನಿವಾರಿಸಬಹುದು. ಹಾಗಾದರೆ ಅತೀಂದ್ರಿಯಾನುಭವವು (psychic experience) ನಿಜವೋ ಸುಳ್ಳೋ ಎಂದು ಹೇಗೆ ತಿಳಿಯುವುದು? ನಿಜವಾದ ಅನುಭವವು ಆನಂದವನ್ನೂ ಶಾಂತಿಯನ್ನೂ ಕೊಡುತ್ತದೆ. ಆದರೆ ಮಿಥ್ಯಾನುಭವವು ಯಾವ ಪರಿಣಾಮವನ್ನೂ ಉಂಟುಮಾಡದೆ ಇರಬಹುದು ಅಥವಾ ದುಃಖ ಭೀತಿ ಮತ್ತು ಒತ್ತಡಗಳನ್ನು

ಉಂಟು ಮಾಡಬಹುದು. ಅತೀಂದ್ರಿಯಾನುಭವಗಳಾದ ಅತೀಂದ್ರಿಯದೃಷ್ಟಿ (clairvoyance) ಹಾಗೂ ಅತೀಂದ್ರಿಯ ಶ್ರವಣಗಳು (clairaudience) ಹಿತವಾದರೂ, ಆತ್ಮ ಸಾಕ್ಷಾತ್ಕಾರದ ಮಿಥ್ಯಕಲ್ಪನೆಗಳನ್ನು ಸೃಷ್ಟಿಸುವುದರ ಮೂಲಕ ಮುಂದಿನ ಬೆಳವಣಿಗೆಯನ್ನು ಕುಂಟಿಸುತ್ತವೆ. ದಾರಿಬದಿಯಲ್ಲಿ ನಡೆಯುತ್ತಿದ್ದ ಜಾದೂ ಆಟ (magic show) ನೋಡುತ್ತಾ ಕಾಲ ಕಳೆದು, ತಾನು ಪ್ರಯಾಣಮಾಡಬೇಕಾಗಿದ್ದ ರೈಲನ್ನು ತಪ್ಪಿಸಿಕೊಂಡ ಮನುಷ್ಯನ ಮೂರ್ಖತನವನ್ನು ಇದು ಹೋಲುತ್ತದೆ! ಆಧ್ಯಾತ್ಮಿಕ ಪಿಪಾಸುಗಳಲ್ಲಿ ಸ್ವಾಭಾವಿಕವಾಗಿ ಅತೀಂದ್ರಿಯ ಶಕ್ತಿಗಳ ಪ್ರಲೋಭನೆಗಳನ್ನು ದಾಟಿಹೋಗಲು ಹೆಚ್ಚಿನ ಶಕ್ತಿ ಮತ್ತು ಜ್ಞಾನ ಬೇಕು. ಸ್ವತಃ ಪತಂಜಲಿಯೇ (ಸೂತ್ರ ೩.೫೧) ಆಧ್ಯಾತ್ಮಿಕ ಪಿಪಾಸುಗಳನ್ನು ಈ ಅಪಾಯದ ವಿರುದ್ಧ ಎಚ್ಚರಿಸುತ್ತಾನೆ: 'ಸ್ವರ್ಗಲೋಕದಲ್ಲಿ ವಾಸ ಮಾಡುವ ಅಲೌಕಿಕ ಜೀವಿಗಳು ಯೋಗಿಯನ್ನು (ತಮ್ಮ ಲೋಕಗಳಿಗೆ) ಸ್ವಾಗತಿಸುವಾಗ. ಸಂಸಾರಕ್ಕೆ ಜಾರುವ ಸಾಧ್ಯತೆ ಬಹಳ ಇರುವುದರಿಂದ ಅವನು ಯಾವ ಪ್ರಲೋಭನೆಗೂ ಒಳಗಾಗಬಾರದು ಹಾಗೂ ಹೆಮ್ಮೆಯಿಂದ ಉಬ್ಬಿಹೋಗಲೂ ಬಾರದು.

೮. ಅಲಬ್ಧ ಭೂಮಿಕತ್ವ (ಯೋಗಾವಸ್ಥೆಗಳನ್ನು ಪಡೆಯದೆ ಇರುವುದು)

ಸಾಧಕನು ಯೋಗದ ವಿವಿಧ ಕ್ರಮಗಳನ್ನು ಶಿಸ್ತುಗಳನ್ನು ಸರಿಯಾಗಿ ಅಭ್ಯಾಸ ಮಾಡುತ್ತಿದ್ದರೂ ಕೂಡ, ಯೋಗ ಶಾಸ್ತ್ರಗಳಲ್ಲಿ ಹೇಳಿರುವ ಯಾವುದೇ ಯೋಗಭೂಮಿಗಳಿಗೆ (ಅತೀಂದ್ರಿಯ ಮತ್ತು ಆಧ್ಯಾತ್ಮಿಕ ಅನುಭವಗಳು) ಏರುವುದರಲ್ಲಿ ವಿಫಲನಾಗುತ್ತಾನೆ. ಶ್ರೀರಾಮಕೃಷ್ಣರು ಹೇಳುತ್ತಿದ್ದ ಒಂದು ಸುಂದರ ರೂಪಕದ ಬೆಳಕಿನಲ್ಲಿ ಈ ನಿರರ್ಥಕತೆಯ ಹಿಂದಿರುವ ವ್ಯಾಧಿಯನ್ನು ಮತ್ತು ಪರಿಹಾರವನ್ನೂ ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ಒಬ್ಬ ರೈತನು ಹಗಲೆಲ್ಲಾ ದುಡಿದು ಜಮೀನಿಗೆ ನೀರು ಹಾಯಿಸುತ್ತಿದ್ದನು. ಮರುದಿನ ನೋಡಿದರೆ ಜಮೀನು ಪೂರ್ತಿ ಒಣಗಿಹೋಗಿರುತ್ತಿತ್ತು. ಇದಕ್ಕೆ ಕಾರಣ ಅವನಿಗೆ ತಿಳಿಯದೇ ಹೋದಾಗ ಅವನು ಗೆಳೆಯನ ಸಹಾಯವನ್ನು ಕೋರಿದನು. ಪೊದೆಯ ಮರೆಯಲ್ಲಿದ್ದ ಕೆಲವು ಇಲಿಬಿಲಗಳು ಆ ನೀರನ್ನೆಲ್ಲಾ ನುಂಗುತ್ತಿರುವುದನ್ನು ಅವನು ತೋರಿಸಿದಾಗ ಕಾರಣ ಸ್ಪಷ್ಟವಾಯಿತು. ಆ ಇಲಿಬಿಲಗಳನ್ನು ಮುಚ್ಚಿದಾಗ, ಸಮಸ್ಯೆಯು ಬಗೆಹರಿಯಿತು. ಯೋಗಿಯ ವ್ಯಕ್ತಿತ್ವದಲ್ಲಿಯೂ ಮುಚ್ಚಿ ಭದ್ರ ಪಡಿಸಬೇಕಾಗಿರುವ ಇಂತಹವೇ 'ಇಲಿಬಿಲ'ಗಳಿವೆ. ಕಾಮಿನಿ ಕಾಂಚನಗಳಲ್ಲಿ ಅತಿಯಾದ ವ್ಯಾಮೋಹ. ಪಾದರಸದಂಥ ಹಿಡುಕುತನ. ಕಡುಸ್ವಾರ್ಥತೆ ಮುಂತಾದ ಆಳವಾಗಿ ಬೇರುಬಿಟ್ಟ ಯಾವುದೇ ಕೆಟ್ಟ ಪ್ರವೃತ್ತಿಗಳು 'ಇಲಿಬಿಲ'ಗಳಾಗಿರಬಹುದು. ಕೆಡುಕುಗಳು ಅನೇಕವೇಳೆ ಅಪೇಕ್ಷಣೀಯವಾದ ಸದ್ಗುಣಗಳ ವೇಷಹಾಕುವುದರಿಂದ ಸಾಧಕನು ಅವುಗಳ ನಿಜರೂಪಗಳನ್ನು ಗುರುತಿಸದೇ ಹೋಗುತ್ತಾನೆ. ಶಾಂತವಾದ ಮತ್ತು ಆಳವಾದ ಆತ್ಮಪರೀಕ್ಷೆಯಿಂದ ಗುರು ಮತ್ತು ಸೋದರ ಶಿಷ್ಯರುಗಳೊಡನೆ ನಡೆಸುವ ಸಮಾಲೋಚನೆಯಿಂದ ಸಾಧಕನು ತನ್ನ ದೌರ್ಬಲ್ಯಗಳನ್ನು ಕಂಡುಕೊಂಡು ಅವುಗಳನ್ನು ನಿವಾರಿಸಿಕೊಳ್ಳುವ ಮೂಲಕ ತನ್ನ ಮುನ್ನಡೆಯನ್ನು ಚುರುಕುಗೊಳಿಸಬಹುದು.

೯. ಅನವಸ್ಥಿತತ್ವ (ಯೋಗಾವಸ್ಥೆಗಳನ್ನು ಪಡೆದನಂತರ ಅವುಗಳಿಂದ ಜಾರುವುದು)

ಈ ಆತಂಕವು ಇನ್ನೂ ತೀವ್ರತರವಾದದ್ದು. ಬಹಳ ಪರಿಶ್ರಮದಿಂದ ಯೋಗಿಯು ತನ್ನ ಮನಸ್ಸನ್ನು ಉನ್ನತ ಸ್ಥಿತಿಗಳಿಗೆ ಏರಿಸುವುದರಲ್ಲಿ ಜಯಶೀಲನಾಗುತ್ತಾನೆ: ಆದರೆ ಬಹಳ ಬೇಗನೆ ಅದು ಕೆಳಗಿನ ಅವಸ್ಥೆಗೆ ಜಾರುತ್ತದೆ ಅಥವಾ ತನ್ನ ಹಳೆಯ ಜಾಡಿಗೆ ಬೀಳುತ್ತದೆ. ಇದು. ಕೆಲವು ತುಂಟ ಹುಡುಗರು ಮುಂಗುಸಿಯ ಬಾಲಕ್ಕೆ ಇಟ್ಟಿಗೆಯ ಚೂರೊಂದನ್ನು ಕಟ್ಟಿದಂತೆ. ಯಾವಾಗ ಅದು ಬಹಳ ಕಷ್ಟಪಟ್ಟುಕೊಂಡು ಗುಡಿಸಲಿನ ಮಾಳಿಗೆಯ ಹತ್ತಿರವಿರುವ ತನ್ನ ಬಿಲವನ್ನು ತಲುಪುವುದೋ ಆಗ ಇಟ್ಟಿಗೆ ಚೂರಿನ ಭಾರ ಅದನ್ನು ಹಿಂದಕ್ಕೆ ಎಳೆಯುತ್ತದೆ.

ಸಾಧಕನ ಅಧೋಗತಿಯ ಕಾರಣಗಳು ಹಿಂದಿನ ಆತಂಕವನ್ನು ವಿವರಿಸುವಾಗ ತಿಳಿಸಿದ ಕಾರಣಗಳನ್ನು ಹೋಲುತ್ತವೆ. ಹಳೆಯ ಸಂಸ್ಕಾರಗಳ (ಪ್ರವೃತ್ತಿಗಳ) 'ಇಟ್ಟಿಗೆ'ಯನ್ನು ಮೊದಲು ತೆಗೆದು ಹಾಕಬೇಕು.

ಈ ಒಂಬತ್ತು ಅಡಚಣೆಗಳ ಜೊತೆಗೆ, ಪತಂಜಲಿಯು ಇನ್ನೂ ಐದನ್ನು ಸೇರಿಸಿ, ಅವುಗಳನ್ನು ಎರಡನೆ ಗುಂಪೆಂದು ಬೇರೆಯಾಗಿ ವಿಂಗಡಿಸುತ್ತಾನೆ. ಅವು ಯಾವುವೆಂದರೆ:

ದುಃಖ, ದೌರ್ಮನಸ್ಯ (ಖಿನ್ನತೆ), ಅಂಗಮೇಜಯತ್ವ (ಅಂಗಗಳ ಚಾಂಚಲ್ಯ), ಶ್ವಾಸ (ಉಸಿರನ್ನು ಬಲಾತ್ಕಾರವಾಗಿ ಒಳಗೆ ಎಳೆದುಕೊಳ್ಳುವುದು), ಪ್ರಶ್ವಾಸ (ಉಸಿರನ್ನು ಪ್ರಯತ್ನಪೂರ್ವಕವಾಗಿ ಹೊರಗೆ ಬಿಡುವುದು). ಇವುಗಳನ್ನು 'ವಿಕ್ಷೇಪಸಹಭುವಃ' (ಚಿತ್ತ ಭ್ರಮಣೆಯ ಜೊತೆಯಲ್ಲಿಯೇ ಇರುವುದು) ಎಂದು ಕರೆಯುತ್ತಾನೆ. ಏಕೆಂದರೆ ಅವುಗಳು ಉಂಟಾದಾಗಲೆಲ್ಲಾ ತಕ್ಷಣ ಮತ್ತು ತಪ್ಪದೆ ಚಿತ್ತ ವಿಕ್ಷೇಪವೂ ಹಿಂಬಾಲಿಸುತ್ತದೆ.

ದುಃಖ (ನೋವು, ಸಂಕಟ)

ದೈಹಿಕ ಕಾಯಿಲೆ, ಗಾಯಗಳು, ಮಾನಸಿಕ ಒತ್ತಡಗಳು, ನೈಸರ್ಗಿಕ ದುರಂತಗಳು ಮುಂತಾದವುಗಳಿಂದ ದುಃಖ ಉಂಟಾಗುವುದು. ಇದು ಇರುವವರೆಗೂ ಮನಸ್ಸು ಕದಡಿಹೋದ ಸ್ಥಿತಿಯಲ್ಲಿದ್ದು ಯೋಗಾಭ್ಯಾಸಗಳನ್ನು ಅಸಾಧ್ಯಗೊಳಿಸುವುದು. ದುಃಖ ಉಂಟಾದಾಗ ಅದರ ಕಾರಣಗಳನ್ನು ನಿವಾರಿಸುವುದು ಅಥವಾ ಅನಿವಾರ್ಯವಾದಾಗ ತಾಳ್ಮೆಯಿಂದ ಅನುಭವಿಸುವುದೊಂದೇ ಪರಿಹಾರ.

ದೌರ್ಮನಸ್ಯ (ನಿರಾಶೆ)

ಈಡೇರದ ಆಸೆ ಮತ್ತು ಆಕಾಂಕ್ಷೆಗಳಿಂದ ದೌರ್ಮನಸ್ಯ ಉಂಟಾಗುತ್ತದೆ. ತನ್ನಷ್ಟಕ್ಕೆ ತಾನೆ ಇದು ಮನಸ್ಸಿನಲ್ಲಿ ತುಮುಲವನ್ನು ಹುಟ್ಟಿಸುತ್ತದೆ. ನಮ್ಮ ಎಲ್ಲ ಆಸೆ ಮತ್ತು ಆಕಾಂಕ್ಷೆಗಳನ್ನು ಈಡೇರಿಸುವುದು ಸಾಧ್ಯವೂ ಅಲ್ಲ, ಅಪೇಕ್ಷಣೀಯವೂ ಅಲ್ಲ. ಆದ್ದರಿಂದ ಸಾಧಕನು ವಿವೇಚನೆಗೆ ಮರೆಹೋಗಬೇಕು. ನಮ್ಮೆಲ್ಲ ಕಷ್ಟಗಳಿಗೆ ಆಸೆಯೇ ಮೂಲ ಕಾರಣ ಎಂಬುದನ್ನು ಮನವರಿಕೆಮಾಡಿಕೊಳ್ಳಬೇಕು. ಒಂದು ಸಲ ಆಸೆಯ ತೀವ್ರತೆ ಕಡಿಮೆಯಾಯಿತೆಂದರೆ, ನಿರಾಶೆಯ ಆಘಾತವೂ ಕಡಿಮೆಯಾಗುತ್ತದೆ. ಅದನ್ನು ಪೂರ್ತಿಯಾಗಿ ತೊಡೆದುಹಾಕಿದರೆ, ತೊಡೆದು ಹಾಕಿದಾಗ, ಸಮಸ್ಯೆಯು ಶಾಶ್ವತವಾಗಿ ಬಗೆಹರಿಯುತ್ತದೆ.

ಅಂಗಮೆ ಜಯತ್ವ (ಅಂಗಾಗಗಳ ಚಂಚಲತೆ)

ಯಾವಾಗ ದುಃಖ, ಆಶಾಭಂಗ ಮತ್ತು ನಿರಾಶೆಗಳನ್ನು ವಿವೇಚನೆ ಮತ್ತು ಸಂಕಲ್ಪಶಕ್ತಿಯಿಂದ ಅಡಗಿಸಿ ಮನಸ್ಸನ್ನು ಊರ್ಧ್ವಗಾಮಿಯಾಗಿ ಮಾಡುವುದಿಲ್ಲವೋ ಆಗ ಅವು ಮನಸ್ಸಿನಲ್ಲಿ ಅಗಾಧವಾದ ಅಶಾಂತಿಯನ್ನು ಉಂಟುಮಾಡುತ್ತವೆ. ಇದು ನರಮಂಡಲವನ್ನು ಘಾಸಿಗೊಳಿಸಿ ದೈಹಿಕ ಚಂಚಲತೆಯಾಗಿ (ಅಸ್ವಸ್ಥತೆ) ಪ್ರಕಟವಾಗುತ್ತದೆ. ಇದರಿಂದಾಗಿ ಮುಮುಕ್ಷುವು ಆಸನದ ಮೇಲೆ ಸ್ಥಿರವಾಗಿ ಕುಳಿತುಕೊಳ್ಳಲಾರ ಮತ್ತು ಆಗಾಗ ತನ್ನ ಸ್ಥಾನವನ್ನು ಬದಲಾಯಿಸುವನು. ಪಟ್ಟುಹಿಡಿದು ಮಾಡುವ ಯೋಗಾಭ್ಯಾಸ, ಪ್ರಣವದ (ಓಂ) ಪುನರುಚ್ಚಾರಣೆ ಮತ್ತು ದೇವರಲ್ಲಿ ಶರಣಾಗುವ ಮನೋಭಾವ—ಕ್ರಮವಾಗಿ ಈ ಅಶಾಂತಿಯನ್ನು ಕಡಿಮೆಮಾಡುತ್ತದೆ.

ಶ್ವಾಸ ಮತ್ತು ಪ್ರಶ್ವಾಸ (ಬಲಾತ್ಕಾರವಾಗಿ ಉಸಿರನ್ನು ಒಳಗೆ ಎಳೆದುಕೊಳ್ಳುವುದು ಮತ್ತು ಹೊರಗೆ ಬಿಡುವುದು)

ಪ್ರಾಣಾಯಾಮದ ಅಭ್ಯಾಸಕ್ಕೆ ಇವು ನಿಜವಾಗಿಯೂ ಅಡಚಣೆಗಳಾಗಿವೆ. ಯೋಗಿಯು ಉಸಿರನ್ನು ತಡೆದಿಡಬೇಕೆಂದಾಗ, ಅದು ಬಲವಂತವಾಗಿ ಒಳಕ್ಕೆ ಸೆಳೆದುಕೊಳ್ಳಲ್ಪಡುವುದು. ಈ ನ್ಯೂನತೆಯು

ಸ್ವಲ್ಪ ಮಟ್ಟಿಗೆ ಮಾನಸಿಕ ಚಂಚಲತೆಯಿಂದಾಗಿ ಸ್ವಲ್ಪ ಮಟ್ಟಿಗೆ ಪ್ರಾಣಾಯಾಮದ ಅಭ್ಯಾಸದ ಕೊರತೆಯಿಂದಾಗಿ ಇರುತ್ತದೆ. ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳಲು ಹಾಗೂ ಅದರ ಚಂಚಲತೆಯನ್ನು. ಕಡಿಮೆಮಾಡುವುದಕ್ಕೂ ಈ ಮೊದಲೇ ತಿಳಿಸಿರುವ ಕೆಲವು ವಿಧಾನಗಳ ಜೊತೆಗೆ. ತೀವ್ರವಾದ ಮತ್ತು ಕ್ರಮಬದ್ಧವಾದ ಪ್ರಾಣಾಯಾಮದ ಅಭ್ಯಾಸವು ಉಸಿರಾಟದಲ್ಲಿ ಸಮತೋಲನವನ್ನು ಸ್ಥಿರಗೊಳಿಸುವುದು. ಅಷ್ಟೇ ಅಲ್ಲದೆ ಇದು ಮನಸ್ಸಿನ ಮೇಲೆ ಸ್ಥಿಮಿತ ಸ್ಥಿತಿಯ ಹಾಗೂ ಸಮಾಧಾನದ ಪರಿಣಾಮವನ್ನು ಉಂಟುಮಾಡುತ್ತದೆ.

ಇಲ್ಲಿಯವರೆಗೂ ಪತಂಜಲಿಯು ಪಟ್ಟಿಮಾಡಿದ್ದ ಹದಿನಾಲ್ಕು ಅಡಚಣೆಗಳನ್ನು ವಿಚಾರಮಾಡಿದ್ದಾಗಿದೆ. ಸೂಕ್ತವಾದ ಪರಿಹಾರಗಳನ್ನೂ ಸೂಚಿಸಲಾಗಿದೆ. ಆದರೆ ಯೋಗಕ್ಕೆ ಸಂಭವಿಸುವ ಈ ಎಲ್ಲಾ ಅಡಚಣೆಗಳನ್ನು ತೊಡೆದು ಹಾಕಲು ಪ್ರತ್ಯಕ್ಷವಾದ ಅಥವಾ ಪರೋಕ್ಷವಾದ ಯಾವುದಾದರೂ ವಿಧಾನವನ್ನು ಪತಂಜಲಿಯು ಸ್ವತಃ ಸೂಚಿಸುವನೆ? ಈ ಸಮಸ್ಯೆಯ ಪರಿಹಾರಕ್ಕೆ ಸಹಾಯಮಾಡುವಂತಹ ಕೆಲವು ಸೂತ್ರಗಳಿವೆ.

ಪತಂಜಲಿಯು ಓರ್ವ ದೈವಭಕ್ತನಾಗಿದ್ದನು ಎಂಬುದು ಸ್ಪಷ್ಟ. ಆದ್ದರಿಂದಲೇ ಇವನ ಯೋಗ ಶಾಸ್ತ್ರವನ್ನು ಸೇಶ್ವರ-ಸಾಂಖ್ಯ (ದೇವರು ಅಥವಾ ಈಶ್ವರನನ್ನು ಒಪ್ಪುವ ಸಾಂಖ್ಯ ದರ್ಶನ)ವೆಂದು. ಕರೆಯಲಾಗಿದೆ. ಇದು ನಿರೀಶ್ವರ ಸಾಂಖ್ಯಕ್ಕೆ (ದೇವರನ್ನು ಒಪ್ಪದ ಸಾಂಖ್ಯಯೋಗ) ವ್ಯತಿರಿಕ್ತವಾಗಿದೆ. ಪತಂಜಲಿಯು 'ಸಮಾಧಿ' ವಿಷಯವನ್ನು (ಜಾಗೃತಾತೀತ ಅನುಭವಗಳನ್ನುಂಟುಮಾಡುವ ಪೂರ್ಣ ಏಕಾಗ್ರತೆ) ಸವಿವರವಾಗಿ ಚರ್ಚಿಸಿದನಂತರ (೧.೧೨ ರಿಂದ ೨೨) ದೇವರಲ್ಲಿ ಅನನ್ಯ ಭಕ್ತಿ ಮತ್ತು ಶರಣಾಗತಿಯಿಂದ ಸಮಾಧಿಯನ್ನು ಪರ್ಯಾಯವಾಗಿ ಪಡೆಯಬಹುದು. ಎಂದು ಮುಂದಿನ ಸೂತ್ರದಲ್ಲಿಯೇ ಹೇಳಿದ್ದಾನೆ. ದೈವಭಕ್ತಿಯ ಮೂಲಕ ಸಮಾಧಿಯನ್ನು ಕೂಡ ಪಡೆಯುವುದು ಸಾಧ್ಯವಾದರೆ. ಯೋಗಕ್ಕಿರುವ ಅಡಚಣೆಗಳನ್ನು ನಿವಾರಿಸುವಂತಹ ಅಲ್ಪಸಾಧನೆ ಅದರಿಂದಾಗದೆ? ಖಂಡಿತ ಸಾಧ್ಯ. ಸೂತ್ರ ೨೯ರಲ್ಲಿ ಧ್ಯಾನ ಮತ್ತು ದೈವಭಕ್ತಿ ಯೋಗಕ್ಕಿರುವ ಎಲ್ಲ ಅಡಚಣೆಗಳನ್ನು ತೆಗೆದುಹಾಕುತ್ತವೆ ಮತ್ತು ಆತ್ಮಜ್ಞಾನವನ್ನು ಕೊಡುತ್ತವೆ—ಎಂದು ಅವನು ಸ್ಪಷ್ಟವಾಗಿ ಹೇಳುತ್ತಾನೆ.

ಅಡಚಣೆಗಳು ಮತ್ತು ಅಡೆತಡೆಗಳು ಜೀವನದ ಎಲ್ಲ ರಂಗಗಳಲ್ಲಿಯೂ ಅನಿವಾರ್ಯ. ಇದು ಆಧ್ಯಾತ್ಮಜೀವನಕ್ಕೆ ಇನ್ನೂ ಹೆಚ್ಚಾಗಿ ಅನ್ವಯಿಸುತ್ತದೆ. ಸ್ವಾಮಿ ವಿವೇಕಾನಂದರು ಹೇಳುವ ಹಾಗೆ, "ಮಹಾತ್ಯಾಗದಿಂದ ಮಾತ್ರ ಮಹಾಕಾರ್ಯಗಳನ್ನು ಮಾಡಲು ಸಾಧ್ಯ." ಆದ್ದರಿಂದ ಅಡಚಣೆಗಳು ಹೆಚ್ಚಾದಷ್ಟೂ. ತೀವ್ರವಾದಷ್ಟೂ ಅವು ಯೋಗಸಾಧಕನ ಉತ್ಸಾಹವನ್ನು ಕುಂದಿಸುವುದಕ್ಕೆ ಬದಲಾಗಿ ಅವನನ್ನು ಇನ್ನೂ ಹೆಚ್ಚಿನ ಪ್ರಯತ್ನಕ್ಕೆ ಮತ್ತು ಪರಿಶ್ರಮಕ್ಕೆ ಪ್ರೇರೇಪಿಸುತ್ತವೆ.

ಸಾಧನೆಯಲ್ಲಿ ಅನುಭೂತಿಯ ಉದಯ. ಮಾನಸಸ್ತರದಲ್ಲಿಯೆ ಆರಂಭವಾಗುವುದು. ಆ ಅನುಭವ ಯಥಾರ್ಥವಾ ಶುದ್ಧವಾ ಆಗಿದೆಯೋ ಎಂಬುದು ಮುಖ್ಯ. ಅರಿಯುವ ಉತ್ಕಟ ಅಭಿಲಾಷೆ ಹಾಗೂ ಪ್ರಬಲ ಇಚ್ಛಾಶಕ್ತಿ ಮತ್ತು ಭಗವದಭಿಮುಖವಾದ ಭಾವಪ್ರವೇಗ (Godward emotional urge) ಇವೆರಡೂ ಪ್ರಪ್ರಥಮವಾಗಿ ಆವಶ್ಯಕವಾದ ಯೋಗಸಾಧನೋಪಾಯಗಳು. ಶಾಂತಿ, ಪರಿಶುದ್ಧತೆ ಮತ್ತು ಸ್ಥಿರತೆ (ನಿಮ್ಮ ಸ್ತರದಲ್ಲಿ ಚಾಂಚಲ್ಯದ ಪ್ರಶಮನ) ಇವು ಭಿತ್ತಿರೂಪವಾಗಿ ಇದ್ದೇ ಇರಬೇಕು. ಸ್ಥೂಲಾತೀತ ಲೋಕದ ಅಸ್ಪಷ್ಟ ದರ್ಶನವನ್ನಾಗಲಿ, ಅತಿಮಾನುಷದರ್ಶನವನ್ನಾಗಲಿ, ಸೂಕ್ಷ್ಮವಾಣಿಯನ್ನಾಗಲಿ, ವಿಶೇಷ ಶಕ್ತಿಯನ್ನಾಗಲಿ ಗಳಿಸುವುದಕ್ಕಿಂತ ಶಾಂತಿ, ಪರಿಶುದ್ಧತೆ ಮತ್ತು ಸ್ಥಿರತೆಗಳನ್ನು ಪಡೆಯುವುದು ಮುಖ್ಯ. ಪರಿಶುದ್ಧಿ ಮತ್ತು ಸ್ಥಿರತೆಗಳು ಯೋಗಸಾಧನೆಯ ಮೊದಲ ಆವಶ್ಯಕತೆಗಳು. ಇವುಗಳನ್ನು ಪಡೆಯದೆ ಸೂಕ್ಷ್ಮಲೋಕ ಸೂಕ್ಷ್ಮರೂಪ ಸೂಕ್ಷ್ಮವಾಣಿ ಮೊದಲಾದ ಅನುಭವೈಶ್ವರ್ಯಗಳನ್ನು ಒಬ್ಬ ವ್ಯಕ್ತಿ ಪಡೆಯಬಹುದು. ಆದರೆ ಅಶುದ್ಧ ವಿಕ್ಷುಬ್ಧ ಚೇತನದಲ್ಲಿ ಈ ಅನುಭವಗಳಾದರೆ ಅವೆಲ್ಲ ಅವ್ಯವಸ್ಥಿತವಾಗಿಯೂ ಕಲುಷಿತವಾಗಿಯೂ ಇರುತ್ತವೆ.

ಮೊದಮೊದಲು ಶಾಂತಿ ಮತ್ತು ಸ್ಥಿರತೆಗಳು ಅವಿಚ್ಛಿನ್ನವಾಗಿರುವುದಿಲ್ಲ. ಅವು ಬರುತ್ತವೆ, ಹೋಗುತ್ತವೆ. ಸ್ವಭಾವದಲ್ಲಿ ಅವು ಸ್ಥಾಯಿಯಾಗಿರಲು ಬಹುಕಾಲ ಹಿಡಿಸುತ್ತದೆ, ಆದ್ದರಿಂದ ತಾಳ್ಮೆಗೆಡದೆ ಅಧೀರರಾಗದೆ. ನಾವು ಕೈಗೊಂಡ ಮಾರ್ಗದಲ್ಲಿ ಸ್ಥಿರಭಾವದಿಂದ ಮುನ್ನಡೆಯುವುದು ಶ್ರೇಯಸ್ಕರ. ಶಾಂತಿ ಮತ್ತು ಸ್ಥಿರತೆಗಿಂತ ಹೆಚ್ಚಾದುದನ್ನು ಪಡೆಯಲು ಅಪೇಕ್ಷಿಸುವುದಾದರೆ ನಿಮ್ಮ ಅಂತಃಸತ್ತ್ವ ಮತ್ತು ಭಗವಚ್ಛಕ್ತಿಯ ಚೇತನ–ಇವುಗಳ ಪೂರ್ಣ ಉನ್ಮುಖವಾಗಬೇಕು. ಅದಕ್ಕಾಗಿ ಉದ್ವೇಗವಿಲ್ಲದ ಧೃತಿಪೂರ್ವಕ ತೀವ್ರ ಅಭೀಪ್ಸೆ ಇರಲಿ. ಆಗ ಶಾಂತಿ ಸ್ಥಿರತೆಗಳಿಗಿಂತ ಹೆಚ್ಚಿನದು ಲಭಿಸುತ್ತದೆ.

(ಉದ್ಧೃತ: ಯೋಗಸಾಧನೆಯ ಆಧಾರಗಳು. ಪು. ೧೦–೧೧ ಮೂಲ: ಶ್ರೀ ಅರವಿಂದರು ಅನು: ಉ. ಕಾ. ಸುಬ್ಬರಾಯಾಚಾರ್)

ಟಿ. ಆರ್. ನಾಗಪ್ಪ

ವಯಸ್ಕರ ಶಿಕ್ಷಣ ಉಪಾಧ್ಯಾಯರ ತರಬೇತಿ

ರಾಷ್ಟ್ರೀಯ ವಯಸ್ಕರ ಶಿಕ್ಷಣದ ಸ್ವರೂಪ

ಇಂದಿನ ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆ ಐದು ವರ್ಷದ ಅವಧಿಯ ಸಮಗ್ರ ಸಾಕ್ಷರತಾ ಯೋಜನೆ. ಇದರ ವ್ಯಾಪ್ತಿಗೆ ೧೫–೩೫ ವಯೋಮಿತಿಯ ೧೦ ಕೋಟಿ ಮಂದಿ ನಿರಕ್ಷರರು ಒಳಗಾಗಿದ್ದಾರೆ. ಯೋಜನೆಯ ಅಂದಾಜುವೆಚ್ಚ ೬೮೬ ಕೋಟಿ ರೂಪಾಯಿಗಳು. ಹೊಸದಾಗಿ ರಚಿತವಾದ ಯೋಜನಾ ಆಯೋಗವು ಯೋಜನೆಯ ಅಂದಾಜುವೆಚ್ಚವನ್ನು ೨೬೦ ಕೋಟಿರೂಪಾಯಿಗಳಿಗೆ ಇಳಿಸಿದೆ.

ಕೇಂದ್ರ ಸರಕಾರ ವಯಸ್ಕರ ಶಿಕ್ಷಣವನ್ನು ರಾಷ್ಟ್ರದ ಕನಿಷ್ಠ ಅವಶ್ಯಕತೆಗಳಲ್ಲಿ ಒಂದನ್ನಾಗಿ (ಮಿನಿಮಮ್ ನೀಡ್ಸ್ ಪ್ರೋಗ್ರಾಮ್) ಪರಿಗಣಿಸಿದೆ. ಇಂದಿನ ವಯಸ್ಕರ ಶಿಕ್ಷಣ ಕಾರ್ಯಕ್ರಮ ಹಿಂದಿನ ಕಾರ್ಯಕ್ರಮಗಳಿಗಿಂತ ಭಿನ್ನ. ಈ ಕಾರ್ಯಕ್ರಮದಲ್ಲಿ ಸಾಕ್ಷರತೆ, ಅರಿವು ಮತ್ತು ಕ್ರಿಯಾಶೀಲತೆ—ಇವು ಮೂರು ಒಂದಕ್ಕೊಂದು ಹೆಣೆದುಕೊಂಡಿವೆ.

ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆ ಒಂದು ಬೃಹತ್ ಚಳುವಳಿ. ಈ ಚಳುವಳಿಯನ್ನು ನಡೆಸಲು ಲಕ್ಷಾಂತರ ಉಪಾಧ್ಯಾಯರ ಸೇನೆಯ ಸೇವೆ ಅಗತ್ಯ. ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆಯನ್ನು ಕಾರ್ಯರೂಪಕ್ಕೆ ತರುವ ಸೂತ್ರಧಾರ ಉಪಾಧ್ಯಾಯ. ಅತ ಕಾರ್ಯಕರ್ತರ ಶ್ರೇಣಿಯಲ್ಲಿ ಕಡೆಯವನು. ಆತನನ್ನು ಕಡೆಗಣಿಸುವಂತಿಲ್ಲ. ಅವನ ಪಾತ್ರ ಹಿರಿದು. ವಯಸ್ಕರ ಶಿಕ್ಷಣ ಕೇಂದ್ರ ನಡೆಸುವವರೆಲ್ಲರೂ ಉಪಾಧ್ಯಾಯರೇ—ವಿದ್ಯಾರ್ಥಿಗಳು, ನಿರುದ್ಯೋಗಿಗಳು, ನಿವೃತ್ತ ಸೈನಿಕರು, ಪಿಂಚಣಿದಾರರು ಮತ್ತು ವಯಸ್ಕರ ಶಿಕ್ಷಣ ಕಾರ್ಯದಲ್ಲಿ ವಿಶ್ವಾಸವುಳ್ಳವರೆಲ್ಲರೂ. ಅವರಿಗೆ ಗ್ರಾಮೀಣರ ಏಳಿಗೆಯಲ್ಲಿ ನಂಬಿಕೆ ಇರತಕ್ಕದ್ದು. ದೀನ ದುರ್ಬಲ ವರ್ಗದವರ ಅಭಿವೃದ್ಧಿಯಲ್ಲಿ ಅವರಿಗೆ ಆಸಕ್ತಿ ಅನಿವಾರ್ಯ. ಅವರು ಕಲಿಯುವವರ ಸಮಾಜದಲ್ಲೊಬ್ಬನಾದರೆ ಇನ್ನೂ ಒಳ್ಳೆಯದು.

ವಯಸ್ಕರ ಶಿಕ್ಷಣ ಕೇಂದ್ರದ ಉಪಾಧ್ಯಾಯ ಮತ್ತು ಕಲಿಯುವವರಲ್ಲಿ ಅಷ್ಟಾಗಿ ವ್ಯತ್ಯಾಸ ಕಾಣದು. ಕಾರಣ, ಅವರು ಸಾಮಾನ್ಯವಾಗಿ ಹೆಚ್ಚು ಕಡಿಮೆ ಒಂದೇ ವಯಸ್ಸಿನವರು. ಅನೇಕ ಸಂದರ್ಭಗಳಲ್ಲಿ ವಿದ್ಯಾರ್ಥಿಗಳೇ ಉಪಾಧ್ಯಾಯರಿಗಿಂತಲೂ ಹಿರಿಯರು. ಅನುಭವದಲ್ಲೂ ಅಷ್ಟೇ. ಆದ್ದರಿಂದ ಉಪಾಧ್ಯಾಯರು ಮತ್ತು ಕಲಿಯುವವರು ಇಬ್ಬರೂ ಪರಸ್ಪರ ಕಲಿಯುವ ಅಂಶಗಳಿವೆ. ಇಬ್ಬರೂ ಕಲಿಕೆಯಲ್ಲಿ ಪಾಲುಗಾರರು ಎಂದು ಹೇಳಿದಲ್ಲಿ ಉತ್ಪ್ರೇಕ್ಷೆ ಆಗಲಾರದು. ಒಟ್ಟಿನಲ್ಲಿ ಉಪಾಧ್ಯಾಯ ಗ್ರಾಮೀಣರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯ ಪರಿವರ್ತನೆಯ ಕ್ರಾಂತಿಕಾರಕ ಸುಧಾರಕ.

ಕಳೆದ ಐದು ಪಂಚವಾರ್ಷಿಕ ಯೋಜನೆಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ಕೂಡಿ ೯೭,೫೦೦ ಕೋಟಿ ರೂಪಾಯಿಗಳನ್ನು ರಾಷ್ಟ್ರದ ಅಭಿವೃದ್ಧಿಯಲ್ಲಿ ವಿನಿಯೋಗಿಸಿವೆ. ಆದರೂ ಗ್ರಾಮೀಣ ಪ್ರದೇಶಗಳಲ್ಲಿ ಇನ್ನೂ ಶೇಕಡ ೪೭ ಮಂದಿ ಬಡತನದ ಅಂಚಿನಲ್ಲಿ ಉಳಿದಿದ್ದಾರೆ. ಎರಡು

ಹೊತ್ತು ಊಟಕ್ಕೆ ಕೂಳಿಲ್ಲ. ಮೈಮುಚ್ಚಿಕೊಳ್ಳಲು ಬಟ್ಟೆ ಇಲ್ಲ. ನೆಲವೇ ಹಾಸಿಗೆ. ಆಕಾಶವೇ ಹೊದ್ದಿಕೆ. ಹೀಗಿದೆ ಅವರ ಪರಿಸ್ಥಿತಿ. ಈ ವರ್ಗಕ್ಕೆ ಸೇರಿದವರು ಹೆಚ್ಚಾಗಿ ಹರಿಜನ. ಗಿರಿಜನರು ಮತ್ತು ಮಹಿಳೆಯರು. ಈ ವರ್ಗದವರನ್ನು ಜಾಗೃತಗೊಳಿಸುವುದು ವಯಸ್ಕರ ಶಿಕ್ಷಣ ಕೇಂದ್ರದ ಉಪಾಧ್ಯಾಯರ ಜವಾಬ್ದಾರಿ. ಅವರು ಜಾಗೃತರಾಗಿ ತಮ್ಮ ವೈಯಕ್ತಿಕ ಏಳಿಗೆಯನ್ನು ಸಾಧಿಸಬೇಕು. ತನ್ಮೂಲಕ ರಾಷ್ಟ್ರದ ಭವ್ಯ ಭವಿಷ್ಯತ್ತನ್ನು ರೂಪಿಸಬೇಕಾಗಿದೆ. ಈ ಕಾರಣದಿಂದ ವಯಸ್ಕರ ಶಿಕ್ಷಣ ರಾಷ್ಟ್ರದ ಕನಿಷ್ಠ ಆವಶ್ಯಕತಾ ಕಾರ್ಯಕ್ರಮಗಳಲ್ಲಿ ಒಂದಾಗಿದೆ.

ವಯಸ್ಕರ ಶಿಕ್ಷಣ ಕೇಂದ್ರದ ಉಪಾಧ್ಯಾಯರ ಜವಾಬ್ದಾರಿ

೧. ವಯಸ್ಕರ ಶಿಕ್ಷಣ ಕೇಂದ್ರಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಹಿತಕರವಾದ ವಾತಾವರಣವನ್ನು ಕಲ್ಪಿಸುವುದು.
೨. ಕಲಿಯುವವರು ಅವರ ಹಾಗೂ ರಾಷ್ಟ್ರದ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಪಾಲುಗೊಳ್ಳುವಂತೆ ಪ್ರೋತ್ಸಾಹಿಸುವುದು.
೩. ಗ್ರಾಮ ಪಂಚಾಯಿತಿಗಳು ಮತ್ತು ಗ್ರಾಮ ಮುಖಂಡರು ಮಹಾರಾಷ್ಟ್ರದ ಗ್ರಾಮ ಶಿಕ್ಷಣ ಮೋಹಿಂ ಮಾದರಿಯಲ್ಲಿ ವಯಸ್ಕರ ಶಿಕ್ಷಣ ಚಳುವಳಿಯಲ್ಲಿ ಪಾಲುಗೊಳ್ಳುವಂತೆ ಪ್ರೇರೇಪಿಸುವುದು.
೪. ವಯಸ್ಕರ ಶಿಕ್ಷಣ ಕೇಂದ್ರದ ಯಶಸ್ಸಿಗೆ ಸ್ಥಳೀಯ ಸಂಪನ್ಮೂಲಗಳನ್ನು ಸಂಗ್ರಹಿಸುವುದು.
೫. ಓದು ಬರಹ ಕಲಿಸುವುದು.
೬. ಅರಿವನ್ನು ಮೂಡಿಸುವುದು.
೭. ಕಲಿಯುವವರು ಕ್ರಿಯಾಶೀಲರಾಗಲು ಪ್ರೇರಕವಾಗುವಂತಹ ವಿಷಯಗಳನ್ನು ತಿಳಿಸುವುದು.
೮. ಕಲಿಯುವವರಿಗೂ ಮತ್ತು ಅಭಿವೃದ್ಧಿ ಇಲಾಖಾಧಿಕಾರಿಗಳಿಗೂ ಸಂಪರ್ಕ ಮತ್ತು ಸಂಬಂಧ ಕಲ್ಪಿಸುವುದು.

ಮೇಲೆ ತಿಳಿಸಿದ ಅಂಶಗಳಿಂದ ವಯಸ್ಕರ ಶಿಕ್ಷಣ ಕೇಂದ್ರದ ಉಪಾಧ್ಯಾಯರ ಜವಾಬ್ದಾರಿ ಗುರುತರವಾದದ್ದು ಎಂಬುದು ವ್ಯಕ್ತವಾಗದಿರದು. ಈ ತೆರನಾದ ಜವಾಬ್ದಾರಿಯನ್ನು ನಿರ್ವಹಿಸಲು ಉಪಾಧ್ಯಾಯರನ್ನು ಸಿದ್ಧಗೊಳಿಸಬೇಕು. ಅಂದರೆ ಕಲಿಯುವವರು ಅವರ ಏಳಿಗೆ ಹಾಗೂ ರಾಷ್ಟ್ರದ ಅಭಿವೃದ್ಧಿ ಕಾರ್ಯದಲ್ಲಿ ಪಾಲುಗೊಳ್ಳುವಂತೆ ಪ್ರೋತ್ಸಾಹಿಸುವ ಶಕ್ತಿ ಸಾಮರ್ಥ್ಯಗಳು ಉಪಾಧ್ಯಾಯರಲ್ಲಿ ಮೂಡುವಂತೆ ಮಾಡುವುದು ಅಗತ್ಯ. ಈ ದೃಷ್ಟಿಯಿಂದ ಆತನಿಗೆ ಗ್ರಾಮೀಣರ ಸಮಸ್ಯೆ ಮತ್ತು ಪರಿಹಾರ ಮಾರ್ಗಗಳ ಅರಿವು ಇರತಕ್ಕದ್ದು. ಆತ ಕಲಿಯುವವರ ನಾಡಿ ಹಿಡಿದು ಅವರ ಅಗತ್ಯ ಮತ್ತು ಅವಶ್ಯಕತೆಗಳನ್ನು ಅರಿತು ಅವುಗಳಿಗೆ ಪರಿಹಾರ ಸೂಚಿಸುವ ಶಕ್ತಿ ಸಾಮರ್ಥ್ಯವನ್ನು ಹೊಂದಿರಬೇಕು. ಇಲ್ಲವೆ ಕಲಿಯುವವರು ತಮ್ಮ ಸಮಸ್ಯೆಗಳ ಬಗ್ಗೆ ತಮ್ಮ ತಮ್ಮಲ್ಲೇ ಚರ್ಚಿಸಿ ಸೂಕ್ತ ಪರಿಹಾರ ಕಂಡುಕೊಳ್ಳುವಂತೆ ಮಾರ್ಗದರ್ಶನ ನೀಡುವ ದಕ್ಷತೆ ಆತನಲ್ಲಿರುವುದು ಅಗತ್ಯ. ಆದ್ದರಿಂದ ಉಪಾಧ್ಯಾಯ ಒಂದು ರೀತಿಯಲ್ಲಿ ಸರ್ವಜ್ಞನಾಗಬೇಕೆಂದು ಹೇಳಿದಲ್ಲಿ ಉತ್ಪ್ರೇಕ್ಷೆ ಆಗಲಾರದು. ಈ ಮಟ್ಟದ ಜ್ಞಾನವನ್ನು ಮತ್ತು ದಕ್ಷತೆಯನ್ನು ಗಳಿಸಲು ಅವನ ನೆರವಿಗೆ ಎಲ್ಲ ಅಭಿವೃದ್ಧಿ ಇಲಾಖೆಗಳು ಮತ್ತು ವಯಸ್ಕರ ಶಿಕ್ಷಣ ಇಲಾಖೆ ನಿಲ್ಲಬೇಕಲ್ಲವೆ? ಅವು ಅವನಿಗೆ ಬೇಕಾದ ಎಲ್ಲ ವಿಷಯಗಳನ್ನು ಮತ್ತು ಮಾಹಿತಿಯನ್ನು ಒದಗಿಸಬೇಕು. ಅದರಿಂದ ಉಪಾಧ್ಯಾಯರಿಗೆ ನೀಡುವ ತರಬೇತು ಪರಿಣಾಮಕಾರಿಯಾಗಿಯೂ ಮತ್ತು ವಾಸ್ತವಿಕವಾಗಿಯೂ ಸಹ ಇರಬೇಕಾದದ್ದು ಅನಿವಾರ್ಯ. ಮೇಲಾಗಿ ಅಂತಹ ತರಬೇತು ಕೇವಲ ನಾಲ್ಕು ಗೋಡೆಗಳಿಗೆ ಮಾತ್ರ ಸೀಮಿತವಾಗದೆ ಅದರ ವ್ಯಾಪ್ತಿ ವಿಶಾಲವಾಗಿರಬೇಕು.

ಪಠ್ಯವಸ್ತು ಉಪಾಧ್ಯಾಯರನ್ನು ಮತ್ತು ಕಲಿಯುವವರನ್ನು ಬೆಸೆಯುವ ಸಾಧನ. ಉಪಾಧ್ಯಾಯನೇ ಕಲಿಯುವವರಿಗೆ ಬೇಕಾದ ಪಠ್ಯವಸ್ತುವನ್ನು ರಚಿಸುವುದು ಒಳ್ಳೆಯದು ಎಂಬುದು

ಪ್ರಚಲಿತ ಅಭಿಪ್ರಾಯ. ಈ ಅಭಿಪ್ರಾಯ ಸಮಂಜಸವಾದದ್ದು. ಕಾರಣ, ಅವನು ಕಲಿಯುವವರ ಆಶೋತ್ತರಗಳನ್ನು ಬಲ್ಲವನು. ಅವರ ಸಮಸ್ಯೆಗಳಿಗೆ ಪರಿಹಾರ ಪಡೆಯಲು ಸಹಾಯಮಾಡಬಲ್ಲನು. ಆದರೆ ರಾಷ್ಟ್ರೀಯ ವಯಸ್ಕರ ಶಿಕ್ಷಣ ಚಳುವಳಿಯಲ್ಲಿ ಕನಿಷ್ಠ ಏಳನೆಯ ತರಗತಿ ತೇರ್ಗಡೆಯಾದವನೂ ಸಹ ವಯಸ್ಕರ ಶಿಕ್ಷಣ ಕೇಂದ್ರದ ಉಪಾಧ್ಯಾಯ. ಆತ ಪಠ್ಯವಸ್ತುವನ್ನು ರಚಿಸಬಲ್ಲ ಶಕ್ತಿ ಸಾಮರ್ಥ್ಯಗಳನ್ನು ನಿರ್ವಹಿಸಬಲ್ಲನೆ ಎಂಬುದು ಕೂಲಂಕಷವಾಗಿ ಪರಿಶೀಲಿಸಬೇಕಾದ ವಿಚಾರ ಜೊತೆಗೆ ಈ ದಿಸೆಯಲ್ಲಿ ಸಾಕಷ್ಟು ಪ್ರಯೋಗಗಳನ್ನು ನಡೆಸುವುದರಿಂದ ಲಾಭ ಇದೆ.

ತರಬೇತಿಯ ಅವಧಿ ಮತ್ತು ವಸ್ತು

ಕೇಂದ್ರ ವಯಸ್ಕರ ಶಿಕ್ಷಣ ನಿರ್ದೇಶನಾಲಯವು ಉಪಾಧ್ಯಾಯರ ತರಬೇತಿ ಅವಧಿಯನ್ನು ಮತ್ತು ಆ ಅವಧಿಯಲ್ಲಿ ವಿಚಾರಮಾಡಬೇಕಾದ ವಿಷಯಗಳನ್ನು ನಿರ್ದಿಷ್ಟಪಡಿಸಿದೆ. ಅದನ್ನು ಸ್ಥಳೀಯ ಸನ್ನಿವೇಶಗಳಿಗೆ ತಕ್ಕಂತೆ ಬದಲಾಯಿಸಿಕೊಳ್ಳಬಹುದು. ಕರ್ನಾಟಕದಲ್ಲಿ ರಾಜ್ಯ ಸಂಪನ್ಮೂಲ ಕೇಂದ್ರ ಮತ್ತು ವಯಸ್ಕರ ಶಿಕ್ಷಣ ನಿರ್ದೇಶನಾಲಯ ಕೂಡಿ ಒಂದು ವರ್ಷದ ತರಬೇತಿಯ ಅನುಭವದ ಹಿನ್ನೆಲೆಯಲ್ಲಿ ತರಬೇತಿಯ ವಿಷಯಗಳನ್ನು ಸ್ವಲ್ಪಮಟ್ಟಿಗೆ ಮಾರ್ಪಡಿಸಿದೆ.

ಕೇಂದ್ರ ನಿರ್ದೇಶನಾಲಯವು ೨೧ ದಿನಗಳ ಉಪಾಧ್ಯಾಯರ ತರಬೇತಿಯನ್ನು ಎರಡು ಹಂತಗಳನ್ನಾಗಿ ವಿಂಗಡಿಸಿದೆ. ಮೊದಲನೆಯ ಹಂತದ ಅವಧಿ ೧೧ ದಿನಗಳು. ಎರಡನೆಯ ಹಂತದ ಅವಧಿ ೧೦ ದಿನಗಳು. ಮೊದಲನೆಯ ಹಂತದಲ್ಲಿ ಯೋಜನೆಯ ಉದ್ದೇಶ, ಯೋಜನೆಯನ್ನು ಕಾರ್ಯಗತಗೊಳಿಸುವ ವಿಧಾನ, ವಯಸ್ಕರ ಮನಶ್ಶಾಸ್ತ್ರ, ಬೋಧನಾಕ್ರಮ ಮುಂತಾದ ವಿಷಯಗಳಿಗೆ ಹೆಚ್ಚಿನ ಗಮನ ನೀಡಿದೆ. ಜೊತೆಗೆ ವಿವಿಧ ಇಲಾಖೆಗಳ ಪಾತ್ರವೇನೆಂಬುದನ್ನು ಪರಿಚಯಮಾಡಿಕೊಡಲು ಅವಕಾಶವಿದೆ. ಜೀತವಿಮೋಚನೆ, ಕಾರ್ಮಿಕರ ಕನಿಷ್ಠ ವೇತನ, ಸಾಲತೀರುವಳಿ, ಇಪ್ಪತ್ತು ಅಂಶಗಳ ಕಾರ್ಯಕ್ರಮ ಮುಂತಾದವು ತರಬೇತಿಯಲ್ಲಿ ವಿಚಾರಮಾಡಬೇಕಾದ ಅಂಶಗಳು. ಉಪಾಧ್ಯಾಯರು ತಮ್ಮ ಕಾರ್ಯಕ್ಷೇತ್ರದಲ್ಲಿ ಎದುರಿಸಿದ ಸಮಸ್ಯೆಗಳು ಹಾಗೂ ಪರಿಹರಿಸಿಕೊಂಡ ವಿಧಾನಗಳು, ಮೌಲ್ಯಮಾಪನೆ ಮುಂತಾದವು ಎರಡನೆಯ ಹಂತದ ತರಬೇತಿಯ ವಸ್ತು; ವಯಸ್ಕರ ಶಿಕ್ಷಣ ಕೇಂದ್ರದ ವ್ಯವಸ್ಥೆಯಲ್ಲಿ ಕಂಡು ಬಂದ ಕೊರತೆಗಳು ಮತ್ತು ಅನುಭವಗಳು, ಕಲಿಯುವವರ ಆಸಕ್ತಿ, ವಿದ್ಯಾರ್ಥಿಗಳು ವಯಸ್ಕರ ಶಿಕ್ಷಣ ಕೇಂದ್ರಗಳನ್ನು ಮಧ್ಯದಲ್ಲಿ ಬಿಡಲು ಕಾರಣಗಳು, ವಿವಿಧ ಇಲಾಖೆಗಳೊಡನೆ ಹೊಂದಾಣಿಕೆ ಮತ್ತು ಸಹಕಾರ ಮುಂತಾದ ವಿಷಯಗಳ ಬಗ್ಗೆ ಚರ್ಚೆ ಮತ್ತು ವಿಚಾರವಿನಿಮಯಮಾಡುವುದು ಎರಡನೆಯ ಹಂತದ ತರಬೇತಿಯ ಗುರಿ.

ಕೇಂದ್ರ ನಿರ್ದೇಶನಾಲಯವು ನಿಗದಿಪಡಿಸಿರುವ ಎರಡು ಹಂತದ ಉಪಾಧ್ಯಾಯರ ತರಬೇತನ್ನು ಮೂರು ಹಂತದ ಕಾರ್ಯಕ್ರಮವನ್ನಾಗಿ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಂಪನ್ಮೂಲ ಕೇಂದ್ರ ಮತ್ತು ರಾಜ್ಯ ವಯಸ್ಕರ ಶಿಕ್ಷಣ ನಿರ್ದೇಶನಾಲಯ ಕೂಡಿ ಬದಲಾಯಿಸಿವೆ.

೧. ವಯಸ್ಕರ ಶಿಕ್ಷಣ ಕೇಂದ್ರಗಳನ್ನು ಆರಂಭಿಸುವ ಮುನ್ನ ೧೦ ದಿನಗಳ ತರಬೇತಿ.

೨. ಕೇಂದ್ರಪ್ರಾರಂಭವಾದ ೩–೪ ತಿಂಗಳನಂತರ ನಡೆಸಬೇಕಾದ ಐದು ದಿನಗಳ ಎರಡನೆಯ ಹಂತದ ತರಬೇತಿ.

೩. ಉಳಿದ ೫ ದಿನಗಳು. ಸೂಕ್ತ ಕಂಡುಬಂದಾಗ ಒಂದು ಅಥವಾ ಎರಡು ದಿನದ ಸಭೆಗಳನ್ನು ನಡೆಸಿ ವಯಸ್ಕರ ಶಿಕ್ಷಣ ಕೇಂದ್ರಗಳ ವಾಸ್ತವಿಕ ಸಮಸ್ಯೆಗಳ ಬಗ್ಗೆ ಚರ್ಚೆ, ವಿಚಾರ ವಿನಿಮಯ ಮತ್ತು ಹೊಸ ಶೈಕ್ಷಣಿಕ ವಿಷಯಗಳನ್ನು ತಿಳಿಯಲು ಏರ್ಪಾಡುಮಾಡಬಹುದು.

ನ್ಯೂನತೆಗಳು ಮತ್ತು ಪರಿಹಾರಗಳು

ವಯಸ್ಕರ ಶಿಕ್ಷಣ ಕೇಂದ್ರದ ಉಪಾಧ್ಯಾಯರ ತರಬೇತಿ ನಿರೀಕ್ಷಿಸಿದಷ್ಟು ತೃಪ್ತಿಕರವಾಗಿಲ್ಲ ಎಂಬುದು ಇಡೀ ಭಾರತದಾದ್ಯಂತ ಪ್ರಚಲಿತವಾಗಿರುವ ಅಭಿಪ್ರಾಯ. ಗುಜರಾತ್ ರಾಜ್ಯದಲ್ಲಿ ಮೊದಲನೆಯ ವರ್ಷದಲ್ಲಿ ನಡೆದ ವಯಸ್ಕರ ಶಿಕ್ಷಣ ಕಾರ್ಯದ ಮೌಲ್ಯಮಾಪನ ಈ ಅಂಶವನ್ನು ಸ್ಪಷ್ಟಪಡಿಸಿದೆ.

ಯೋಜನೆಯ ಪ್ರಾರಂಭದಲ್ಲಿ ನಡೆದ ವಯಸ್ಕರ ಶಿಕ್ಷಣ ಕೇಂದ್ರದ ಉಪಾಧ್ಯಾಯರ ತರಬೇತಿ ಅಷ್ಟಾಗಿ ತೃಪ್ತಿಕರವಾಗಿರಲಿಲ್ಲ. ಕಾರಣಗಳು ಹಲವಾರು. ಪಠ್ಯವಸ್ತು ಪೂರ್ಣವಾಗಿ ತಯಾರಾಗಿರಲಿಲ್ಲ. ಉಪಾಧ್ಯಾಯರ ಆಯ್ಕೆಯಲ್ಲಿ ಕೊರತೆ ಇತ್ತು. ಸಮೀಕ್ಷೆಯಿಲ್ಲದೆ ಕೇಂದ್ರಗಳು ಆರಂಭವಾದವು. ಸ್ಟೇಟ್ [illegible] ಆದೇಶಗಳು ಬಂದಂತೆ ಅನೇಕ ಕಡೆಗಳಲ್ಲಿ ಆತುರಾತುರದಲ್ಲಿ ವಯಸ್ಕರ ಶಿಕ್ಷಣ ಕೇಂದ್ರಗಳು ಒಂದೇ ದಿನ ಪ್ರಾರಂಭವಾದಂತೆ ವರದಿಗಳು ಬಂದಿದ್ದರೆ ಆಶ್ಚರ್ಯವೇನಿಲ್ಲ. ಈ ರೀತಿ ಕೇಂದ್ರಗಳು ಆರಂಭವಾದ ೪-೫ ತಿಂಗಳ ನಂತರ ಉಪಾಧ್ಯಾಯರ ತರಬೇತಿ ನಡೆಯಿತು. ಅನಂತರ ಮೇಲ್ವಿಚಾರಕರ ನೇಮಕವಾಗಿ ಒಂದನೆಯ ಹಂತದ ತರಬೇತಿ ಮುಗಿಯಿತು. ಇಂತಹ ನ್ಯೂನತೆಗಳು ಪ್ರಾರಂಭದಲ್ಲಿ ಸರ್ವೇಸಾಮಾನ್ಯ. ಆದರೆ ಹೀಗಾಗದಿರಲು ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆಯ ಪ್ರಕಾರ ಪೂರ್ವಸಿದ್ಧತಾ ಕಾಲವನ್ನು ನಿಗದಿಪಡಿಸಲಾಗಿತ್ತು. ಆದರೂ ಮೇಲೆ ಹೇಳಿದ ಕೊರತೆಗಳಿಂದ ಕಾರ್ಯಕ್ರಮ ಕುಂಟಿತು. ಈ ಎಲ್ಲ ನ್ಯೂನತೆಗಳಿದ್ದರೂ ಸಹ ವಯಸ್ಕರ ಶಿಕ್ಷಣ ಕೇಂದ್ರಗಳು ಕಾಲಕ್ಕೆ ಸರಿಯಾಗಿ ಮುಗಿದಿವೆ!! ಆದರೆ ಈ ಸಂದರ್ಭದಲ್ಲಿ ಒಂದು ಅಂಶದ ಕಡೆಗೆ ಗಮನಹರಿಸುವುದು ಸೂಕ್ತ. ಮೇಲೆ ಹೇಳಿದ ನ್ಯೂನತೆಗಳ ಮಧ್ಯೆ ಮೊದಲನೆಯ ಸಾಲಿನಲ್ಲಿ ನಡೆದ ಹತ್ತು ದಿನಗಳ ಉಪಾಧ್ಯಾಯರ ತರಬೇತಿ ಸಾಕೆ? ಮುಂದಿನ ಸಾಲಿನ ಕಾರ್ಯಕ್ರಮದಲ್ಲಿ ನಿಗದಿ ಆದಂತೆ ಉಪಾಧ್ಯಾಯರ ತರಬೇತಿ ಇಲ್ಲದೆ ಕೇಂದ್ರಗಳನ್ನು ಆರಂಭಿಸುವುದು ಸಾಧ್ಯವೆ? ಪರಿಣಾಮವಾಗಿ ಬಂದಿರುವ ಹಿಂದಿನ ಸಾಲಿನ ವಯಸ್ಕರ ಶಿಕ್ಷಣ ಕೇಂದ್ರಗಳಲ್ಲಿ ಕಂಡುಬಂದ ದೋಷ ದೋಷಗಳೇ ಮುಂದುವರಿಯಲು ಅವಕಾಶನೀಡಿದಂತೆ ಆಗಲಿಲ್ಲವೆ? ಈ ದಿಸೆಯಲ್ಲಿ ಕೇಂದ್ರ ನಿರ್ದೇಶನಾಲಯವು ತೀವ್ರ ಗಮನಹರಿಸಿ ತರಬೇತಿ ತೃಪ್ತಿಕರವಾಗಿ ನಡೆಯಲು ವ್ಯವಸ್ಥೆಮಾಡುವುದು ಸೂಕ್ತ.

೨. ಅನೇಕ ಸಂದರ್ಭಗಳಲ್ಲಿ ಉಪಾಧ್ಯಾಯರ ತರಬೇತಿ ಆಯಾ ಕ್ಷೇತ್ರಗಳಲ್ಲಿ ದೊರೆಯುವ ಸಂಪನ್ಮೂಲ ಮತ್ತು ಅನುಭವಶಾಲಿಗಳನ್ನು ಅವಲಂಬಿಸಿದೆ. ಹೀಗಾಗಿ ತರಬೇತಿ ಅನೇಕ ಕಡೆಗಳಲ್ಲಿ ಕೇವಲ ಔಪಚಾರಿಕವಾಗಿದ್ದಲ್ಲಿ ಆಶ್ಚರ್ಯಪಡಬೇಕಾಗಿಲ್ಲ.

೩. ತರಬೇತಿ ಪರಿಣಾಮಕಾರಿಯಾಗಿರಲು ಶಿಬಿರಾರ್ಥಿಗಳ ಸಂಖ್ಯೆ ೩೦ ಕ್ಕಿಂತ ಹೆಚ್ಚಾಗಿರುವುದು ಸಲ್ಲದು. ಆದರೆ ಕೆಲವು ಕಡೆಗಳಲ್ಲಿ ೨೦೦-೩೦೦ ಮಂದಿ ಶಿಬಿರಾರ್ಥಿಗಳಿರುವರು. ಹೊರನೋಟಕ್ಕೆ ಕಾಣುವಂತೆ ಶಿಬಿರಾರ್ಥಿಗಳನ್ನು ೩೦ ರಿಂದ ಕೂಡಿದ ಗುಂಪುಗಳನ್ನಾಗಿ ವಿಂಗಡಿಸಿದರೂ ಸಹ ವಾಸ್ತವವಾಗಿ ಇಡೀ ೨೦೦-೩೦೦ ಮಂದಿಗೆ ಒಟ್ಟಾಗಿ ತರಬೇತಿ ನಡೆಯುತ್ತಿರುವುದು ಸತ್ಯ ಸಂಗತಿ. ಅಂತಹ ಬೃಹತ್ ಗುಂಪಿಗೆ ಧ್ವನಿವರ್ಧಕಗಳ ಮೂಲಕ ಉಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ೩೦ ರಿಂದ ೪೫ ರವರೆಗೆ ಕೂಡಿದ ಗುಂಪುಗಳಿಗೆ ಪ್ರತ್ಯೇಕ ತರಬೇತಿ ನಡೆಸುವ ಸಂದರ್ಭಗಳೂ ಇಲ್ಲದಿಲ್ಲ. ಆದರೆ ಅಂತಹ ಸಂದರ್ಭಗಳು ಕಡಮೆ.

೪. ತರಬೇತಿಯಲ್ಲಿ ಉಪಾಧ್ಯಾಯರು ಸಕ್ರಿಯವಾಗಿ ಪಾಲುಗೊಳ್ಳಬೇಕೆಂಬ ನಿಯಮವಿದೆ. ಆದರೆ ಅನೇಕ ಕಡೆಗಳಲ್ಲಿ ಹೀಗೆ ನಡೆಯುತ್ತಿಲ್ಲ. ಅಲ್ಲಿ ಎತ್ತುವ ಪ್ರಶ್ನೆಗಳೆಲ್ಲಾ ಸಾಮಾನ್ಯವಾಗಿ ಸಂಭಾವನೆ ಬಟವಾಡೆ, ಪಾಠೋಪಕರಣಗಳ ವಿತರಣೆ ಮುಂತಾದ ಆಡಳಿತ ವಿಚಾರಗಳು ಮಾತ್ರ. ಆದ್ದರಿಂದ ತರಬೇತಿ ನಡೆಸುವವರು ಅಥವಾ ಉಪನ್ಯಾಸಕರು ಬಹಳ ಚಾಕಚಕ್ಯತೆಯಿಂದ ಕೂಡಿರಬೇಕು. ಅವರು ಸಾಕ್ರಟೀಸ್ ವಿಧಾನವನ್ನು ಅನುಸರಿಸಿ ಉಪಾಧ್ಯಾಯರಲ್ಲಿ ಮನೆಮಾಡಿಕೊಂಡಿರುವ ಸಂದೇಹಗಳನ್ನು ಮತ್ತು ಸಮಸ್ಯೆಗಳನ್ನು ಪರಿಹರಿಸಲು ಪ್ರಯತ್ನಿಸಬೇಕು.

೫. ತರಬೇತು ಪರಿಣಾಮಕಾರಿಯಾಗಿರಲು ಸ್ವಾಧ್ಯಯನ. ಚರ್ಚೆ. ವಿಚಾರವಿನಿಮಯ. ತರಬೇತಿ

ಕಾರ್ಯಕ್ರಮದ ಅವಿಭಾಜ್ಯ ಅಂಗವಾಗಿರತಕ್ಕದ್ದು. ಸ್ವಾಧ್ಯಯನಮಾಡಲು ಸಾಕಷ್ಟು ಸಾಹಿತ್ಯವನ್ನು ತರಬೇತಿಯ ಅವಧಿಯಲ್ಲಿ ಒದಗಿಸಬೇಕು. ಅಂತಹ ಸಾಹಿತ್ಯಾವಲೋಕನ ಮತ್ತು ಅಧ್ಯಯನ ಶಿಬಿರದ ಒಂದು ಕಾರ್ಯಕ್ರಮವಾಗಬೇಕು. ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ನಿರ್ದೇಶನಾಲಯವು ಸೂಕ್ತ ಸಾಹಿತ್ಯವನ್ನು ಕೊಂಡು ಉಪಾಧ್ಯಾಯರಿಗೆ ವಿತರಣೆಮಾಡಿದೆ. ಈ ವ್ಯವಸ್ಥೆಯಿಂದ ಉಪಾಧ್ಯಾಯರ ಜ್ಞಾನಭಂಡಾರ ವಿಶಾಲವಾಗುವುದು. ಅವರ ಶಕ್ತಿ ಸಾಮರ್ಥ್ಯಗಳು ಹೆಚ್ಚುವುವು. ಪರಿಣಾಮವಾಗಿ ವಯಸ್ಕರ ಶಿಕ್ಷಣ ಕೇಂದ್ರಗಳು ಹೆಚ್ಚಿನ ದಕ್ಷತೆಯಿಂದ ನಡೆಯಲು ಅನುಕೂಲವಾಗುವುವು.

೬. ರಾಷ್ಟ್ರೀಯ ವಯಸ್ಕರ ಶಿಕ್ಷಣ ಯೋಜನೆಯ ಅಂಗವಾಗಿ ರಚಿಸಿದ ಪಠ್ಯಪುಸ್ತಕಗಳು ಕಲಿಯುವವರ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಯನ್ನು ಸುಧಾರಿಸಲು ನೆರವಾಗುವ ಸಾಧನಗಳು . ಅವುಗಳ ಮೂಲಕ ಅರಿವು ಮತ್ತು ಕ್ರಿಯಾಶೀಲತೆ ಕಲಿಯುವವರಲ್ಲಿ ಉಂಟಾಗಬೇಕು. ಅದ್ದರಿಂದ ಪಠ್ಯವಸ್ತುವಿನ ಶಾಸ್ತ್ರೀಯ ಬೋಧನೆಯ ಕಡೆಗೆ ಹೆಚ್ಚಿನ ಗಮನ ಹರಿಸುವುದು ಅಗತ್ಯ. ಜೊತೆಗೆ ಉಪಾಧ್ಯಾಯರು ಬೀಜ ಪದಗಳಲ್ಲಿರುವ ವಿಷಯಗಳನ್ನು ಚರ್ಚಿಸಲು ಚರ್ಚಾಂಶಗಳನ್ನು ಒದಗಿಸತಕ್ಕದ್ದು.

ಅನೇಕ ವಯಸ್ಕರ ಶಿಕ್ಷಣ ಕೇಂದ್ರಗಳಲ್ಲಿ ಹಿಂದಿನ ವರ್ಣಮಾಲಾಪದ್ಧತಿಯನ್ನೇ ಉಪಾಧ್ಯಾಯರು ಅನುಸರಿಸುತ್ತಿರುವುದಾಗಿ ತಿಳಿದು ಬಂದಿದೆ. ಈ ನ್ಯೂನತೆಯನ್ನು ಸರಿಪಡಿಸಲು ಬೋಧನಾಕ್ರಮ ಹೆಚ್ಚು ಪರಿಣಾಮಕಾರಿಯಾಗಿರಬೇಕು. ಪೂರಕವಾಗಿ ಉಪಾಧ್ಯಾಯರಿಂದ ಹೆಚ್ಚು ಅಭ್ಯಾಸಪಾಠಗಳನ್ನು ಮಾಡಿಸುವುದು ಅನಿವಾರ್ಯ.

ವಯಸ್ಕರ ಶಿಕ್ಷಣ ಕೇಂದ್ರದ ಉಪಾಧ್ಯಾಯರ ಶಕ್ತಿ ಮತ್ತು ಸಾಮರ್ಥ್ಯಗಳನ್ನು ಹೆಚ್ಚಿಸಲು ಕೆಳಗೆ ಕಂಡ ಕಾರ್ಯಕ್ರಮಗಳನ್ನು ಕೈಗೊಳ್ಳಬಹುದು.

೧. ಯಶಸ್ವಿಯಾಗಿ ನಡೆಯುವ ವಯಸ್ಕರ ಶಿಕ್ಷಣ ಕೇಂದ್ರಗಳ ಬಗ್ಗೆ ಪ್ರಚಾರ ಹಾಗೂ ಅಂತಹ ಪ್ರಚಾರ ಸಾಹಿತ್ಯವನ್ನು ಉಪಾಧ್ಯಾಯರಿಗೆ ಒದಗಿಸುವುದು.
೨. ವಯಸ್ಕರ ಶಿಕ್ಷಣ ಕೇಂದ್ರಗಳಲ್ಲಿ ಕಾಣಬರುವ ಶೈಕ್ಷಣಿಕ ಸುಧಾರಣೆಗಳನ್ನು ಮತ್ತು ಹೊಸ ಹೊಸ ತಂತ್ರಗಳ ಮಾಹಿತಿ ಮಾಡಿಕೊಡುವುದು.
೩. ವಾರ್ತಾಪತ್ರ ಮತ್ತು ಬುಲಿಟಿನ್‌ಗಳನ್ನು ಪ್ರಕಟಿಸಿ ಹಂಚುವುದು.
೪. ಮಾದರಿ ವಯಸ್ಕರ ಶಿಕ್ಷಣ ಕೇಂದ್ರಗಳಿಗೆ ಭೇಟಿ ಏರ್ಪಡಿಸುವುದು.
೫. ಪುನರ್ಶಿಕ್ಷಣ ಶಿಬಿರಗಳನ್ನು ಕಾಲಕ್ಕೆ ಸರಿಯಾಗಿ ವ್ಯವಸ್ಥೆಮಾಡುವುದು.
೬. ಸ್ಥಳೀಯವಾಗಿ ದೊರೆಯುವ ಅನುಭವಶಾಲಿಗಳ ಸೇವೆಯನ್ನು ಪಡೆಯುವುದು. ವಯಸ್ಕರ ಶಿಕ್ಷಣ ಕೇಂದ್ರಗಳಿಗೆ ಅವರ ಭೇಟಿಯನ್ನು ಏರ್ಪಡಿಸಿ ಅವರಿಂದ ಉಪನ್ಯಾಸ, ಚರ್ಚೆ ಮತ್ತು ವಿಚಾರವಿನಿಮಯ ಮುಂತಾದವುಗಳನ್ನು ಏರ್ಪಡಿಸುವುದು.
೭. ವಿವಿಧ ಅಭಿವೃದ್ಧಿ ಇಲಾಖೆಗಳ ಕಾರ್ಯಕ್ರಮಗಳನ್ನೊಳಗೊಂಡ ಪ್ರಕಟಣೆಗಳ ವಿತರಣೆ.

ಗುಜರಾತ್ ರಾಜ್ಯದಲ್ಲಿ ನಡೆದ ವಯಸ್ಕರ ಶಿಕ್ಷಣ ಕೇಂದ್ರಗಳ ಮೌಲ್ಯಮಾಪನೆ ನಡೆದಿದೆ. ಅರಿವು ಮತ್ತು ಕ್ರಿಯಾಶೀಲತೆಯ ಅಂಶಗಳ ಕಡೆಗೆ ಸಾಕಷ್ಟು ಗಮನಹರಿಸಿಲ್ಲ ಎಂಬುದಾಗಿ ಕಂಡುಬಂದಿದೆ. ಹೆಚ್ಚು ಕಡಮೆ ಇದೇ ಪರಿಸ್ಥಿತಿ ಇತರ ರಾಜ್ಯಗಳಲ್ಲಿದ್ದರೂ ಸಹ ಆಶ್ಚರ್ಯವೇನಿಲ್ಲ. ಈಗಾಗಲೇ ತಿಳಿಸಿರುವಂತೆ ಉಪಾಧ್ಯಾಯರ ತರಬೇತಿ ಮತ್ತು ಮೇಲ್ವಿಚಾರಣೆ ನಿರೀಕ್ಷಿಸಿದಷ್ಟು ತೃಪ್ತಿಕರವಾಗಿಲ್ಲ ಎಂಬುದಾಗಿ ಕಂಡುಬಂದಿದೆ. ಈ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ವಯಸ್ಕರ ಶಿಕ್ಷಣ ಕೇಂದ್ರ ಉಪಾಧ್ಯಾಯರ ತರಬೇತಿಯನ್ನು ತೀವ್ರತರನಾಗಿ ಸುಧಾರಿಸಬೇಕಾಗಿದೆ.

ವಯಸ್ಕರ ಶಿಕ್ಷಣ ಮತ್ತು ಸಾಕ್ಷರತೆ ಈಗ ಕೇವಲ ದೇಶಗಳ ಸಮಸ್ಯೆಯಾಗುಳಿದಿಲ್ಲ. ಅದು ಅಂತರರಾಷ್ಟ್ರೀಯ ಸಮಸ್ಯೆಯಾಗಿದೆ. ಈ ಬಗ್ಗೆ ಅಂತರರಾಷ್ಟ್ರೀಯ ಸಮ್ಮೇಳನಗಳು ನಡೆದಿವೆ. ಅಂತರರಾಷ್ಟ್ರೀಯ ಸಾಕ್ಷರತಾ ಸಂಘವಿದೆ. ಜೊತೆಗೆ 'ಯುನೆಸ್ಕೊ'. ಪ್ರಪಂಚ ಆಹಾರ ಸಂಸ್ಥೆ, ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಹಾಗೂ ವಿಶ್ವಸಂಸ್ಥೆಯ ಅಭಿವೃದ್ಧಿ ನಿಧಿಯಿಂದ ವಿವಿಧ ದೇಶಗಳ ವಯಸ್ಕರ ಶಿಕ್ಷಣ ಕಾರ್ಯಕ್ರಮಗಳಿಗೆ–ವಿಶೇಷವಾಗಿ ಆಫ್ರಿಕಾ. ಏಷ್ಯಾದೇಶಗಳಿಗೆ ನೆರವು ನೀಡಲಾಗುತ್ತಿದೆ. ಹಾಗೆ ನೆರವು ಪಡೆಯುತ್ತಿರುವ ದೇಶಗಳಲ್ಲಿ. ಭಾರತವೂ ಒಂದು. ೧೯೭೮ರ ಸೆಪ್ಟೆಂಬರ್‌ನಲ್ಲಿ ಸಾಕ್ಷರತೆಗೆ ಸಂಬಂಧಿಸಿದಂತೆ ಏಷ್ಯನ್ ಸಮ್ಮೇಳನ ನವದೆಹಲಿಯಲ್ಲಿ ನಡೆಯಿತು. ಆಗ ಮುಂದಿನ ದಶಕವನ್ನು ಸಾಕ್ಷರತಾ ದಶಕವನ್ನಾಗಿ ಆಚರಿಸಲು 'ಯುನೆಸ್ಕೊ' ತನ್ನ ಸದಸ್ಯ ರಾಷ್ಟ್ರಗಳಿಗೆ ಕರೆಕೊಟ್ಟಿದೆ.

(ಡಿ. ಎಸ್. ಜಯಪ್ಪಗೌಡ: ಕರ್ನಾಟಕದ ಗ್ರಾಮೀಣ ಸೇವಾಸಂಸ್ಥೆಗಳು, ಪು. ೭೧)

ಡಿ. ಎಸ್. ಜಯಪ್ಪಗೌಡ

ಪ್ರವಾಸಿ ಕಂಡ ಇಂಡಿಯಾ—ಒಂದು ಆಕರಕೃತಿ

ಕನ್ನಡದಲ್ಲಿ ಇತರ ಅನೇಕ ಭಾರತೀಯ ಭಾಷೆಗಳಲ್ಲಿಯಂತೆಯೇ ಆಕರ ಕೃತಿಗಳ ಕೊರತೆ ಇದೆ. ಇದಕ್ಕೆ ಮುಖ್ಯ ಕಾರಣ ಆ ಭಾಷೆಗಳಲ್ಲಿಯ ಮೂಲ ಆಕರಗಳನ್ನು ರಚಿಸುವವರು ಅಥವಾ ಭಾಷಾಂತರಿಸುವವರು ವಿರಳವಾಗಿರುವುದು. ಸಾಹಿತ್ಯ ಪ್ರಕಾರ ಬಿಟ್ಟು ಇತರ ಬಹುತೇಕ ಕ್ಷೇತ್ರಗಳಲ್ಲಿ ಈ ಪರಿಸ್ಥಿತಿ ಇದೆ. ಇದಕ್ಕೆ ಆ ನಿಟ್ಟಿನಲ್ಲಿ ಕೆಲಸ ಮಾಡುವವರ ಸಂಖ್ಯೆ ಕಡಿಮೆಯಾಗಿರುವುದು ಕಾರಣವಾಗಿರಲಿ ಅಥವಾ ಆಯಾ ಭಾಷೆಗಳಲ್ಲಿ ಅಂತಹ ಕೃತಿಗಳ ರಚನೆ ಮತ್ತು ಪ್ರಕಟಣೆಗೆ ಇರುವ ಅಡಚಣೆಗಳು ಕಾರಣವಾಗಿರಲಿ ಇದಂತೂ ವಾಸ್ತವಸ್ಥಿತಿ . ಇಂತಹ ಕೊರತೆ ಕ್ಷೇತ್ರದಲ್ಲಿ ಕೆಲಸ ಮಾಡಿ ಹತ್ತು ಸಂಪುಟಗಳಷ್ಟು ದೊಡ್ಡದಾದ 'ಪ್ರವಾಸಿ ಕಂಡ ಇಂಡಿಯಾ' ಎಂಬ ಬೃಹತ್ಕೃತಿ ಕನ್ನಡದಲ್ಲಿ ಬಂದಿರುವುದು ಹೆಮ್ಮೆಯ ವಿಷಯವೇ. ಇದು ಭಾರತೀಯ ಇತಿಹಾಸ, ಸಂಸ್ಕೃತಿ ಮತ್ತು ಸಮಾಜಶಾಸ್ತ್ರಗಳನ್ನು ಅಧ್ಯಯನ ಮಾಡುವವರು ಅಗತ್ಯವಾಗಿ ಪರಿಶೀಲಿಸಲೇಬೇಕಾದ ಆಕರ ಗ್ರಂಥವಾಗಿದೆ.

ಯಾವುದೇ ಕೃತಿಯನ್ನು ಆಕರ ಗ್ರಂಥವೆಂದು ಪರಿಗಣಿಸಬೇಕಾದರೆ ಅದು ಕೆಲವೊಂದು ವಿಶಿಷ್ಟ ಲಕ್ಷಣಗಳನ್ನು ಹೊಂದಿರಬೇಕು. ಅಂದರೆ ಆ ಕೃತಿ ಯಾವುದಾದರೂ ವಿಷಯದ ಬಗ್ಗೆ ಮೂಲ ಮಾಹಿತಿ ಒದಗಿಸುವಂತಿರಬೇಕು. ಆ ಮೂಲ ಮಾಹಿತಿ ಅದೇ ಭಾಷೆಯಲ್ಲಿ ರಚಿತವಾಗಿರಬಹುದು, ಇಲ್ಲವೇ ಅನುವಾದ ಅಥವಾ ಸಂಗ್ರಹ ಅನುವಾದವಾಗಿರಬಹುದು. ಅದೇ ಭಾಷೆಯಲ್ಲಿದ್ದರೆ ಆ ಮಾಹಿತಿಗಳು ಯಾವ ರೂಪದಲ್ಲಿ ದೊರೆತಿವೆಯೋ ಆ ರೂಪದಲ್ಲೇ ಸಂಗ್ರಹಿಸಿ, ಶುದ್ಧಪಾಠ ಒದಗುವಂತೆ ಸಂಪಾದಿಸಬೇಕು. ಉದಾಹರಣೆಗೆ, ಕನ್ನಡ ಅಥವಾ ಇತರ ಯಾವುದೇ ಭಾಷೆಯಲ್ಲಿ ಕಂಡುಬರುವ ಪ್ರಾಚೀನ ಶಾಸನಗಳ ಹೊತ್ತಿಗೆಗಳು. (ಇಲ್ಲಿ ಸದ್ಯಕ್ಕೆ ನಿಜ ಶಾಸನಗಳನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಂಡು) ಈ ಮೂಲ ಶಾಸನಗಳನ್ನು ಅನುವಾದ ಮಾಡಲಿ, ಸಾರ ಸಂಗ್ರಹರೂಪದಲ್ಲಿ ಹೇಳಲಿ ಮೂಲ ಅಂಶಗಳಿಗೆ ಧಕ್ಕೆ ಬರದಂತಿರಬೇಕು. ನಿರೂಪಣೆಯಲ್ಲಿ ನಿಷ್ಪಕ್ಷಪಾತತೆ, ಸ್ಪಷ್ಟತೆ, ಖಚಿತತೆಗಳು ಅಗತ್ಯ ಲಕ್ಷಣಗಳು. ಹಾಗೆಯೇ ಪ್ರಾಚೀನ ಶಿಷ್ಟಸಾಹಿತ್ಯ, ಜಾನಪದ ಸಾಹಿತ್ಯ, ವಚನ ಸಾಹಿತ್ಯ, ಮತ್ತಿತರ ವಿಷಯಗಳ ಬಗ್ಗೆಯೂ ಹೇಳಬಹುದು. 'ಪ್ರವಾಸಿ ಕಂಡ ಇಂಡಿಯಾ'ವೂ ಇಂತಹ ಮೂಲ ಮಾಹಿತಿಯೊಂದನ್ನು ನಿರೂಪಿಸುತ್ತದೆ. ಅದು ಭಾರತಕ್ಕೆ ಬಂದು ಹೋದ ಅಥವಾ ಭಾರತದ ಬಗ್ಗೆ ಕೇಳಿದ ಪ್ರವಾಸಿಗಳು, ಭೂಗೋಳ ಶಾಸ್ತ್ರಜ್ಞರು ಮತ್ತು ಕಥನಕಾರರು ಬರೆದಿಟ್ಟ ವರ್ಣನೆಗಳನ್ನು ಒಳಗೊಂಡಿದೆ. ಈ ಪ್ರವಾಸ ಕಥನದ ಸ್ವರೂಪವೇನು? ಅದರ ಮಹತ್ತ್ವೇನು ಮತ್ತು ಅದು ಈ ಕೃತಿಯಲ್ಲಿ ಹೇಗೆ ನಿರೂಪಿತವಾಗಿದೆ ಎಂಬುದನ್ನು ಮುಂದೆ ಗಮನಿಸೋಣ.

ಒಂದು ದೇಶದ ಇತಿಹಾಸ ರಚನೆಗೆ ಪ್ರವಾಸ ಕಥನಗಳು ಬಹು ಮುಖ್ಯ ಆಕರ. ದೇಶೀಯ ಆಕರಗಳಿಗಿಂತಲೂ ವಿದೇಶೀಯರ ಬರವಣಿಗೆಗಳು, ಅಭಿಪ್ರಾಯಗಳು ಹೆಚ್ಚು ವಿಶ್ವಾಸಾರ್ಹವೆಂಬುದು ದೃಢಪಟ್ಟಿರುವ ಸಂಗತಿ. ದೇಶೀಯ ಶಾಸನಗಳು ಮತ್ತು ಸಾಹಿತ್ಯದಲ್ಲಿ ಆಯಾ ಕಾಲದ ರಾಜರುಗಳ ಆಳ್ವಿಕೆಯ ಬಗ್ಗೆ ಉತ್ಪ್ರೇಕ್ಷಿತ ಸಂಗತಿಗಳಿರಲು ಸಾಧ್ಯ. ಹಾಗೆಯೇ ಭಾರತದಲ್ಲಿ ಶಾಸ್ತ್ರೀಯ ಇತಿಹಾಸ ಪ್ರಕಾರ ಬೆಳೆಯಬರದೆ ಪುರಾಣ ಮತ್ತು ಸಾಹಿತ್ಯ ವಲಯಗಳಲ್ಲಿ ಹುಗಿದುಹೋಗಿರುವುದರಿಂದ ಅದು

ಇತಿಹಾಸ ರಚನೆಗೆ ಹೆಚ್ಚು ಅನುಕೂಲಕರವಾಗಿಲ್ಲ. ಜೊತೆಗೆ ಸ್ಥಳೀಯ ಸಾಮಾಜಿಕ ಜೀವನ, ಆಚಾರ, ಪದ್ಧತಿಗಳು, ಜನಪದ ಸಾಹಿತ್ಯ, ಸಂಪ್ರದಾಯಗಳಲ್ಲಿ ಹೆಣೆದುಕೊಂಡಿದ್ದು ಅವನ್ನು ಇಂದು ಕಾಲಾನು ಕ್ರಮವಾಗಿ ವರ್ಗೀಕರಿಸುವುದು ದುಸ್ಸಾಧ್ಯವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಪ್ರವಾಸ ಕಥನಗಳು ಹೆಚ್ಚು ಉಪಯುಕ್ತವಾಗುತ್ತವೆ. ಅವುಗಳಲ್ಲಿ ಕೆಲವೊಂದು ಸಂದರ್ಭಗಳಲ್ಲಿ ಉತ್ಪ್ರೇಕ್ಷೆ, ಪೂರ್ವಾಗ್ರಹ ಮತ್ತು ಅತಿರಂಜಿತ ಕಲ್ಪನೆಗಳು ಇರಬಹುದಾದರೂ ಇತರ ಮೂಲಗಳಿಂದ ತಾಳೆ ನೋಡಿ ಸತ್ಯಾಂಶಗಳನ್ನು ಆಯ್ದುಕೊಳ್ಳುವುದು ಕಷ್ಟವಲ್ಲ. ಈ ಹಲವು ಕಾರಣಗಳಿಂದ ಪ್ರವಾಸ ಸಾಹಿತ್ಯ ಅತ್ಯಂತ ಪ್ರಮುಖ ಆಕರವೆನಿಸುತ್ತದೆ.

'ಪ್ರವಾಸಿ ಕಂಡ ಇಂಡಿಯಾ'ದ ಮೊದಲ ಸಂಪುಟ ೧೯೭೪ರಲ್ಲಿ ಹೊರಬಂತು. ಈ ಸಂಪುಟ ಸರಣಿಯಲ್ಲಿ ಈಗ ಆರು ಸಂಪುಟಗಳು ಪ್ರಕಟವಾಗಿದ್ದು ಒಟ್ಟು ಹತ್ತು ಸಂಪುಟಗಳಲ್ಲಿ ಈ ಕೃತಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ. ಇದರ ಪ್ರಕಟಣೆಯನ್ನು ಮೈಸೂರು ವಿಶ್ವವಿದ್ಯಾನಿಲಯ ನಿರ್ವಹಿಸುತ್ತಿದೆ. ಈ ಕೃತಿ 'ಇತಿಹಾಸ ಪಿತಾಮಹ' ಹೆರೊಡೊಟಸ್‌ನಿಂದ (ಕ್ರಿ. ಪೂ. ೪೮೪–೪೨೫) ಆರಂಭವಾಗುತ್ತದೆ. ಅಲ್ಲಿಂದ ಮುಂದೆ ಹಲವಾರು ವ್ಯಕ್ತಿಗಳ ಪ್ರವಾಸಕಥನಗಳು ಬರುತ್ತವೆ. ಮೆಗಾಸ್ತನೀಸ್, ಸ್ಟ್ರಾಬೋ, ಪ್ಲಿನಿ, ಟಾಲೆಮಿ ಮೊದಲಾದ ಪ್ರಸಿದ್ಧ ಪ್ರಾಚೀನ ಗ್ರೀಕ್ ಬರಹಗಾರರಿಂದ ಹಿಡಿದು ನಾವು ಕೇಳಿಲ್ಲದ, ಮತ್ತು ಹೆಚ್ಚು ಪ್ರಸಿದ್ಧರಲ್ಲದ ಹತ್ತಾರು ಜನರ ಪ್ರವಾಸ ಕಥನಗಳು, ವಿವರಣೆಗಳು ಇದರಲ್ಲಿವೆ. ಈಗ ಪ್ರಕಟವಾಗಿರುವ ಆರು ಸಂಪುಟಗಳಲ್ಲಿ ಒಟ್ಟು ೧೫೫ ಜನರ ಕಥನಗಳಿವೆ. ಮೊದಲನೇ ಸಂಪುಟದಲ್ಲಿ ೩೮ ಜನರ ಬರಹಗಳಿದ್ದರೆ ಐದನೇ ಸಂಪುಟದಲ್ಲಿ ಕೇವಲ ಇಬ್ಬರ ಪ್ರವಾಸ ಕಥನಗಳಷ್ಟೇ ಇವೆ. ಆರನೇ ಸಂಪುಟದಲ್ಲಿ ಒಬ್ಬನ ಪ್ರವಾಸ ಕಥನವೇ ಆವರಿಸಿದೆ. ಈ ಅಂಕಿ ಅಂಶಗಳನ್ನು ಗಮನಿಸಿದಾಗ ಕೆಲವರು ನೀಡಿರುವ ವರ್ಣನೆಗಳು, ಮಾಹಿತಿಗಳು ಸಂಗ್ರಹವಾಗಿದ್ದರೆ ಇನ್ನು ಕೆಲವರ ಕಥನಗಳು ವಿವರವಾಗಿರುವುದೂ ಕಂಡುಬರುತ್ತದೆ. ಲೇಖಕರು ಸಾವಿರಾರು ಪುಟಗಳ ಮೂಲಕಥನಗಳಿಂದ ಅವುಗಳ ಸಾರಸಂಗ್ರಹವನ್ನು ಕೊಟ್ಟಿದ್ದಾರೆ. ಲೇಖಕರೇ ಹೇಳುವಂತೆ ಮೂಲ ಕಥನವನ್ನು ಸಂಪಾದಿಸಿ ಸ್ವಾರಸ್ಯ ಕೆಡದಂತೆ ಉಪಯುಕ್ತವಾದ ಎಲ್ಲ ಸಂಗತಿಗಳು ಬರುವಂತೆ ಮಾಡುವ ಪ್ರಯತ್ನ ನಡೆದಿದೆ. ಈ ಕೃತಿಯ ಕಾಲಾವಧಿ ಪ್ರಾರಂಭದಿಂದ ಹಿಡಿದು ಹದಿನೆಂಟನೆ ಶತಮಾನದವರೆಗೂ ವ್ಯಾಪಿಸಿದೆ.

ಇಂತಹ ದೀರ್ಘವೂ ವ್ಯಾಪಕವೂ ಆದ ಪ್ರವಾಸ ಕಥನದ ಸ್ವರೂಪ ವೈವಿಧ್ಯವಾದುದು. ಈ ಕಥನಗಳಲ್ಲಿ ಪ್ರಸ್ತಾಪಿತವಾಗಿರುವ ವಿಷಯಗಳು ಹಲವಾರು ಕ್ಷೇತ್ರಗಳಿಗೆ ಅನ್ವಯಿಸಿರುವಂತಹವು. ಸಮುದ್ರ ಪ್ರಯಾಣ, ಭೂಮಾರ್ಗ ಪ್ರಯಾಣದ ಸಾಹಸಮಯ ಕಾರ್ಯಗಳು, ತಾವು ಅನುಭವಿಸಿದ ಕಡುಕಷ್ಟಗಳು ಒಂದೆಡೆ ವರ್ಣಿತವಾದರೆ ರಾಜಾಸ್ಥಾನಗಳು, ರಾಜಧಾನಿಗಳು, ಜನಜೀವನದ ವರ್ಣನೆಗಳು ಇನ್ನೊಂದೆಡೆ ಬರುತ್ತವೆ. ಭಾರತೀಯ ಪ್ರಾಣಿಗಳು, ಸಸ್ಯಗಳು ಭೂವಿವರಣೆಗಳು ಒಂದೆಡೆ ವರ್ಣಿತವಾಗಿದ್ದರೆ ಇಲ್ಲಿನ ಸಮಾಜದ ಆಚಾರ ವಿಚಾರಗಳು, 'ಸತಿ'ಪದ್ಧತಿಯಂತಹ ವಿಶಿಷ್ಟ ಪದ್ಧತಿ, ಜನರ ಊಟ ಉಪಚಾರಗಳು, ಮನೆ ಮಾರುಗಳ ವಿವರ, ಉಡುಗೆ ತೊಡುಗೆಗಳು ಇತ್ಯಾದಿ ವಿಷಯಗಳು ಇನ್ನೊಂದೆಡೆ ಪ್ರಸ್ತಾಪಿತವಾಗಿರುತ್ತವೆ. ಹೊರ ದೇಶಗಳೊಂದಿಗಿನ ವ್ಯಾಪಾರ, ವಾಣಿಜ್ಯ,ಗಳು ವಿನಿಮಯ ವಸ್ತುಗಳು, ನ್ಯಾಯಪದ್ಧತಿ ಮೊದಲಾದವು ಒಂದೆಡೆ ಉಲ್ಲೇಖಿತವಾಗಿದ್ದರೆ, ರಾಜಕೀಯ ಸ್ಥಿತಿ, ರಾಜರುಗಳ ಮತ್ತು ಅರಮನೆಯ ಒಳಜಗಳಗಳು, ರಾಣಿವಾಸದ ಒಳ ಸಂಚುಗಳು, ಮತ್ತೊಂದೆಡೆ ವಿವರಿತವಾಗಿವೆ. ಜನರ ಶೌರ್ಯ, ದಾನ, ಧರ್ಮ, ಔದಾರ್ಯಗಳು ಒಂದೆಡೆ ಕಂಡುಬಂದರೆ, ಮೋಸ, ಕಳ್ಳತನ, ವ್ಯಭಿಚಾರ, ಕೊಲೆ ಮೊದಲಾದ ಅವ್ಯವಹಾರಗಳು ಇನ್ನೊಂದೆಡೆ ಕಂಡುಬರುತ್ತವೆ. ಒಟ್ಟಿನಲ್ಲಿ ವಿಶ್ವಕೋಶದ ರೀತಿಯಲ್ಲಿ ಜನಜೀವನ ಮತ್ತು ಭೂಗೋಳಶಾಸ್ತ್ರಕ್ಕೆ ಸಂಬಂಧಿಸಿದ ಸಾವಿರಾರು ಸಂಗತಿಗಳನ್ನು ಚಿತ್ರಬಿಡಿಸಿದಂತೆ ಈ ಪ್ರವಾಸ ಕಥನದಲ್ಲಿ ಹಿಡಿದಿಡಲಾಗಿದೆ. ಸಾವಿರಾರು ಮೈಲಿಗಳ ದೂರದಿಂದ ಕಷ್ಟತರ ಪ್ರಯಾಣ ಮಾಡಿ ಭಾರತಕ್ಕೆ ಬಂದ ಜನ ಇಲ್ಲಿನ ದೇಶವನ್ನೂ ಜನರನ್ನೂ ಹೇಗೆ ಕಂಡರು ಎಂದು ತಿಳಿಯುವುದೇ ಒಂದು ಅಮೋಘ ಅನುಭವ. ರಾಜಕೀಯ ಮತ್ತು ವಾಣಿಜ್ಯ ಸಂಪರ್ಕದ ಜೊತೆಗೆ ಕಾಲ ಕಾಲಕ್ಕೆ ವಿದೇಶೀಯರ ದೃಷ್ಟಿಯಲ್ಲಿ ಭಾರತೀಯರು ಕಾಣಿಸಿಕೊಂಡ ರೀತಿ ಯಾವುದು?

ಭಾರತೀಯ ಸಮಾಜದ ಬೆಳವಣಿಗೆಗಳೇನು? ವಿದೇಶೀಯರ ಬಗ್ಗೆ ಭಾರತೀಯರ ಧೋರಣೆ ಎಂಥದಿತ್ತು ಎಂಬಿತ್ಯಾದಿ ವಿಷಯಗಳ ಕುರಿತ ಸೂಕ್ಷ್ಮ ಚಿತ್ರಣ ಈ ಕೃತಿಯಿಂದ ಮೂಡುತ್ತದೆ.

ಭಾರತದ ಸಂದರ್ಭದಲ್ಲಂತೂ ಈ ಪ್ರವಾಸ ಕಥನದ ಮಹತ್ವ ಅಮೂಲ್ಯವಾದುದು. ಭಾರತೀಯರು ಪ್ರಾಚೀನ ಕಾಲದಿಂದಲೂ ಹೊರದೇಶಗಳೊಡನೆ ಸಂಪರ್ಕವಿಟ್ಟುಕೊಂಡಿದ್ದುದು ಮತ್ತು ಆಗ್ನೇಯ ಏಷ್ಯಾ ಪ್ರದೇಶಗಳಲ್ಲಿ ವಸಾಹತುಗಳನ್ನು ಸ್ಥಾಪಿಸಿದುದು ಐತಿಹಾಸಿಕ ಆಧಾರಗಳಿಂದ ದೃಢಪಟ್ಟಿದೆ. ಭಾರತೀಯ ಸಂಸ್ಕೃತಿಯ ಪ್ರಭಾವ ಆಗ್ನೇಯ ಏಷ್ಯಾದಲ್ಲಿ ವ್ಯಾಪಕವಾಗಿಯೂ ಬೌದ್ಧ ಧರ್ಮದ ಮೂಲಕ ಚೀನಾ ಜಪಾನುಗಳು ಸೇರಿದ ದೂರ ಪ್ರಾಚ್ಯದಲ್ಲಿ ಪರೋಕ್ಷವಾಗಿಯೂ ಆಗಿರುವುದು ಕಂಡುಬರುತ್ತದೆ. ಪ್ರಾಚೀನ ರೋಮನ್ ಸಾಮ್ರಾಜ್ಯದೊಡನೆ, ಪರ್ಷಿಯಾ ಸಾಮ್ರಾಟರೊಡನೆ ಭಾರತದ ವಾಣಿಜ್ಯ ಮತ್ತು ರಾಜಕೀಯ ಸಂಬಂಧಗಳಿದ್ದುವು. ಆ ಕಾಲದಲ್ಲಿ ಭಾರತ ಮತ್ತು ರೋಮ್ ಹಾಗೂ ಮಧ್ಯ ಪ್ರಾಚ್ಯ ದೇಶಗಳೊಂದಿಗೆ ನಿಕಟ ಸಂಪರ್ಕವಿತ್ತು. ಸಾವಿರಾರು ರೋಮನ್ ನಾಣ್ಯಗಳು ಭಾರತದಲ್ಲಿ ಅದರಲ್ಲೂ ದಕ್ಷಿಣದಲ್ಲಿ ದೊರೆತಿವೆ. ಆದರೆ ಆ ಕಾಲದಲ್ಲಿ ಭರತಖಂಡವೊಡನೆ ವಿದೇಶಗಳು ಹೊಂದಿದ್ದ ಸಂಪರ್ಕದ ವಾಸ್ತವ ಸ್ವರೂಪದ ಬಗ್ಗೆ ಭಾರತೀಯ ಪ್ರವಾಸಿಗಳಾಗಲಿ, ಸ್ಥಳೀಯ ಕಥನಕಾರರಾಗಲಿ ನಮಗೆ ಏನೂ ತಿಳಿಸುವುದಿಲ್ಲ. ಅಂದಮಾತ್ರಕ್ಕೆ ಭಾರತೀಯರಾರೂ ವಿದೇಶಗಳಿಗೆ ಹೋಗಲಿಲ್ಲವೆಂದು ಅರ್ಥವಲ್ಲ. ಭಾರತೀಯರಲ್ಲಿ ಪ್ರವಾಸಕಥನಗಳನ್ನು ಬರೆಯುವ ಅಥವಾ ಇತಿಹಾಸ ರಚಿಸುವ ಪರಿಪಾಠವಿರಲಿಲ್ಲ. ಅವರು ಬರೆಯುತ್ತಿದ್ದ ಇತಿಹಾಸ ಕಾಲಾನಂತರ ಬೇಗ ಪುರಾಣ ಕಥೆಗಳಾಗಿ, ಐತಿಹ್ಯಗಳಾಗಿ ಪರಿಣಮಿಸುತ್ತಿದ್ದುವು. ಜೊತೆಗೆ ಇತಿಹಾಸ ಪ್ರಕಾರವನ್ನು ಬೆಳೆಸಬೇಕೆನ್ನುವ ಅಭಿಲಾಷೆಯೂ ಕಡಿಮೆ ಇತ್ತು. ಇನ್ನು ಕೆಲವೊಮ್ಮೆ ಪ್ರಾಚೀನ ಗ್ರಂಥಗಳನ್ನು ಸಂರಕ್ಷಿಸಿಡುವಲ್ಲಿ ಇದ್ದ ಅಡಚಣೆಗಳಿಂದಲೂ ಕೆಲವೊಂದು ಉಪಯುಕ್ತ ಸಾಹಿತ್ಯ ನಶಿಸಿರಬಹುದು. ಈ ಪರಿಸ್ಥಿತಿಯಲ್ಲಿ ಹೊರದೇಶಗಳೊಡನೆ ಭಾರತದ ಸಂಪರ್ಕ ಮತ್ತು ಭಾರತದ ರಾಜಕೀಯ ಹಾಗೂ ಸಾಮಾಜಿಕ ಸ್ಥಿತಿಗಳನ್ನು ಸ್ವಲ್ಪಮಟ್ಟಿಗಾದರೂ ತಿಳಿಯುವಲ್ಲಿ ಈ ಪ್ರವಾಸಕಥನವೇ ಏಕಮಾತ್ರ ಆಧಾರವಾಗಿದೆ.

ಪ್ರಾಚೀನ ಕಾಲಕ್ಕೆ ಸಂಬಂಧಿಸಿದಂತೆ ಇರುವ ಪ್ರವಾಸ ಕಥನ ಗಾತ್ರದಲ್ಲಿ ಕಡಿಮೆ. ಮುಸ್ಲಿಮರು ಭಾರತದಲ್ಲಿ ರಾಜ್ಯ ಸ್ಥಾಪಿಸಿದ ಮೇಲೆ ಮತ್ತು ಕ್ರಿ. ಶ. ೧೪೯೮ರಲ್ಲಿ ವಾಸ್ಕೋಡಗಾಮನು ದಕ್ಷಿಣ ಭಾರತದ ಪಶ್ಚಿಮ ತೀರದಲ್ಲಿಳಿದ ಮೇಲೆ ಈ ದೇಶಕ್ಕೆ ಬಂದ ಪ್ರವಾಸಿಗಳು, ವ್ಯಾಪಾರಿಗಳು, ರಾಯಭಾರಿಗಳು ಮೊದಲಾದವರು ಬರೆದಿರುವ ಒಂದೊಂದು ಕಥನಗಳೂ ಸಾವಿರಾರು ಪುಟಗಳಷ್ಟಿವೆ. ಈ ಕಥನಗಳಲ್ಲಿ ಪ್ರಸ್ತಾಪಿತವಾಗಿರುವ ವಿಷಯಗಳು ವೈವಿಧ್ಯವಾದವು. ಇಂಥ ಕಥನಗಳನ್ನು ಶ್ರೀ ಎಚ್. ಎಲ್. ನಾಗೇಗೌಡರು ಹೇಗೆ ಕನ್ನಡಿಸಿದ್ದಾರೆಂಬುದನ್ನು, ಅವುಗಳ ಸ್ವಾರಸ್ಯವನ್ನು ಕೆಲವೊಂದು ಉದಾಹರಣೆಗಳಿಂದ ನೋಡುವುದೇ ಸೂಕ್ತ.

ಭಾರತವನ್ನು ಸಂದರ್ಶಿಸದಿದ್ದರೂ ಇಲ್ಲಿಯ ಮಾಹಿತಿಗಳನ್ನು ಸಂಗ್ರಹಿಸಿದ ಟಾಲೆಮಿಯ ವರ್ಣನೆ ಹೀಗಿದೆ—"ಲಿಮಿರಿಕೆಯ ಒಳನಾಡಿನಲ್ಲಿ ಬನೌಸಿಯಿಂದ ಪಶ್ಚಿಮಕ್ಕಿರುವ ನಗರಗಳಾವುವೆಂದರೆ: ನರೂಲ್ಲ(?) ಕೂಬ (ಗೋವ?) ಮತ್ತು ಪಲೂರು(?), ಬನೌಸಿಗೂ, ಬರಿಸಿಗೂ ಮಧ್ಯೆ ಪಸಗೇ, ಮಸ್ತನೂರು(?) ಕೂರೆಲ್ಲೂರು. ಪುನ್ನಾಟ—ಇಲ್ಲಿ ಪಚ್ಚೆಯಂತಹ ರತ್ನಗಳೂ ವೈಡೂರ್ಯಗಳೂ ದೊರೆಯುತ್ತಿದ್ದವು. ಅಲೋ (ಬಹುಶಃ ಉತ್ತರ ಕನ್ನಡ ಜಿಲ್ಲೆಯಲ್ಲಿಯ ಎಲ್ಲಾಪುರವೆಂಬ ಸ್ಥಳ). ಕೇರಬೋತ್ರೋನ ರಾಜಧಾನಿಯಾದ ಕರೂರ (ಕೊಯಂಬತ್ತೂರು ಜಿಲ್ಲೆಯ ಕರೂರು). ಆರೆಂಬೂರ್ (ಉರುಂಬರುಮ್?). ಬಿದೆರಿ (ಬಹುಶಃ ಕಾವೇರಿ ನದಿಯ ಸಮೀಪದಲ್ಲಿ ಕೊಯಂಬತ್ತೂರು ಜಿಲ್ಲೆಯ ಈರೋಡು). ಪೊಂಟಿಪ್ರೋಳಿ (ಧಾರವಾಡ ಜಿಲ್ಲೆಯಲ್ಲಿರುವ ಮೊದಲಿನ ಹಂಟಿಯಪುರ ಅಥವಾ ಈಗಿನ ಹಾನಗಲ್), ಅವರಿಮ(?) ಮತ್ತು ಕೋರಿಯೂರ್)(?) (ಸಂಪುಟ ೧. ಪುಟ ೧೨೧–೨೨)

ಈ ಪ್ರಾಚೀನ ಸ್ಥಳಗಳಲ್ಲಿ ಹಲವನ್ನು ಇನ್ನೂ ಸರಿಯಾಗಿ ಗುರುತಿಸಲಾಗಿಲ್ಲ. ಇದಕ್ಕೆ ಗ್ರೀಕ್‌ನಲ್ಲಿ ಸ್ಥಳೀಯ ಹೆಸರುಗಳ ಉಚ್ಚಾರಣೆ ವ್ಯತ್ಯಾಸಗೊಂಡಿರುವುದರ ಜೊತೆಗೆ ಭೂಗೋಳಶಾಸ್ತ್ರ ಇನ್ನೂ ಪೂರ್ಣವಾಗಿ ಬೆಳೆಯದಿದ್ದ ಮತ್ತು ಇಲ್ಲಿಯ ಭೌಗೋಳಿಕ ಪರಿಚಯ ನಿಖರವಾಗಿರದಿದ್ದ ಕಾರಣ

ಗಳಿಂದಲೂ ಕೆಲವೊಂದು ನ್ಯೂನತೆಗಳು ಕಂಡುಬರುತ್ತವೆ. ಆದರೂ ಸಾವಿರಾರು ವರ್ಷಗಳ ಹಿಂದೆ ವಿದೇಶೀಯರು ಭಾರತವನ್ನು ಹೇಗೆ ಕಂಡಿದ್ದರು ಮತ್ತು ಆಗ ಅವರ ನಮ್ಮ ನಡುವಿನ ಸಂಪರ್ಕ ಎಷ್ಟರಮಟ್ಟಿಗಿತ್ತು ಎಂಬ ವಿಷಯದ ಬಗ್ಗೆ ಇದು ಬೆಳಕು ಚೆಲ್ಲುತ್ತದೆ. ಇನ್ನೂ ಗುರುತಿಸಲಾಗದ ಪ್ರದೇಶಗಳನ್ನು ಗುರುತಿಸುವುದು ಸಂಶೋಧಕರಿಗೊಂದು ಸವಾಲೆನಿಸಿದೆ.

ಚೀನಾ ಭಾರತದ ನೆರೆರಾಷ್ಟ್ರವಾದರೂ ದುರ್ಗಮ ಹಿಮಾಲಯಪರ್ವತ ಇವೆರಡನ್ನೂ ಬೇರ್ಪಡಿಸಿ ಸಂಪರ್ಕ ದುಸ್ಸಾಧ್ಯವಾಗುವಂತೆ ಮಾಡಿದೆ. ಆದರೆ ಬೌದ್ಧಧರ್ಮದ ಪ್ರಸಾರದಿಂದಾಗಿ ಚೀನೀಯರಿಗೆ ಭಾರತ ಪುಣ್ಯಭೂಮಿಯಾಯಿತು. ಅವರು ತಮ್ಮ ಧರ್ಮ ಸಂಸ್ಥಾಪಕ ಗೌತಮ ಬುದ್ಧನ ದೇಶವನ್ನು ಕಾಣಲು, ಇಲ್ಲಿ ಅಧ್ಯಯನ ಮಾಡಲು ಹಾತೊರೆಯುತ್ತಿದ್ದರು. ಅದಕ್ಕಾಗಿ ಎಂತಹ ಕಷ್ಟಕಾರ್ಪಣ್ಯಗಳನ್ನೂ ಎದುರಿಸಲು ಸಿದ್ಧರಿದ್ದರು. ಕ್ರಿ. ಶ. ಐದನೆ ಶತಮಾನದ ಮೊದಲಲ್ಲಿ ಬಂದ ಚೀನೀ ಯಾತ್ರಿಕರಲ್ಲಿ ಮೊದಲ ಪ್ರಸಿದ್ಧ ವ್ಯಕ್ತಿ ಫಾಹಿಯಾನನು ತನ್ನ ಯಾತ್ರೆಯ ಬಗ್ಗೆ ಹೀಗೆ ಹೇಳುತ್ತಾನೆ. "ನಾನು ಚೀನಾದಿಂದ ಹೊರಟು ಇಂಡಿಯಾ ದೇಶವನ್ನು ತಲುಪಲು ಆರು ವರ್ಷವಾಯಿತು. ಅಲ್ಲಿ ಆರು ವರ್ಷಗಳಿಗಿಂತ ಹೆಚ್ಚು ಕಾಲ ಇದ್ದೆನು. ಅಲ್ಲಿಂದ ಹಿಂದಿರುಗಿ ಬರಲು ಮೂರುವರ್ಷಗಳು ಬೇಕಾಯಿತು. ನಾನು ಕಂಡ ದೇಶಗಳು ಸುಮಾರು ಮೂವತ್ತು. ಗೋಬಿ ಮರುಭೂಮಿಯನ್ನು ದಾಟಿ ಇಂಡಿಯಾಕ್ಕೆ ಹೋದ ನನ್ನ ಶ್ರದ್ಧೆ ಧರ್ಮಾಭಿಮಾನ ವರ್ಣನೆಗೆ ಅಸಾಧ್ಯ. ಹ್ಯಾನಿನ ನನ್ನ ಗುರುಗಳು ಕಂಡು ಕೇಳಿಲ್ಲದ ನಿಜವಾದ ಧರ್ಮಸೂತ್ರಗಳನ್ನು ಅರಿಯಲು ನಾನು ಪಟ್ಟ ಕಷ್ಟ ದೇವರಿಗೇ ಗೊತ್ತು. ಆದರೆ ಮನೆಯಲ್ಲಿ ಕುಳಿತಿರುವ ಭಿಕ್ಷುಗಳಿಗೆ ನಾನು ಕಂಡ ವಿಚಾರಗಳನ್ನೆಲ್ಲಾ ತಿಳಿಸುವ ಇಚ್ಛೆಯಿಂದ ನನ್ನ ಜೀವವನ್ನೂ ಲೆಕ್ಕಿಸದೆ ಬಂದ ಕಷ್ಟಗಳನ್ನೆಲ್ಲಾ ಸಹಿಸಿ ನನ್ನ ದೇಶಕ್ಕೆ ಹಿಂದಿರುಗಿದೆನು. ನನ್ನ ಪುಣ್ಯದಿಂದ ಮೂವರು ಮಹಾಪುರುಷರು ನನ್ನನ್ನು ದಾರಿಯುದ್ದಕ್ಕೂ ಕಾಪಾಡಿದರು." (ಸಂಪುಟ ೧. ಪುಟ ೧೮೭)

ಮಾರ್ಗಗಳು ಕಠಿಣತರವಾಗಿದ್ದ ಮತ್ತು ಪ್ರವಾಸ ಪ್ರಯಾಸವಾಗಿದ್ದ ಆ ಕಾಲದಲ್ಲಿ ಧರ್ಮಶ್ರದ್ಧೆಯಿಂದ, ಜ್ಞಾನಾಕಾಂಕ್ಷೆಯಿಂದ ಬಂದ ಜನರ ಕಥನಗಳ ಮೌಲ್ಯ ಅಪರಿಮಿತ. ಫಾಹಿಯಾನನ ಬರವಣಿಗೆ ಆ ಕಾಲದಲ್ಲಿ ಭಾರತದಲ್ಲಿ ಬೌದ್ಧಧರ್ಮದ ಸ್ಥಿತಿಗತಿಗಳನ್ನೂ ರಾಜಕೀಯ ಸಂಗತಿಗಳನ್ನೂ ತಿಳಿಸುವಲ್ಲಿ ಅತ್ಯುಪಯುಕ್ತ ಆಕರವಾಗಿದೆ.

ಏಳನೇ ಶತಮಾನದಲ್ಲಿ ಭಾರತವನ್ನು ಸಂದರ್ಶಿಸಿದ ಇನ್ನೊಬ್ಬ ಚೀನೀ ಯಾತ್ರಿಕ ಹ್ಯುಯೆನ್-ತ್ಸಾಂಗ್ ಹೆಚ್ಚಿನ ವಿವರಗಳನ್ನು ಬರೆದಿದ್ದಾನೆ. ಅವನು ಭಾರತದಲ್ಲಿ ದಾರಿಗಳ್ಳರ ಕೈವಶಗೊಳಗಾದ ಸಂಗತಿಯನ್ನು ಹೀಗೆ ವಿವರಿಸಿದ್ದಾನೆ—"ರಾಜಪುರದಿಂದ ಹೊರಟು ಆಗ್ನೇಯ ದಿಕ್ಕಿಗೆ ಪ್ರಯಾಣಮಾಡಿ ಒಂದು ನದಿಯನ್ನು (ಚೀನಾಬ್) ದಾಟಿ, ಚೆಹ್-ಕಾ (ತಕ್ಕಾ?) ಎಂಬ ನಾಡಿಗೆ ಬಂದೆವು.

ಚೆಹ್-ಕಾ ದೇಶದ ಗಡಿಯನ್ನು ಮುಟ್ಟುವ ಮುನ್ನ ನಾವು ದರೋಡೆಕಾರರ ಕೈಗೆ ಸಿಕ್ಕಿಕೊಂಡೆವು. ಐವತ್ತುಜನ ದರೋಡೆಕಾರರು ನನ್ನ ಮತ್ತು ನನ್ನ ಸಂಗಡಿಗರ ಬಟ್ಟೆಬರೆಗಳನ್ನೆಲ್ಲ ಕಿತ್ತುಕೊಂಡು ನಮ್ಮನ್ನು ವಧೆಮಾಡಲು ಯತ್ನಿಸಿದರು. ಇದನ್ನು ನೋಡಿದ ಹೊಲ ಉಳುತ್ತಿದ್ದ ಬ್ರಾಹ್ಮಣನೊಬ್ಬ ಉಳುವುದನ್ನು ಬಿಟ್ಟು ಊರೊಳಕ್ಕೆ ಓಡಿಹೋಗಿ, ಶಂಖ ಊದಿ ತಮಟೆ ಬಡಿದು ಜನಗಳನ್ನೆಲ್ಲಾ ಸೇರಿಸಿದನು. ಅವರು ದರೋಡೆಕಾರರ ಕಡೆನುಗ್ಗಿ ಅವರನ್ನು ಓಡಿಸಿ ನಮ್ಮನ್ನು ಬಿಡುಗಡೆ ಮಾಡಿದರು. ನಮಗೆ ಅವರಲ್ಲಿದ್ದ ಬಟ್ಟೆಗಳನ್ನು ಕೊಟ್ಟು ಊರಿಗೆ ಕರೆದುಕೊಂಡು ಹೋದರು. ಆ ರಾತ್ರಿ ನಾವು ಅವರ ಹಳ್ಳಿಯಲ್ಲಿ ತಂಗಿದ್ದೆವು." (ಸಂಪುಟ ೧. ಪುಟ ೨೧೪)

ಈ ವಿವರಣೆ ಅಂದಿನ ಪ್ರಯಾಣದ ಅಪಾಯಕರ ಸ್ಥಿತಿಯನ್ನು ತಿಳಿಸುವುದಷ್ಟೆಯಲ್ಲದೆ ಸ್ಥಳೀಯರ ಸಹಾಯ ಮನೋಧರ್ಮವನ್ನು ಸೂಚಿಸುತ್ತದೆ. ಇದು ಓದುಗರಿಗೆ ಸಾಹಸಮಯ ಕಥೆಯಂತಿದೆ. ಈ ಪ್ರವಾಸ ಕಥನದ ಇನ್ನೊಂದು ವರ್ಣನೆ ಹೀಗಿದೆ.: "ಚೆಹ್-ಕಾ ದೇಶದ ಪಶ್ಚಿಮಕ್ಕೆ ಇಂಡಸ್ ನದಿಯೂ ಪೂರ್ವಕ್ಕೆ ಬೀಯಸ್ ನದಿಯೂ ಗಡಿಗಳಾಗಿವೆ. ಭತ್ತ, ಗೋಧಿ, ಇಲ್ಲಿಯ ಬೆಳೆಗಳು. ಚಿನ್ನ, ಬೆಳ್ಳಿ, ಕಂಚು, ತಾಮ್ರ ಮತ್ತು ಕಬ್ಬಿಣ ಇಲ್ಲಿ ಸಿಕ್ಕುತ್ತವೆ. ಹವೆ ಬಹಳ ಉಷ್ಣ. ಬಿರುಗಾಳಿಗಳು ಹೆಚ್ಚಾಗಿ ಬೀಸುತ್ತವೆ. ಜನರ ನಡೆ ನುಡಿಗಳು ಒರಟು. ಭಾಷೆ ಗ್ರಾಮ್ಯ. ರೇಷ್ಮೆ

ಮತ್ತು ಮಸ್ಲಿನ್ನಿನ ಬಿಳಿ ಬಟ್ಟೆಗಳನ್ನು ಧರಿಸುತ್ತಾರೆ. ಬೌದ್ಧ ಮತಾವಲಂಬಿಗಳು ಬಹಳ ಕಡಮೆ. ಮುಕ್ಕಾಲು ಮೂರುವೀಸ ಪಾಲು ಜನ ಬ್ರಾಹ್ಮಣ ಮತಾವಲಂಬಿಗಳು. ನೂರಾರು ದೇವಸ್ಥಾನಗಳಿವೆ. ದಾರಿಯಲ್ಲಿ ಅನೇಕ ಧರ್ಮಶಾಲೆಗಳಿವೆ. ಇಲ್ಲಿ ಬಡಬಗ್ಗರಿಗೆ ಅನ್ನ ಪಾನಾದಿಗಳನ್ನೂ ಔಷಧಿಗಳನ್ನೂ ಕೊಡುತ್ತಾರೆ."

ಈ ಪ್ರವಾಸಕಥನಗಳು ದೇಶೀಯ ಸಾಹಿತ್ಯದಲ್ಲಿ ಅಪರೂಪವಾದ ದೇಶದ ಉದ್ಯಮಶಕ್ತಿ, ಹವಾಮಾನ. ಪ್ರವಾಸಿಗಳಿಗೆ. ಬಡವರಿಗೆ ಇದ್ದ ಸೌಲಭ್ಯ ವ್ಯವಸ್ಥೆ ಮೊದಲಾದವುಗಳ ಬಗ್ಗೆ ಬೆಳಕು ಚೆಲ್ಲುತ್ತವೆ. ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಲೋಹಶಾಸ್ತ್ರ ಮತ್ತು ಗಣಿ ಉದ್ಯಮ ಬೆಳೆದು ಬಂದಬಗ್ಗೆ ಇಲ್ಲಿ ಮಾಹಿತಿ ಇದೆ. ಅದೇ ಐರೋಪ್ಯರು ಆ ಕಾಲದಲ್ಲಿ ಗಣಿ ಉದ್ಯಮದಲ್ಲಿ ಇಷ್ಟು ಪ್ರಗತಿ ಸಾಧಿಸಿರಲಿಲ್ಲ. ದೆಹಲಿಯಲ್ಲಿರುವ ಚಂದ್ರಗುಪ್ತನ ಲೋಹ ಸ್ತಂಭವೂ ಇದಕ್ಕೆ ಸಾಕ್ಷಿಯಾಗಿದೆ. ಹೀಗೆ ಪ್ರವಾಸ ಸಾಹಿತ್ಯ ಸಾಂಸ್ಕೃತಿಕ ಮತ್ತು ಆರ್ಥಿಕ ಇತಿಹಾಸ ರಚನೆಗೆ ಅಮೂಲ್ಯ ಆಕರವಾಗಿದೆ.

ಭಾರತದಲ್ಲಿ 'ಸತಿ' ಪದ್ಧತಿ ಪ್ರಾಚೀನ ಕಾಲದಿಂದಲೂ ಆಚರಣೆಯಲ್ಲಿದೆ. ಆದರೆ ಅದರ ಬಗ್ಗೆ ಆಧಾರಭೂತ ಸಾಹಿತ್ಯ ದೇಶೀಯ ಆಕರಗಳಲ್ಲಿ ವಿರಳ. ಮಾಸ್ತಿಕಲ್ಲುಗಳು. ಶಾಸನಗಳು ಜನಪದ ಸಾಹಿತ್ಯವೂ ಆ ಬಗ್ಗೆ ನೀಡಿರುವ ಮಾಹಿತಿಯೊಂದಿಗೆ ನಾವು ವಿವಿಧ ವ್ಯಾಖ್ಯಾನಗಳನ್ನು ನೀಡುತ್ತಿದ್ದೇವೆ. ಭಾರತ ಕುರಿತ ವಿದೇಶೀ ಕಥನದಲ್ಲಿ ಈ ಬಗ್ಗೆ ಅಲ್ಲಲ್ಲೇ ಉಲ್ಲೇಖಗಳಿವೆ. ಪ್ರಾಚೀನ ಕಾಲದಿಂದ ಹಿಡಿದು ಇತ್ತೀಚಿನ ಶತಮಾನಗಳವರೆಗಿನ ಪ್ರವಾಸಿಗಳೂ ಈ ಸಂಗತಿಯನ್ನು ಕಂಡು ಅಥವಾ ಕೇಳಿ ಬರೆದಿದ್ದಾರೆ. ಭಾರತಕ್ಕೆ ಬರದಿದ್ದರೂ ಇಲ್ಲಿನ ವಿಷಯಗಳನ್ನು ಆಸಕ್ತಿಯಿಂದ ಕೇಳಿ ತಿಳಿದು ಬರೆದಿರುವ ಸ್ಟ್ರಾಬೋನ ವಿವರಣೆ ಹೀಗಿದೆ:

"ಕಥಾಯಿಯ ಜನರಲ್ಲಿ ಮತ್ತೊಂದು ವಿಶೇಷ ಪದ್ಧತಿಯಿದೆ. ಗಂಡನು ಹೆಂಡತಿಯನ್ನು ಹೆಂಡತಿ ಗಂಡನನ್ನು ಚುನಾಯಿಸಿಕೊಳ್ಳುತ್ತಾರೆ. ಗಂಡ ಸತ್ತರೆ ಹೆಂಡತಿಯರು ಚಿತೆಯಲ್ಲಿ ಬಿದ್ದು ಸಾಯುತ್ತಾರೆ. ಹೆಂಡತಿ ಕೆಲವು ವೇಳೆ ಪರಪುರುಷನನ್ನು ಪ್ರೇಮಿಸಿ ಕೈಹಿಡಿದ ಗಂಡನಿಗೆ ವಿಷಹಾಕಿ ಸಾಯಿಸಿಬಿಡಬಹುದೆಂಬ ಅಥವ ಅವನನ್ನು ಬಿಟ್ಟು ಓಡಿಹೋಗಬಹುದೆಂಬ ಅನುಮಾನಗಳೇ ಈ ಪದ್ಧತಿಗೆ ಕಾರಣ. ಗಂಡ ಸತ್ತಮೇಲೆ ತಾನು ಸಾಯಬೇಕಾದ ಕಟ್ಟಳೆಯಿರುವುದರಿಂದ ಹೆಂಡತಿ ಗಂಡನಿಗೆ ವಿಷಪಾನ ಮಾಡಿಸುವುದಕ್ಕೆ ಹೋಗುವುದಿಲ್ಲ." (ಸಂಪುಟ ೧; ಪುಟ ೬೨)

ಹದಿನೇಳನೇ ಶತಮಾನದ ಪ್ರಾರಂಭದಲ್ಲಿ ಬಂದ ಎಡ್ವರ್ಡ್ ಟೆರ್ರಿ ಇದೇ ವಿಷಯ ಕುರಿತು ಹೇಳುವುದೆಂದರೆ: "ಚಿಕ್ಕ ವಯಸ್ಸಿನಲ್ಲಿ ವಿಧವೆಯಾದವಳು ಮತ್ತೊಮ್ಮೆ ಮದುವೆಯಾಗುವಂತಿಲ್ಲ. ಆಕೆ ತಲೆ ಬೋಳಿಸಿಕೊಂಡು ಯಾರಿಗೂ ಬೇಡವಾದ ಪ್ರಾಣಿಯಂತೆ ಸಾಯುವ ತನಕ ಜೀವಿಸಬೇಕು. ಇಂಥ ಬಾಳಿಗಿಂತ ಸಾವೇ ಮೇಲೆಂದು ಅನೇಕ ಜನ ಸತ್ತ ಗಂಡನ ಜೊತೆ ಆತ್ಮಸಂತೋಷದಿಂದ ಅಗ್ನಿಯಲ್ಲಿ ಸಹಗಮನ ಮಾಡುತ್ತಾರೆ. ಪಾಪ! ಸುಖವಾಗಿ ಬಾಳಿ ಬದುಕ ಬೇಕಾದವಳಿಗೆ ಎಂಥ ಗತಿ!" (ಸಂಪುಟ ೩, ಪುಟ ೩೧೬)

ಇನ್ನು ಕೆಲವು ಪ್ರವಾಸಿಗರು 'ಸತಿ'ಯಾಗುವವಳು ಸಂತೋಷದಿಂದ ಸ್ವಇಚ್ಛೆಯಿಂದ ಆತ್ಮಾಹುತಿ ಮಾಡಿಕೊಳ್ಳುತ್ತಿದ್ದುದನ್ನು ಕಂಡಿದ್ದಾರೆ. ಸತ್ತವನ ಕಿರಿಯ ವಯಸ್ಸಿನ ಪತ್ನಿಯರನ್ನು ಬಲಾತ್ಕಾರದಿಂದ ಚಿತೆಗೆ ನೂಕಿ ಸುಡುವುದನ್ನು ಕಂಡಿದ್ದಾರೆ. 'ಸತಿ' ಪದ್ಧತಿ ಬಗ್ಗೆ ಸಂಶೋಧನೆ ಮಾಡುವವರಿಗೆ ಮತ್ತು ಬರೆಯುವವರಿಗೆ ಹಾಗೂ ಅಭ್ಯಾಸ ಮಾಡುವವರಿಗೆ ಇದು ಎಷ್ಟೊಂದು ಉಪಯುಕ್ತ ಆಕರ!

ರಾಜಕೀಯ ಇತಿಹಾಸದ ಬಗ್ಗೆಯೂ 'ಪ್ರವಾಸಿ ಕಂಡ ಇಂಡಿಯಾ' ಅಮೂಲ್ಯ ಆಕರ ಗ್ರಂಥವಾಗಿದೆ. ವಿಜಯನಗರದಂತಹ ಸಾಮ್ರಾಜ್ಯದ ವೈಭವದ ನೆನಪುಗಳನ್ನು ಕಾಣಬೇಕಾದರೆ ಈ ಪ್ರವಾಸ ಕಥನಗಳಿಗೇ ಶರಣು ಹೋಗಬೇಕು. ಪರ್ಷಿಯಾದಿಂದ ಬಂದ ಅಬ್ದುಲ್ ರಜಾಕನು ವಿಜಯನಗರ ರಾಜಧಾನಿಯನ್ನು ವರ್ಣಿಸುವ ರೀತಿ ನೋಡೋಣ: "ಬಿಜನಗರದಂಥ ನಗರವನ್ನು ಕಣ್ಣು ಕಂಡಿಲ್ಲ. ಕಿವಿ ಕೇಳಿಲ್ಲ. ಈ ನಗರವನ್ನು ಹೇಗೆ ನಿರ್ಮಿಸಿದ್ದಾರೆಂದರೆ ಏಳುದುರ್ಗಗಳೂ ಏಳು ಕೋಟೆಗಳೂ

ಒಂದನ್ನೊಂದು ಆವರಿಸಿಕೊಂಡಿವೆ....ಮೂರನೆ ಕೋಟೆಯಿಂದ ಏಳನೆಯ ಕೋಟೆಯವರೆಗೆ ಅಸಂಖ್ಯಾತ ಜನಗಳನ್ನೂ ಅನೇಕ ಅಂಗಡಿಗಳನ್ನೂ, ಅಂಗಡಿ ಬೀದಿಯನ್ನೂ ನೋಡಬಹುದು...ಪ್ರತಿಯೊಂದು ಅಂಗಡಿಯ ಸಾಲಿನ ಮೇಲುಗಡೆ ಭವ್ಯವಾದ ಉಪ್ಪರಿಗೆಯುಳ್ಳ ಕಮಾನು ಹಾದಿ ಇದೆ. ಆದರೆ ರಾಯನ ಅರಮನೆಯಲ್ಲಿರುವ ಸಭಾಮಂಟಪವು ಇದೆಲ್ಲಕ್ಕಿಂತಲೂ ಎತ್ತರವಾಗಿದೆ.

ಅಂಗಡಿ ಬೀದಿಗಳು ಬಹು ಉದ್ದವಾಗಿಯೂ ಅಗಲವಾಗಿಯೂ ಇವೆ. ಗುಲಾಬಿ ವ್ಯಾಪಾರಿಗಳು ತಮ್ಮ ಅಂಗಡಿಗಳ ಮುಂದೆ ಎತ್ತರವಾದ ವೇದಿಕೆಗಳನ್ನು ರಚಿಸಿಕೊಂಡಿದ್ದಾರೆ. ಈ ವೇದಿಕೆಗಳ ಎರಡೂ ಕಡೆ ಹೂಗಳನ್ನು ರಾಶಿಹಾಕಿ ವ್ಯಾಪಾರ ಮಾಡುತ್ತಾರೆ....ಬೇರೆ ಬೇರೆ ಕಸಬಿಗೆ ಸೇರಿದ ವರ್ತಕರ ಅಂಗಡಿಗಳು ಬೇರೆ ಬೇರೆ ಇವೆ. ರತ್ನಪಡಿ ವ್ಯಾಪಾರಿಗಳು ಅಂಗಡಿ ಬೀದಿಗಳಲ್ಲಿ ಬಹಿರಂಗವಾಗಿ ವಜ್ರ ವೈಡೂರ್ಯಗಳನ್ನೂ ಮುತ್ತುಗಳನ್ನೂ ಮಾರುತ್ತಾರೆ.”

ಮೊಗಲ್ ಸಾಮ್ರಾಜ್ಯದ ಬಗ್ಗೆ ವಿಪುಲ ವರ್ಣನೆ ಇರುವ ಈ ಪ್ರವಾಸಕಥನದಲ್ಲಿ ರಾಜಕೀಯ ಚಿತ್ರಣವೂ ಇದೆ. ಬಪ್‌ಟಿಸ್ಟ್ ಟಾವರ್ನ್ನೀಯ ಕಥನದಲ್ಲಿ ಔರಂಗಜೇಬನ ಸಿಂಹಾಸನಾರೋಹಣದ ಪ್ರಸಂಗ ಈರೀತಿ ವರ್ಣಿತವಾಗಿದೆ:

“ಔರಂಗಜೇಬ ಮೊಗಲ್ ಸಿಂಹಾಸನವನ್ನೇರಿದ ಸುದ್ದಿ ಏಷ್ಯಾದಲ್ಲೆಲ್ಲಾ ಹಬ್ಬಿತು. ನಾನಾಕಡೆಗಳಿಂದ ರಾಯಭಾರಿಗಳು ಜಹನಾಬಾದಿಗೆ ಬರಲಾರಂಭಿಸಿದರು. ಉಸ್ಬೆಕ್ ಟಾರ್ಟರರು, ಮೆಕ್ಕಾದ ಷರೀಫ್, ಬಸ್ರಾದ ದೊರೆ, ಬಸ್ಸೋರದ ರಾಜ, ಇಥಿಯೋಪಿಯಾದ ಚಕ್ರವರ್ತಿ—ಇವರೆಲ್ಲ ತಮ್ಮ ರಾಯಭಾರಿಗಳನ್ನೂ ಕಳುಹಿಸಿ, ಮೊಗಲ್ ಚಕ್ರವರ್ತಿಯ ಸ್ನೇಹ ಸಂಬಂಧಗಳನ್ನು ಕೋರಿದರು. ಡಚ್ಚರು ಅವರ ಸೂರತ್ ಫ್ಯಾಕ್ಟರಿಯಲ್ಲಿದ್ದ ಅಡ್ರಿಕನ್ ಎಂಬುವವನನ್ನು ಕಳುಹಿಸಿದರು. ಇವರಿಗೆಲ್ಲಾ ಅದ್ದೂರಿಯ ಸ್ವಾಗತ.”... (ಸಂಪುಟ ೫. ಪುಟ ೪೧೨)

ನಿಜವಾದ ಇತಿಹಾಸಕಾರರು, ಆಸ್ಥಾನದ ಕಥಾಕಾರರು ತಿಳಿಸಲು ಮತ್ತು ಬರೆಯಲು ಹಿಂಜರಿಯುತ್ತಿದ್ದ ಅನೇಕ ಸಂಗತಿಗಳನ್ನು ಪ್ರವಾಸಿಗರು, ರಾಯಭಾರಿಗಳು ತಮ್ಮ ಕಥನಗಳಲ್ಲಿ ಬರೆದಿಟ್ಟಿದ್ದಾರೆ. ಇದರಿಂದ ಅನೇಕ ರಹಸ್ಯ ಮತ್ತು ಆಂತರಿಕ ವಿಷಯಗಳ ಬಗ್ಗೆ ಇತಿಹಾಸಕಾರರಿಗೆ ಸುಳಿವು ಸಿಗುತ್ತದೆ. ಗೇರುಸೊಪ್ಪೆ ರಾಣಿಯ ಬಗ್ಗೆ ಪಿಯತ್ರೊದೆಲ್ಲಾ ವಲ್ಲೆ ಹೇಳುವ ಕುಹುಮಾತು ಹೀಗಿದೆ: “ಇಂಡಿಯಾದ ಸಮುದ್ರ ತೀರದ ಈ ರಾಜ್ಯದಲ್ಲಿ ಆಗಾಗ್ಗೆ ಹೆಂಗಸರದೇ ರಾಜ್ಯಭಾರ .... ಗೇರುಸೊಪ್ಪೆಯ ಕೊನೆಯ ರಾಣಿ ಒಬ್ಬ ಸಾಮಾನ್ಯನಲ್ಲಿ ಅನುರಕ್ತಳಾಗಿ ಆತನಿಗೆ ತನ್ನ ಇಡೀ ರಾಜ್ಯವನ್ನೇ ಬಿಟ್ಟುಕೊಟ್ಟಳು. ಆಕೆ ಸಾಮಾನ್ಯನನ್ನು ಮೋಹಿಸಿದ್ದು ಮನೆತನಕ್ಕೆ ಕೆಟ್ಟ ಹೆಸರು ತಂದಿತು ನಿಜ. ಆದರೆ ತಾನು ಒಬ್ಬನನ್ನು ಒಲಿದುದು ತಪ್ಪೇನಾಗಿರಲಿಲ್ಲ. ಏಕೆಂದರೆ ಈ ನಾಡುಗಳಲ್ಲಿ ಇಂಥ ರಾಣಿಯರು ತಮ್ಮ ಇಷ್ಟದಂತೆ ಒಬ್ಬನನ್ನು ಅಥವಾ ಹೆಚ್ಚು ಗಂಡಂದಿರನ್ನು ಒಲಿಯುವುದು ಧರ್ಮವೆಂದು ಪರಿಗಣಿಸಲ್ಪಡುತ್ತದೆ. ಆದರೆ ರಾಣಿ ಮೆಚ್ಚಿದ ಆ ಸಾಮಾನ್ಯ ಮನುಷ್ಯ ತನ್ನ ಹುಟ್ಟಿಗೆ ತಕ್ಕ ರೀತಿಯಲ್ಲಿ ವರ್ತಿಸಿದ. ರಾಣಿಯ ಒಲುಮೆಗೆ ಕೃತಜ್ಞನಾಗಿರುವ ಬದಲು, ಆಕೆಯ ಮೇಲೆಯೇ ದಂಗೆ ಎದ್ದು ರಾಜ್ಯವನ್ನು ಆಕ್ರಮಿಸುವ ಸಾಹಸ ನಡೆಸಿದ....ತನಗೆ ದ್ರೋಹ ಬಗೆದ ಆತನ ಮೇಲೆ ಸೇಡು ತೀರಿಸಿಕೊಳ್ಳಲು ರಾಣಿ ಪೋರ್ಚುಗಲರ ಮರೆಹೊಕ್ಕಳು.” (ಸಂಪುಟ ೯. ಪುಟ ೨೧೭)

ಅಕ್ಬರನಿಗೆ ಸಂಬಂಧಿಸಿದ ಮನೂಚಿ ತಿಳಿಸುವ ಇನ್ನೊಂದು ಪ್ರಕರಣ ಹೀಗಿದೆ:

“ಅಕ್ಬರನು ತನಗಾಗದವರಿಗೆ ವಿಷಕೊಟ್ಟು ಸಾಯಿಸುತ್ತಿದ್ದ. ಶ್ರೀಮಂತ ಸರದಾರರ ಮೇಲೆ ಪ್ರೀತಿ ವಿಶ್ವಾಸ ತೋರಿಸುವಂತೆ ನಟಿಸಿ, ಅವರಿಗೆ ಬಹುಮಾನವಾಗಿ ಕೊಡುವ ನಿಲುವಂಗಿಗೆ ವಿಷವನ್ನು ಲೇಪಿಸಿ ಕೊಡುತ್ತಿದ್ದ. ಉಡುಪನ್ನು ತೊಟ್ಟ ಶ್ರೀಮಂತ ಸರದಾರರು ವಿಷ ಮೈಗೇರಿ ಸತ್ತುಹೋಗುತ್ತಿದ್ದರು. ಹೀಗೆ ಅಕ್ಬರ್ ಅನೇಕ ರಾಜಕುಮಾರರನ್ನು ಕೊಲ್ಲಿಸಿದ.

ದೊಡ್ಡದೊಡ್ಡವರನ್ನು ಈ ರೀತಿ ಕೊನೆಗಾಣಿಸುವ ಅಕ್ಬರನ ಕ್ರಮವನ್ನು ಅವನ ಸಂತತಿಯವರೂ ಅನುಸರಿಸಿಕೊಂಡು ಬಂದಿದ್ದಾರೆ...ತಮಗೆ ಬೇಕಾದವರಿಗೆ ವೀಳೆಯ ಕೊಡುವ ಪದ್ಧತಿ ಈಗಲೂ

ಇವೆಯಂತೆ. ಅಕ್ಬರನ ಬಳಿ ಒಂದು ವೀಳ್ಯದ ಪೆಟ್ಟಿಗೆ ಇರುತ್ತಿತ್ತು. ಅದರಲ್ಲಿ ಮೂರು ಖಾನೆಗಳಿದ್ದುವು. ಒಂದರಲ್ಲಿ ವೀಳ್ಯದೆಲೆಗಳೂ ಇನ್ನೊಂದರಲ್ಲಿ ಜೀರ್ಣವರ್ಧಕ ಗುಳಿಗೆಗಳೂ ಮೂರನೆಯದರಲ್ಲಿ ವಿಷಪೂರಿತ ಗುಳಿಗೆಗಳೂ ಇರುತ್ತಿದ್ದುವು. ತನಗೆ ಆಗದವರಿಗೆ ವೀಳ್ಯಕೊಡುವಾಗ ವಿಷಪೂರಿತ ಗುಳಿಗೆಗಳನ್ನು ಕೊಟ್ಟುಬಿಡುತ್ತಿದ್ದ. ಹೀಗಿರುವಲ್ಲಿ ಒಮ್ಮೆ ಆತ ವಿಷಪೂರಿತವಾದ ವೀಳ್ಯವನ್ನು ಕಾಣದೇ ತಾನೇ ಸೇವಿಸಿಬಿಟ್ಟ. ಅನ್ಯರನ್ನು ನಾಶಮಾಡಲು ಹೋಗಿ ತನ್ನ ಕೈಯಿಂದಲೇ ವಿಷಹಾಕಿಕೊಂಡು ಸತ್ತ." (ಸಂಪುಟ ೬; ಪುಟ ೭೦)

ಮನೂಚಿಯೋ ಷಾಜಹಾನನ ರಾಜನೀತಿಯ ಬಗ್ಗೆ ಒಂದು ಪ್ರಸಂಗವನ್ನು ಹೀಗೆ ಹೇಳುತ್ತಾನೆ:

"ಷಾಜಹಾನ ತಪ್ಪು ಮಾಡಿದವರಿಗೆಲ್ಲಾ ಶಿಕ್ಷೆ ವಿಧಿಸಿದರೂ ವಜೀರ್‌ಖಾನ ಎಂಬ ಒಬ್ಬ ಮಹಾ ಪರೋಪಕಾರನ ಗೋಜಿಗೆ ಹೋಗುತ್ತಿರಲಿಲ್ಲ. ದೊರೆ ಅನೇಕ ಬಾರಿ ಬೆಳಗಿನ ವೇಳೆ ಗಾಳಿ ಸಂಚಾರಕ್ಕೆಂದು ಹೊರಟು ತನ್ನ ತೋಟದಲ್ಲಿ ಅಪ್ತಾಪ್ತ ಆಳುಕಾಳುಗಳೊಡನೆ ಸೇರಿ ಹಣ್ಣುಗಳನ್ನು ಕೀಳುವ ಅಭ್ಯಾಸ ಇಟ್ಟುಕೊಂಡಿದ್ದ. ಒಂದು ಸಂದರ್ಭದಲ್ಲಿ ದೊರೆ ಕಿತ್ತ ಹಣ್ಣುಗಳನ್ನು ತನ್ನ ಅಚ್ಚುಮೆಚ್ಚಿನ ಸೇವಕರಲ್ಲಿ ಒಬ್ಬನಾದ ಫಿದಯ್‌ಖಾನನಿಗೆ ಕೊಟ್ಟ. ಅರಮನೆಗೆ ಹೋದಮೇಲೆ ದೊರೆ ಹಣ್ಣುಗಳನ್ನು ಕೇಳಿದ. ಹಣ್ಣುಗಳನ್ನು ತನಗೆ ಕೊಡಲೇ ಇಲ್ಲವೆಂದು ಫಿದಯ್‌ಖಾನ್ ಹೇಳಿದ. ದೊರೆಗೆ ಸಿಟ್ಟು ಬಂತು. ಆಗ ಫಿದಯ್‌ಖಾನ್. 'ಮಹಾಸ್ವಾಮಿಯವರು ನಾನು ಮಾಡಿದ ಈ ಸಣ್ಣ ಕಳ್ಳತನಕ್ಕೆ ಇಷ್ಟು ಸಿಟ್ಟಾಗುತ್ತಿದ್ದೀರಿ. ಆದರೆ ವಜೀರ್‌ಖಾನ್ ಪ್ರತಿದಿನ ಮಾಡುವ ೫೦.೦೦೦ ರೂಪಾಯಿಗಳ ದೊಡ್ಡ ಕಳ್ಳತನವನ್ನು ಕಂಡು ಕಣ್ಣುಮುಚ್ಚಿಕೊಂಡಿರುವಿರಲ್ಲ!' ಎಂದು ತಿಳಿಸಿದ.

ಆಗ ಷಾಜಹಾನ. 'ಅದು ನನಗೆ ಗೊತ್ತು; ಶಿಕ್ಷಿಸಬೇಕೆಂದು ಮನಸ್ಸಾಗುತ್ತದೆ. ಆದರೆ ನಮಗೆ ಅನುಕೂಲವಾಗುವುದಿದ್ದರೆ ಕೆಲವೊಮ್ಮೆ ಕಳ್ಳನಿಗೆ ಶಿಕ್ಷೆ ವಿಧಿಸುವುದು ಸಹ ಸೂಕ್ತವಲ್ಲ' ಎಂದು ಹೇಳಿದ.

ಷಾಜಹಾನನ ಈ ಅಭಿಮತ ನಮ್ಮ ಬಹುತೇಕ ರಾಜರ. ಅಧಿಕಾರಸ್ಥರ ಧೋರಣೆಗೆ ದಿಕ್ಸೂಚಿಯಲ್ಲವೆ? ಸಿಂಹಾಸನದ ಸುತ್ತ ಬಳಿಯುವರಂತೆಯೇ ಕೆಟ್ಟವರಿರುವುದೂ ಒಂದು ಅನಿವಾರ್ಯ ಪರಿಸ್ಥಿತಿಯಂತೆ ತೋರುತ್ತದೆ. ಈ ಬಗೆಯ ಸಾವಿರಾರು ರಾಜಕೀಯ ಅಂಶಗಳು ಈ ಕಥನದಲ್ಲಿ ಕಂಡು ಬರುತ್ತವೆ. ಇವು ಓದುಗರಿಗೆ ಮನರಂಜನೆ ನೀಡುವುದರ ಜೊತೆಗೆ ಗತಕಾಲದ ಸ್ಥಿತಿಗತಿಗಳ ಬಗ್ಗೆ ಸ್ಥೂಲ ಕಲ್ಪನೆ ಮೂಡಿಸುತ್ತವೆ.

ವಿವಿಧ ಕಾಲದ ಜನರ ವೇಷಭೂಷಣಗಳ ಬಗ್ಗೆಯೂ ಕೆಲವು ಪ್ರವಾಸಿಗರು ಮನನಾಟುವಂತೆ ಮತ್ತು ಸ್ಪಷ್ಟ ಚಿತ್ರ ಮೂಡುವಂತೆ ವರ್ಣನೆ ಮಾಡುತ್ತಾರೆ. ದುಆರ್ತೆ ಬಾರ್ಬೋಸ ಸ್ತ್ರೀಯರ ಉಡುಪು, ಶೃಂಗಾರದ ಬಗ್ಗೆ ನೀಡುವ ವರ್ಣನೆ ನೋಡೋಣ:

"ಸ್ತ್ರೀಯರು ಆರು ಗಜ ಉದ್ದದ ನವುರಾದ ರೇಷ್ಮೆ ಅಥವಾ ಹತ್ತಿ ಬಟ್ಟೆಯ ಬಣ್ಣ ಬಣ್ಣದ ಸೀರೆಗಳನ್ನು ಉಡುತ್ತಾರೆ. ಸೀರೆಯ ಒಂದು ಭಾಗವನ್ನೂ ಸೊಂಟದಿಂದ ಕೆಳಕ್ಕೆ ಉಟ್ಟು. ಮತ್ತೊಂದು ಭಾಗವನ್ನು ಎದೆಯ ಮೇಲೂ ಭುಜದ ಮೇಲೂ ಬರುವಂತೆ ಹಾಕಿಕೊಳ್ಳುತ್ತಾರೆ. ಹೀಗೆ ಉಟ್ಟಾಗ ಒಂದು ತೋಳು ಮತ್ತು ಒಂದು ಭುಜ ಮಾತ್ರ ಕಾಣುತ್ತವೆ. ಕಸೂತಿ ಹಾಕಿದ ಗಿಲೀಟಿನ ಚರ್ಮದ ಪಾದರಕ್ಷೆಗಳನ್ನು ಧರಿಸುತ್ತಾರೆ. ತಲೆಯನ್ನು ಮುಚ್ಚಿಕೊಳ್ಳುವುದಿಲ್ಲ. ಕೂದಲನ್ನು ಬಾಚಿ. ಮುಡಿ ಕಟ್ಟಿ ಸುವಾಸನೆಯ ಹೂ ಮುಡಿಯುತ್ತಾರೆ. ಮೂಗಿಗೆ ಒಂದು ಕಡೆ ತೂತುಮಾಡಿ ಮುತ್ತಿನ ಅಥವಾ ಹರಳಿನ ತೂಗು ಮೂಗುತಿಯನ್ನು ಧರಿಸುತ್ತಾರೆ. ಕಿವಿಗಳನ್ನು ಚುಚ್ಚಿಸಿಕೊಂಡು ಓಲೆ ಮುಂತಾದ ಅನೇಕ ಆಭರಣಗಳನ್ನು ಧರಿಸುತ್ತಾರೆ...ಚಿನ್ನ. ವಜ್ರ, ವೈಢೂರ್ಯ. ಹವಳ ಮುಂತಾದವುಗಳಿಂದ ಮಾಡಿದ ಕೊರಳು ಸರಗಳನ್ನೂ, ಪದಕಗಳನ್ನೂ. ತೋಳುಬಂದಿಗಳನ್ನೂ. ಕೈಬಳೆಗಳನ್ನೂ ತೊಡುತ್ತಾರೆ. ತೋಳುಗಳಿಗೆ ಪೋಣಿಸಿದ ಹವಳಗಳನ್ನೂ ಕಟ್ಟಿಕೊಳ್ಳುತ್ತಾರೆ. ...ವಜ್ರ ವೈಢೂರ್ಯಗಳಿಂದ ಅಲಂಕೃತವಾದ ಡಾಬುಗಳನ್ನು ತೊಡುತ್ತಾರೆ. ಕಾಲಿಗೆ ಚಿನ್ನದ ಬಳೆ ಮತ್ತು ಕಾಲುಂಗುರಗಳನ್ನು ಹಾಕಿಕೊಳ್ಳುತ್ತಾರೆ." (ಸಂಪುಟ ೨, ಪುಟ ೨೯೨–೨೯೩)

ಇದು ಹದಿನಾರನೆ ಶತಮಾನದಲ್ಲಿ ವಿಜಯನಗರದ ಶ್ರೀಮಂತ ಸ್ತ್ರೀಯರು ಧರಿಸುತ್ತಿದ್ದ ವೇಷ ಭೂಷಣಗಳ, ಆಭರಣಗಳ ವರ್ಣನೆ. ಇಂಥ ವರ್ಣನೆಗಳು ಒಂದು ದೇಶದ ಸಾಂಸ್ಕೃತಿಕ ಅಧ್ಯಯನಕ್ಕೆ ಒಂದು ಜನಾಂಗದ ಶೃಂಗಾರ ಪ್ರಿಯತೆಯನ್ನು ತಿಳಿಯಲು, ಆ ಕಾಲದ ಶ್ರೀಮಂತ ಮಹಿಳೆಯರ ಅಭಿರುಚಿಯನ್ನರಿಯಲು, ಜನಪದ ಅಧ್ಯಯನ ಮಾಡಲು ಇತ್ಯಾದಿ ಉದ್ದೇಶಗಳಿಗೆ ಉಪಯುಕ್ತವೂ ವಿರಳ ಆಧಾರವೂ ಆಗಿದೆ.

'ಪ್ರವಾಸಿ ಕಂಡ ಇಂಡಿಯಾ' ಸಾವಿರಾರು ಪುಟಗಳ ಬೃಹದ್ಗ್ರಂಥ. ಇಲ್ಲಿ ಉದ್ಧರಿಸಿರುವ ಕೆಲವು ಭಾಗಗಳು ಸಾಗರದಲ್ಲಿ ಬೊಗಸೆ ನೀರು ತೆಗೆದಂತೆ. ಅಲ್ಲಿ ಯಾವ ಮಾಹಿತಿಗಳಿವೆ, ಯಾವುದು ಇಲ್ಲ ಎಂದು ವರ್ಗೀಕರಿಸಿ ಹೇಳುವುದು ಕಷ್ಟ. ಇದು ವಿಶ್ವಕೋಶದಂತೆ ವೈವಿಧ್ಯವೂ ವ್ಯಾಪಕವೂ ಆದ ವಿಷಯಗಳನ್ನೊಳಗೊಂಡಿದೆ. ಗತಕಾಲದ ಹಣಕಾಸು ವ್ಯವಸ್ಥೆಯ ಬಗ್ಗೆ, ಆಹಾರಧಾನ್ಯಗಳ ಬೆಲೆ ಮತ್ತು ವಿನಿಮಯಗಳ ಬಗ್ಗೆ, ವಿವಿಧ ವ್ಯಾಪಾರ ವಸ್ತುಗಳ ಮತ್ತು ಕರಾರುಗಳ ಬಗ್ಗೆ, ಊಟ ಉಪಚಾರಗಳ ಬಗ್ಗೆ, ವಿವಿಧ ತೆರಿಗೆಗಳ ಬಗ್ಗೆ, ಸ್ಥಳೀಯ ಧಾರ್ಮಿಕ ವಿವಾದಗಳ ಬಗ್ಗೆ, ರಹದಾರಿ ನಿಯಮಗಳ ಬಗ್ಗೆ— ಹೀಗೆ ಹತ್ತು ಹಲವು ಸಂಗತಿಗಳ ಬಗ್ಗೆ ಮಾಹಿತಿಗಳಿವೆ. ಸಂಶೋಧಕರು, ವಾಚನಾಸಕ್ತರು ಈ ಗ್ರಂಥವನ್ನು ಓದಿದಾಗ ಹಾಗೂ ಅಧ್ಯಯನ ಮಾಡಿದಾಗ ಮಾತ್ರ ಅದರ ಸಮೃದ್ಧತೆ ಮತ್ತು ಮಹತ್ವ ಅರಿವಾಗಬಲ್ಲದು. ಇಂದು ನಾವು ಊಹಿಸಲಾಗದ ಮತ್ತು ನಮ್ಮ ಇಂದಿನ ತೀರ ಅಪರಿಚಿತವಾದ ಹಲವಾರು ಘಟನೆಗಳು, ಸಂಗತಿಗಳು ಅಲ್ಲಲ್ಲಿ ಕಂಡುಬರುತ್ತವೆ. ಉದಾಹರಣೆಗೆ ದಕ್ಷಿಣ ಭಾರತದ ಕೆಲವೆಡೆ ವಿವಾಹವಾದ ಹೆಣ್ಣಿನ ಕನ್ಯತನ ಕಳೆಯಲು ಬೇರೆಯವರನ್ನು—ಅದರಲ್ಲೂ ವಿದೇಶೀಯರನ್ನು ಆಹ್ವಾನಿಸುತ್ತಿದ್ದ ಪದ್ಧತಿ ಇತ್ತು. ಅದೇ ಮೊದಲ ರಾತ್ರಿ ಕಳೆದ ನಂತರ ಆ ಹೆಣ್ಣು ಪತಿಯನ್ನು ಬಿಟ್ಟು ಇತರರೊಡನೆ ಲೈಂಗಿಕ ಸಂಪರ್ಕ ಹೊಂದಿದರೆ ಅವಳು ತೀವ್ರ ಶಿಕ್ಷೆಗೆ ಗುರಿಯಾಗುತ್ತಿದ್ದಳು. ಇಂತಹ ಪದ್ಧತಿ ಈಗಲೂ ಕೆಲವು ಪಂಗಡಗಳ ಆಚಾರಗಳಲ್ಲಿ ಇರಬಹುದಾದರೂ ಭಾರತೀಯ ಸಮಾಜದಲ್ಲಿ ಬಹುಮಟ್ಟಿಗೆ ಇಲ್ಲವಾಗಿದೆ. ಇಂತಹ ಹಲವಾರು ಪ್ರಕರಣಗಳು ಸಮಾಜಶಾಸ್ತ್ರಜ್ಞರಿಗೆ, ಮನಶ್ಶಾಸ್ತ್ರಜ್ಞರಿಗೆ ಉಪಯುಕ್ತ ಮಾಹಿತಿಗಳಾಗಬಲ್ಲವು.

ಈ ಕೃತಿ ಒಂದು ಅಸಾಧಾರಣ ಸಾಧನೆ ಎಂಬ ಅಭಿಪ್ರಾಯ ಹಲವಾರು ವಿದ್ವಾಂಸರದು. ಇತರ ಭಾರತೀಯ ಭಾಷೆಗಳಲ್ಲಿ ಈ ಬಗೆಯ ಕೆಲಸ ನಡೆದಿಲ್ಲವೆಂದೇ ಹೇಳಬಹುದು. ಸಮಗ್ರ ಪ್ರವಾಸ ಕಥನ ಸಾಮಾನ್ಯ ಓದುಗರಿಂದ ಹಿಡಿದು ವಿದ್ವಾಂಸರು, ಸಂಶೋಧಕರವರೆಗೆ ಉಪಯುಕ್ತವಾಗುವಂತೆ ಇದನ್ನು ರೂಪಿಸಲಾಗಿದೆ. ಇಂಗ್ಲಿಷ್ ಭಾಷೆಯಲ್ಲಿ ಮತ್ತಿತರ ಭಾಷೆಗಳಲ್ಲಿರುವ ಇವುಗಳ ಮೂಲ ಅನುವಾದಗಳನ್ನು ವಾಚಕರು ಒಂದೆಡೆ ಪಡೆಯುವುದು ಸುಲಭವಲ್ಲ. ಆದ್ದರಿಂದ ಈ ಗ್ರಂಥ ಕನ್ನಡ ವಾಚಕರಿಗೆ ಇಡೀ ಪ್ರವಾಸ ಕಥನದ ಸಾರಸಂಗ್ರಹವನ್ನೇ ಹಿಡಿದಿಟ್ಟಿರುವ ಅಮೂಲ್ಯ ಆಕರ ಕೃತಿ. ಇದರ ಅನುವಾದ ಅಥವಾ ಸಂಗ್ರಹ ಅನುವಾದಕಾರ್ಯವೂ ಬಹು ಸಮರ್ಪಕವಾಗಿ ನಡೆದಿದೆ. ಯಾವುದೇ ಅನುವಾದಗಳಿಗೂ ಇರಬಹುದಾದ ಪರಿಮಿತಿಗಳ ದೃಷ್ಟಿಯಿಂದ ನೋಡಿದಾಗ ಲೇಖಕರು ತುಂಬಾ ಶ್ರಮವಹಿಸಿ, ಶ್ರದ್ಧೆಯಿಂದ ಉತ್ತಮ ಗುಣ ಮೌಲ್ಯದೊಡನೆ ಈ ಕೃತಿಯನ್ನು ಕನ್ನಡಿಗರಿಗೆ ನೀಡಿದ್ದಾರೆ. ಇದಕ್ಕೆ ಎಣೆಯಾದ ಇನ್ನೊಂದು ಗಹನ ಕೆಲಸ—ಎಪಿಗ್ರಾಫಿಯ ಕರ್ನಾಟಿಕ ಪ್ರಕಟಣೆ ಹೊರತು ಪಡಿಸಿ—ಇತಿಹಾಸ ಕ್ಷೇತ್ರದಲ್ಲಿ ಕನ್ನಡದಲ್ಲಿ ನಡೆದಿರುವುದು ಕಂಡು ಬರುವುದಿಲ್ಲ.

ಕನ್ನಡಸಾಹಿತ್ಯ ಸಂಪತ್ತು ಹಲವು ಮುಖಗಳಲ್ಲಿ ಬೆಳೆಯುತ್ತಿರುವ ಈ ಪರಿವರ್ತನ ಕಾಲದಲ್ಲಿ "ಪ್ರವಾಸಿ ಕಂಡ ಇಂಡಿಯಾ" ಒಂದು ದೊಡ್ಡ ನಿಧಿ. ಬಹುಮುಖ ಪ್ರತಿಭೆಯ ಶ್ರೀ ಎಚ್. ಎಲ್. ನಾಗೇಗೌಡರು ಇನ್ನೂ ಕೆಲವು ಸಾಹಿತ್ಯ ಪ್ರಕಾರಗಳಲ್ಲಿ ಕೆಲಸ ಮಾಡಿದ್ದಾರೆ. ಅವರ ಇತರ ಕೃತಿಗಳು ಕಾಲದ ಪ್ರವಾಹದೆದುರು ನಿಲ್ಲಲಿ ಬಿಡಲಿ ಈ ಕೃತಿಯಂತೂ ಕಲ್ಲುಬೆಟ್ಟದಂತೆ ಎಲ್ಲ ಸೆಳೆತಗಳನ್ನೂ ಎದುರಿಸಿ ನಿಲ್ಲುವ ಮಹತ್ಕೃತಿಯಾಗಿರುವುದು ನಿಸ್ಸಂದೇಹ. ಈ ಕೃತಿಯ ಸಾಹಿತ್ಯಿಕ ಮತ್ತು ಕಲಾ ಲಕ್ಷಣಗಳು ಉನ್ನತವಾದವು. ಆದರೆ ಅವುಗಳನ್ನೆಲ್ಲ ಮೀರಿ ಎದ್ದುಕಾಣುವುದು ಅದರ ಆಕರ ಗ್ರಂಥ ಸ್ವರೂಪ.

ಬಾ. ರಾ. ಗೋಪಾಲ್

ಕೂಗುವ ಕಲ್ಲುಗಳು

ಶಾಸನ ಸಾಹಿತ್ಯ ಎಂಬುದು ಕನ್ನಡ ಸಾಹಿತ್ಯದ ಒಂದು ಪ್ರಾಕಾರ. ಕನ್ನಡ ಸಾಹಿತ್ಯ ಕೃತಿಗಳಿಗಿಂತ ಪೂರ್ವದ ಶಾಸನಸಾಹಿತ್ಯ ಲಭ್ಯವಿದೆ. ಅವರಲ್ಲಿಯೂ ಹಲವಾರು ಶಿಲಾಲೇಖಗಳು ಪದ್ಯರೂಪದಲ್ಲಿದ್ದು ಸಾಹಿತ್ಯಕ ಲಕ್ಷಣಗಳನ್ನು ಹೊಂದಿವೆ. ಶಾಸನ ಸಾಹಿತ್ಯಕ್ಕೂ ಮೊದಲೇ ಶಿಷ್ಟ ಸಾಹಿತ್ಯ ಹುಟ್ಟಿತ್ತು ಎಂಬ ಅಭಿಪ್ರಾಯ ಒಪ್ಪಬಹುದಾದದ್ದೇ. ಆದರೆ ಕನ್ನಡ ಸಾಹಿತ್ಯದ ಮೊದಲ ಮಜಲುಗಳನ್ನು ಅತಿ ಪ್ರಾಚೀನ ಶಾಸನ ಸಾಹಿತ್ಯದಲ್ಲಿ ಕಾಣಬಹುದು.

ವಾಸ್ತವಿಕವಾಗಿ ಶಾಸನ ಎಂಬುದು ಒಂದು ದಾಖಲೆಪತ್ರ. ಅದು ರಾಜಾಜ್ಞೆಯಾಗಿರಬಹುದು. ದಾನ ಶಾಸನವಾಗಿರಬಹುದು. ಸ್ಮಾರಕ ಶಾಸನವಾಗಿರಬಹುದು. ಕ್ರಯ ಪತ್ರವೂ ಆಗಿರಬಹುದು. ಆದರೂ ಕರ್ನಾಟಕದ ಸಾವಿರಾರು ಶಿಲಾ ಶಾಸನಗಳಲ್ಲಿ ಉತ್ತಮ ಮಟ್ಟದ ಸಾಹಿತ್ಯವನ್ನು ನಾವು ಕಾಣುತ್ತೇವೆ. ಶಿಷ್ಟ ಸಾಹಿತ್ಯದೊಂದಿಗೆ ಹೋಲಿಸಿದಾಗ ಇವು ಅಷ್ಟು ಪ್ರೌಢವೆನಿಸಲಾರವು. ಶಾಸನಗಳಿಗೆ ಹಲವಾರು ಮಿತಿಗಳಿವೆ. ಶಾಸನ ಕೊರೆಯಬೇಕಾದ ಕಲ್ಲಿನ ವಿಸ್ತಾರ. ಶಾಸನ ರಚಿಸುವಾತನ ಕಾವ್ಯಶಕ್ತಿ ಇತ್ಯಾದಿಗಳು. ಇವುಗಳನ್ನು ಗಮನದಲ್ಲಿಟ್ಟುಕೊಂಡು ಅನೇಕ ಸಂದರ್ಭಗಳಲ್ಲಿ ಶಾಸನ ಬರೆದವರು ಸೃಷ್ಟ್ಯಾತ್ಮಕ ಕವಿಗಳಾಗಿರದಿದ್ದರೂ ಅಧಿಕಾರವರ್ಗಕ್ಕೆ ಸೇರಿದ್ದು ಶಾಸನಗಳ ಮೂಲಕ ಸಾಹಿತ್ಯದಲ್ಲಿ ನಡೆಸಿರುವ ಕೃಷಿಯನ್ನು ಪರಿಗಣನೆಗೆ ತಂದುಕೊಳ್ಳಬೇಕು. ಈ ಶಾಸನ ಪದ್ಯಗಳಲ್ಲಿನ ಸೊಬಗು, ವರ್ಣನಾ ವೈಖರಿ, ಶೈಲಿ ಮುಂತಾದ ಅಂಶಗಳನ್ನು ಗುರುತಿಸಬಹುದು. ರನ್ನ—ಜನ್ನರಂತಹ ಹಲವಾರು ಕವಿಗಳು ಸ್ವತಃ ಶಾಸನ ಕರ್ತೃಗಳೂ ಆಗಿದ್ದರೆಂಬುದನ್ನೂ ಮರೆಯಲಾಗದು. ಈ ಶಾಸನಗಳಲ್ಲಿ ಮಾನವ ಜೀವನದ ವಿವಿಧ ಮುಖಗಳ ಚಿತ್ರಣಗಳಿವೆ. ಧರ್ಮ, ದಾನ, ಶೀಲ, ಸತ್ಯ ಮುಂತಾದ ಗುಣಗಳ ಚಿಂತನವಿದೆ.

ಶ್ರವಣಬೆಳಗೊಳದಲ್ಲಿ ಕ್ರಿ. ಶ. ೭ನೆಯ ಶತಮಾನಕ್ಕೆ ಸೇರಿದ ಅನೇಕ ಸ್ಮಾರಕ ಶಾಸನಗಳಿವೆ. ಅವುಗಳಲ್ಲಿ ಹಲವಾರು ಪದ್ಯಭೂಯಿಷ್ಠ. ಅವುಗಳನ್ನು ರಚಿಸಿದವರು ಜೈನರು. ತಮ್ಮ ಧರ್ಮ ಪ್ರಚಾರಕ್ಕಾಗಿ ದೇಶಭಾಷೆಯನ್ನು ಅವರು ಬಳಸಿದರು. ಆದರೂ ಮೂಲತಃ ಪ್ರಾಕೃತ ಹಾಗೂ ಸಂಸ್ಕೃತ ಭಾಷೆಗಳಲ್ಲಿ ವಿಶೇಷ ಪರಿಣತಿ ಪಡೆದಿದ್ದ ಈ ಕವಿಗಳು ಕನ್ನಡದಲ್ಲಿ ಚುಟುಕಗಳಾಗುವ ಶಾಸನಗಳನ್ನು ಬರೆದಾಗ ತಮ್ಮ ವಿದ್ವತ್ತಿನ ಪ್ರೌಢಿಮೆಯನ್ನು ಸಹಜವಾಗಿಯೇ ತೋರಿಸಿಕೊಂಡಿದ್ದಾರೆ. ಆ ಭಾಷೆಗಳ ಪ್ರಭಾವ ಅಂತಹ ಶಾಸನಗಳ ಮೇಲೆ ವಿಶೇಷವಾಗಿವೆ.

ನಂದಿಸೇನ ಎಂಬ ಜೈನ ಯತಿ ಸನ್ಯಾಸನದಿಂದ ದೇಹವನ್ನು ಕಳಚಿದನೆನ್ನುವ ಸುಮಾರು ೭ನೆಯ ಶತಮಾನದ ಈ ಶಾಸನ ನೋಡಿ:

> ಸುರಚಾಪಂಬೋಲೆ ವಿದ್ಯುಲ್ಲತೆಗಳತೆಱವೊಲ್ಮಂಜುವೊಲ್ತೋಱಿ ಬೇಗಂ
> ಪಿರಿಗುಂ ಶ್ರೀರೂಪಲೀಲಾಧನವಿಭವಮಹಾರಾಶಿಗಳ್ನಿಲ್ಲವಾರ್ಗ್ಗಂ
> ಪರಮಾರ್ತ್ಥಂ ಮೆಚ್ಚಿ ನಾನೀಧರಣಿಯೊಳಿರವಾನೆನ್ದು ಸನ್ಯಾಸನಂ ಗೆ
> ಯ್ದುರುಸತ್ವನ್ ನಂದಿಸೇನ ಪ್ರವರಮುನಿವರನ್ ದೇವಲೋಕಕ್ಕೆ ಸನ್ದಾನ್

ರೂಪ, ಸುಖ, ಸಂಪತ್ತು ಮತ್ತು ವಿಭವಗಳು ಯಾರಲ್ಲೂ ಸ್ಥಿರವಾಗಿರತಕ್ಕವುಗಳಲ್ಲ. ಕಾಮನ ಬಿಲ್ಲಿನಂತೆ, ಮಿಂಚಿನಂತೆ, ಮಂಜಿನಂತೆ ಕಾಣಿಸಿಕೊಂಡು ಕರಗಿ ಹೋಗತಕ್ಕವುಗಳು. ಕ್ಷಣಿಕ. ಇದು ಪರಮಾರ್ಥ ವಿಚಾರವನ್ನರಿತ ನಂದಿಸೇನ ಮುನಿ ಸನ್ಯಾಸನಂಗೆಯ್ದು ಸುರಲೋಕಕ್ಕೆ ಹೋದನೆನ್ನುತ್ತದೆ ಈ ನಾಲ್ಕು ಸಾಲುಗಳ ಮಹಾಸ್ರಗ್ಧರೆ ವೃತ್ತದ ಪುಟ್ಟ ಶಾಸನ. ಹೇಳಬೇಕಾದುದನ್ನು ಸೂಕ್ಷ್ಮವಾಗಿ, ಆದರೆ ಖಚಿತವಾಗಿ ಈ ಪದ್ಯ ಹೇಳಿದೆ. ಇದರ ಉದ್ದೇಶ ಸಫಲವಾಗಿದೆ.

ಮಲಧಾರಿದೇವ ಎಂಬಾತ ಇನ್ನೊಬ್ಬ ಜೈನಯತಿ. ಮನ್ಮಥನನ್ನು ಧೈರ್ಯದಿಂದ ಎದುರಿಸಿ ಹೊಡೆದೋಡಿಸಿದ ಈತ ತನ್ನ ದೇಹದ ಮೇಲಿನ ಧೂಸರವನ್ನೂ ಕಳೆಯುತ್ತಿಲ್ಲ. ಸುತ್ತಲೂ ಹುತ್ತ ಬೆಳೆದಂತಿದ್ದ ಈತನ ದೇಹ ದೂರಕ್ಕೆ ಕಬ್ಬಿಣದ ಕವಚದಂತೆ ಕಾಣುತ್ತಿತ್ತು. ಈತನ ತಪಃಶಕ್ತಿಯಾದರೂ ಅಸಾಧ್ಯವಾದದ್ದು. ಸಾಟಿಯಿಲ್ಲದ್ದು. ಶಾಸನ ಬರೆದ ಹೆಗ್ಗಡೆ ಮಾದಿಮಯ್ಯ ಇಂತಹ ಮಲಧಾರಿ ದೇವನನ್ನು ಹೀಗೆ ವರ್ಣಿಸಿದ್ದಾನೆ:

ನುಡಿಗುಮದೊಮ್ಮೆ ಲೌಕಿಕದ ವಾರ್ತೆಯನಾಡದ, ಕೆತ್ತ ಬಾಗಿಲಂ
ತೆಱೆಯದ, ಭಾನುವಸ್ತಮಿತವಾಗಿರೆ ಪೋಗದ, ಮೆಯ್ಯನೊಮ್ಮೆಯುಂ
ತುಱಿಸದ, ಕುಕ್ಕುಟಾಸನಕೆ ಸೋಲದ, ಗಂಡವಿಮುಕ್ತ ವೃತ್ತಿಯುಂ
ಮಱೆಯದ ಘೋರದುಷ್ಕರ ತಪಶ್ಚರಿತಂ ಮಲಧಾರಿದೇವರ

ಇಂದಿನ ಯತಿಗಳು ಗಮನಿಸಬೇಕಾದ ಅಂಶಗಳಿವು. ಒಮ್ಮೆಯೂ ಲೌಕಿಕದ ಮಾತಿಲ್ಲ. ಮುಚ್ಚಿದ ಬಾಗಿಲನ್ನು ತೆರೆಯುವಂತಿಲ್ಲ. ಸೂರ್ಯಾಸ್ತವಾದ ಬಳಿಕ ಹೊರಗೆ ಹೋಗುವುದು ಸಲ್ಲ. ಒಮ್ಮೆಯೂ ದೇಹವನ್ನು ತುರಿಸಲೂ ಇಲ್ಲ!

ಶ್ರವಣಬೆಳಗೊಳದ ಗೊಮ್ಮಟೇಶ್ವರನ ವಿಗ್ರಹ ಪ್ರತಿಷ್ಠಾಪಿಸಿದಾತ ಗಂಗವಂಶದ ದೊರೆಯಾದ ರಾಚಮಲ್ಲನ ಮಂತ್ರಿಯಾಗಿದ್ದ ಚಾಮುಂಡರಾಯ. ಎಂತಹ ಭವ್ಯವಾದ ವಿಗ್ರಹ ಅದು! ಕವಿ ಬೊಪ್ಪಣ ಪಂಡಿತ ಅದನ್ನು ವಿವರಿಸುವುದೂ ಅಷ್ಟೇ ಭವ್ಯವಾಗಿದೆ. ಯಾವುದೇ ವಿಗ್ರಹ ಎತ್ತರವಾಗಿದ್ದರೂ ಸೌಂದರ್ಯವನ್ನು ಹೊಂದಿರದಿರಬಹುದು. ಭವ್ಯವಾಗಿ, ಸುಂದರವಾಗಿ ಇದ್ದರೂ ಅದರಲ್ಲಿ ಅತಿಶಯವಾದ ವೈಶಿಷ್ಟ್ಯದ ಶಕ್ತಿ ಸ್ಫುಟವಾಗದೇ ಇರಬಹುದು. ಆದರೆ ಗೊಮ್ಮಟನ ವಿಗ್ರಹ ಅಂತಲ್ಲ.

ಅತಿ ತುಂಗಾಕೃತಿಯಾದೊಡಾಗದದಱೊಳ್ ಸೌಂದರ್ಯಮೌನ್ನತ್ಯಮುಂ
ನುತಸೌಂದರ್ಯಮುಮಾಗೆ ಮತ್ತತಿಶಯಂ ತಾನಾಗದೌನ್ನತ್ಯಮುಂ
ನುತಸೌಂದರ್ಯಮುಮೂರ್ಜಿತಾತಿಶಯಮುಂ ತಾನಿಲ್ಲಿ ನಿಂದಿರ್ದುವೇಂ
ಕ್ಷಿತಿ ಸಂಪೂಜ್ಯಮೊ ಗೊಮ್ಮಟೇಶ್ವರ ಜಿನ ಶ್ರೀರೂಪಮಾತ್ಮೋಪಮಂ

ಇದರಲ್ಲಿ ಔನ್ನತ್ಯವಿದೆ. ಸೌಂದರ್ಯವಿದೆ. ಅತಿಶಯವೂ ಇದೆ. ಇದಕ್ಕೆ ಇದೇ ಸಾಟಿ—ಆತ್ಮೋಪಮ ಶ್ರೀರೂಪ ಎಂದಿದ್ದಾನೆ ಕವಿ. ಇದರ ಪ್ರತಿರೂಪವನ್ನು ಬರೆಯಲು ಮಯನಿಗೂ ಸಾಧ್ಯವಿಲ್ಲ. ನಾಕ ಲೋಕಾಧಿಪನಾದ ಇಂದ್ರನಿಗೂ ಇದರ ಪೂರ್ಣವಾದ ದೃಶ್ಯ ಲಭಿಸದು. ಫಣಿನಾಯಕನಿಗೆ ಇದನ್ನು ವರ್ಣಿಸಲು ಆಗದು. ದಕ್ಷಿಣ ಕುಕ್ಕುಟೇಶ್ವರನ ಈ ದೇಹ, ಬರೆಯಲ್, ನೋಡಲ್, ಬಣ್ಣಿಸಲೂ ನಿಸ್ಸಮಾಕೃತಿ.

ಪ್ರತಿಬಿಂಬಂ ಬರೆಯಲ್ ಮಯಂ ನೆಱೆಯ ನೋಡಲ್ ನಾಕಲೋಕಾಧಿಪಂ
ಸ್ತುತಿಗೆಯ್ಯಲ್ ಫಣಿನಾಯಕಂ ನೆಱೆಯನೆಂದನ್ಯರಾರಾಪ್ಪರಿಂ
ಪ್ರತಿಬಿಂಬಂ ಬರೆಯಲ್ ಸಮಸ್ತ ಕವಿನೋಡಲ್ ಬಣ್ಣಿಸಲ್ ನಿಸ್ಸಮಾ
ಕೃತಿಯಿಂ ದಕ್ಷಿಣ ಕುಕ್ಕುಟೇಶನ ತನುವಂ ಸಾಶ್ಚರ್ಯ ಸೌಂದರ್ಯಮಂ

ಕರ್ನಾಟಕ ಹಿಂದಿನಿಂದಲೂ ಸರ್ವಧರ್ಮಗಳಿಗೂ ಆಶ್ರಯವಿತ್ತಿದೆ. ಶಿವ, ಬ್ರಹ್ಮ, ಬುದ್ಧ, ಜಿನ, ವಿಷ್ಣು—ಎಲ್ಲರೂ ಸಮಾನ ದೇವತೆಗಳೇ. ತ್ರಿಮೂರ್ತಿಯ ಕಲ್ಪನೆ ಅತಿ ಪ್ರಾಚೀನಕಾಲದಿಂದ

ಬಂದಿದೆ. ಶಾಸನಗಳಲ್ಲಿ ಇಂತಹ ತ್ರಿಮೂರ್ತಿಗಳ ವರ್ಣನೆಯೂ ಬಂದಿದೆ. ಒಬ್ಬ ಶ್ರೀರಮಣೀ ರಮಣ —ವಿಷ್ಣು. ಇನ್ನೊಬ್ಬ ವಾಗ್ರಮಣೀ ರಮಣನೆನಿಸಿದ ಬ್ರಹ್ಮ. ಅದ್ರಿರಾಜ ಪುತ್ರಿ ರಮಣೀ ರಮಣನಾದ ಶಿವ. ನಾಗಾಯಿಗ್ರಾಮದ ಶಾಸನದಲ್ಲಿ ಇವರ ವರ್ಣನೆ ಇದೆ.

ಶ್ರೀರಮಣೀಮನೋರಮಣ ವಾಗ್ರಮಣೀ ರಮಣಾದ್ರಿರಾಜಪು
ತ್ರೀರಮಣೀಮನೋರಮಣ ರೂಪದೆ ಸತ್ವ ರಜಸ್ತಮಗುಣಾ
ಧಾರತೆಯಿಂ ಜಗತ್ ಸ್ಥಿತಿ ಸಮುದ್ಭವ ಸಂಹೃತಿ ಹೇತುವಾದ ನೀ
ರೇರುಹನಾಭ ನೀರಜ ಸಮುದ್ಭವ ಶಂಕರರೀಗಭೀಷ್ಟಮಂ ॥

ಒಬ್ಬೊಬ್ಬರೂ ಕ್ರಮವಾಗಿ ಸತ್ವ, ರಜ, ತಮೋಗುಣಗಳಿಗೆ ಆಧಾರಭೂತರು. ಜಗತ್ತಿನ ಸ್ಥಿತಿ, ಉದ್ಭವ ಹಾಗೂ ಲಯಗಳಿಗೆ ಕಾರಣರು. ಅಂತಹ ವಿಷ್ಣು, ಬ್ರಹ್ಮ, ಶಿವರು ನಮಗೆ ಇಷ್ಟಾರ್ಥ ಸಿದ್ಧಿಗಳನ್ನುಂಟು ಮಾಡಲಿ ಎಂದು ಪ್ರಾರ್ಥಿಸುತ್ತದೆ ಈ ಶಾಸನ ಪದ್ಯ.

ಇದೇ ಅಭಿಪ್ರಾಯವನ್ನು ಬೇರೊಂದು ವಿಧದಲ್ಲಿ ಶಿಕಾರಿಪುರದ ಶಾಸನ ಹೀಗೆ ತಿಳಿಸಿದೆ:

ಶ್ರೀವಾಣೀ ಗಿರಿಜಾಧಿಪರ್ ಗರುಡ ಹಂಸೋಕ್ಷಾಸನರ್ ವಾರ್ಧಿರಾ
ಜೀವಾದ್ರೀಂದ್ರ ನಿವಾಸಿಗಳ್ ಮಧುಪ ರಕ್ತಾಂಭೋರುಹೇಂದುಪ್ರಭರ್
ದೇವರ್ ಸತ್ವರಜಸ್ತಮೋಗುಣಯುತರ್ ದ್ವ್ಯಷ್ಟತ್ರಿನೇತ್ರೋತ್ಪಲರ್
ಗೋವಿಂದಾಬ್ಜಜ ಶಂಕರ ತ್ರಿಪುರುಷರ್ ಪಾಲಿಕ್ಕೆ ನಿಮ್ಮಂ ಚಿರಂ ॥

ಇವರು ಕ್ರಮವಾಗಿ ಗರುಡ, ಹಂಸ ಮತ್ತು ಉಕ್ಷ (ವೃಷಭ) ವಾಹನರು. ಸಮುದ್ರ, ಕಮಲ ಮತ್ತು ಬೆಟ್ಟಗಳಲ್ಲಿ ನೆಲಸಿದವರು. ಎರಡು, ಎಂಟು ಮತ್ತು ಮೂರು ಕಣ್ಣುಗಳುಳ್ಳವರು ಎಂದೂ ಈ ಶಾಸನದಲ್ಲಿ ಅವರನ್ನು ವರ್ಣಿಸಲಾಗಿದೆ.

ದೇಕಬ್ಬೆ ಎಂಬಾತ ಒಬ್ಬ ಮಹಾಸತಿ. ಕಾರಣಾಂತರಗಳಿಂದ ಗಂಡ ಮಡಿದಾಗ ತಾನು ಸತಿ ಹೋಗಲು ನಿರ್ಧರಿಸಿದಳು. ಆಕೆಯನ್ನು ಬಂಧು ಬಾಂಧವರು, ತಂದೆ-ತಾಯಿಗಳು ತಡೆಯಲು ಮುಂದಾದಾಗ ಆಕೆ ಹೇಳುತ್ತಾಳೆ:

ನುಗುನಾಡಧಿಪತಿ ರವಿಗನ ಮಗಳಾಗಿಯುಂ
ಅಂತೆ ನವಿಲೆನಾಡಧಿಪತಿಗಂ ನೆಗಳೆ ಸತಿಯಾಗಿ
ಬಾಟ್ಟುದು ಬಗೆದಪ್ಪೆನೆ ಕೊಟ್ಟ ಕೊಣ್ಡಮನೆಯುಸಮಳಿಯಲ್.

ಎಂದು ಹೇಳಿ ಅವರನ್ನು ಸಂತೈಸುತ್ತಾಳೆ. ಸ್ತ್ರೀಯರಿಗೆ ಎರಡು ಮನೆಗಳು ಕೊಟ್ಟಮನೆ, ಕೊಂಡಮನೆ.— ತವರು ಮನೆ ಹಾಗೂ ಗಂಡನ ಮನೆಗಳು. ಆ ಎರಡೂ ಮನೆಗಳ ಯಶಸ್ಸಿಗೆ ಕುಂದುಂಟಾಗದಂತೆ ನಡೆದುಕೊಳ್ಳುವುದು ಆಕೆಯ ಕರ್ತವ್ಯ. ಎಂತಲೇ 'ಬಗೆದಪ್ಪೆನೆ ಕೊಟ್ಟಕೊಣ್ಡಮನೆಯುಶಮಳಿಯಲ್' ಎಂಬ ಮಾತನ್ನು ಶಾಸನ ಕವಿ ಆಕೆಯ ಬಾಯಲ್ಲಿ ಆಡಿಸಿದ್ದಾನೆ.

ಬನವಾಸಿದೇಶ ಪಂಪ ಮುಂತಾದ ಕವಿಗಳಿಂದ ಬಣ್ಣಿಸಲ್ಪಟ್ಟಿದೆ. ಶಾಸನಗಳಲ್ಲೂ ಈ ಬನವಾಸಿ ದೇಶದ ವರ್ಣನೆಯಿದೆ. ಹೆಸರಾಂತ ಕವಿಗಳ ಪ್ರಭಾವ ಈ ಶಾಸನಕವಿಗಳ ಕೃತಿಗಳಲ್ಲೂ ಸ್ಪಷ್ಟವಾಗಿ ಮೂಡಿ ಬಂದಿದೆ ಎಂಬುದಕ್ಕೆ ೧೨ನೆಯ ಶತಮಾನದ ಈ ಶಾಸನ ಸಾಕ್ಷಿ.

ಬಳಸಿದ ನಂದನಾವಳಿಗಳಿಂ ಶುಕಸಂಕುಳದಿಂ ಪಿಕಾಳಿಯಿಂ
ಬೆಳದೆಜಗೆರ್ದ ಶಾಳಿವನದಿಂ ಭ್ರಮರಾಳಿಯಿ ನಿಕ್ಷುವಾಟಿಯಿಂ
ತಿಳಿಗೊಳದಿಂ ಲತಾಭವನದಿಂ ಕಮಳಾಕರದಿಂ ಕುಮುದ್ವತೀ
ಕುಳದಿನಿದೇಂ ಮನಂಗೊಳಿಪುದೋ ಸತಂ ಬನವಾಸಿ ಮಂಡಲಂ ॥

ಎಂಬೀ ಪದ್ಯದಲ್ಲಿ ಉತ್ತಮ ಕವಿತ್ವದ ಛಾಯೆಗಳನ್ನು ಕಾಣಬಹುದು.

ಬನವಾಸಿನಾಡಿನ ಒಂದು ಭಾಗ ನಾಗರಖಂಡ

ಧರಣೀಕಾಂತೆಯ ಮುಖದಂತಿರೆ ಬನವಾಸೆನಾಡು ರಂಜಿಸುವುದದಱೊಳ್ ನಾ
ಗರಖಂಡಂ ತಿಲಕದವೊಲ್ ಪರಿಶೋಭಿಪುದಾವಕಾಲಮುಂ ಸಿರಿಯೊದವಿಂ ॥

ಈ ನಾಗರ ಖಂಡದಲ್ಲಿ

ಊರೂರ್ ನಂದನದಿಂ ಲತಾಭವನದಿಂದೂರೂರ್ ತಟಾಕಂಗಳಿಂ
ದೂರೂರ್ ತಳ್ತಲೆವಳ್ಳಿಯಿಂ ಕೊಳಗಳಿಂದೂರೂರ್ ಫಲೋರ್ವೀಜದಿಂ
ದೂರೂರ್ ಕರ್ಬಿನ ತೋಟದಿಂ ಕಱವೆಯಿಂದೂರೂರ್ ಪ್ರಜಾವ್ರಾತದಿಂ
ದೂರೂರ್ ದೇವಗೃಹಂಗಳಿಂ ವಿಬುಧರಿಂದೂರೂರ್ ಕರಂ ರಂಜಿಕುಂ

ಕರ್ನಾಟಕದ ಇತಿಹಾಸದಲ್ಲಿ ಕಳಚುರಿ ಬಿಜ್ಜಳನಿಗೆ ವಿಶಿಷ್ಟವಾದ ಸ್ಥಾನವಿದೆ. ಒಂದು ರಾಜಮನೆತನದ ಆಳ್ವಿಕೆಗೆ ಈತ ಕಾರಣನಾದ. ಅದಕ್ಕೆ ಕಾರಣ ಈತನ ಮಹತ್ವಾಕಾಂಕ್ಷೆ. ಈತನ ಇತಿವೃತ್ತ ಶಾಸನಗಳಲ್ಲಿ ಆತ್ಮಕಥೆಯಂತೆ ಮೂಡಿಬಂದಿದೆ. ಒಂದೊಮ್ಮೆ ಈತನ ವಂಶಸ್ಥರು ಚಕ್ರವರ್ತಿಗಳಾಗಿದ್ದರು. ನಂತರ ಅವರ ಬಲ ಕುಗ್ಗಿ ಮಹಾಮಂಡಲೇಶ್ವರರಾದರು. ಆದರೆ ಶಕ್ತಿಸಂಪನ್ನನಾದ ತಾನು ಅದೇ ಸ್ಥಿತಿಯಲ್ಲಿ ಮುಂದುವರಿಯಬೇಕೇ?

ಕುಲಚುರಿವಂಶದಾದಿನೃಪರೆಲ್ಲರುಮುತ್ತಮಚಕ್ರವರ್ತಿಗಳ್
ಬಳಿಕ ಕೆಲರ್ ಸ್ವಭಾವಬಲವಿಲ್ಲದೆ ಮಂಡಳಿಕರ್ಕಳಾದರ್ ಅಂ
ಬಳಿಯುತನಾದೆನಿಂದೆನಗೆ ಮಂಡಳಿಕತ್ವಮಯುಕ್ತಮೆಂದು ದೋ
ರ್ಬಳದೊಳೆ ಚಕ್ರವರ್ತಿ ಸಕಳೋರ್ವಿಗನಾದನಶೇಷಮುಂ ಬಿಜ್ಜಳಂ ॥

ತನ್ನಲ್ಲಿ ಶೌರ್ಯ ಸಾಮರ್ಥ್ಯಗಳಿದ್ದಾಗ. ವೀರನಿಗೇ ಸಿರಿ ಎಂಬುದು ನಿಜವಾದರೆ. ತಾನು ಆ ಸಿರಿಗಾಗಿ ಯತ್ನಿಸುವುದು ತಪ್ಪಲ್ಲ.

ಪುಸಿಯಲ್ತು ವೀರಭೋಜ್ಯಾ
ವಸುಂಧರಾಯೆಂಬ ವಾಕ್ಯವೆನೆ ಧರೆಯಂ ಸಾ
ಧಿಸಿದಂ ತೆಂಕಬ್ಧಿಯೆ ಬಡ
ಗಸೀಮೆ ಚಾಳುಕ್ಯ ಕಟಕಮೆನೆ ಬಿಜ್ಜನೃಪಂ

ಈ ಘೋಷಣೆ ಮಾಡಿದ್ದ ಬಿಜ್ಜಳ ರಾಜ್ಯಕ್ರಾಂತಿಯುಂಟುಮಾಡಿದ.

ಕೊಡದಿನುದಯಿಸಿದಗಸ್ತ್ಯಂ
ಕಡಲಂ ಪೀರ್ದನ್ತೆ ಮಂಡಳೇಶ್ವರ ರಾಜ್ಯ
ಕ್ಕೊಡೆಯನೆನೆಪುಟ್ಟಿ ವೀರದಿ
ನೆಡೆಗೊಂಡಂ ಸಕಳಧಾತ್ರಿಯಂ ಬಿಜ್ಜನೃಪಂ

ಎಂದು ಶಾಸನ ಕವಿ ಆತನ ಉನ್ನತಿಯನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾನೆ. ಇಷ್ಟಕ್ಕೂ ಸಾಮ್ರಾಜ್ಯ ಪದವಿ ಬಿಜ್ಜಲನ ಹಣೆಯಲ್ಲಿ ಬರೆದಿತ್ತಂತೆ!

ನೊಸಲೊಳ್ ಸಾಮ್ರಾಜ್ಯಪಟ್ಟಂ ನೆಲಸಲ್ ಒಡನೆ ದೋರ್ಗ್ಗರ್ವದಿಂ ಮಸ್ತಯುಗ್ಗ
ಬ್ಬಸಮಂ ಮುಂಮಾಡಿದಂ ಮತ್ತಿರೆಯಿರೆ ಚಲದಿಂ ಮಂಡಳೇಶರ್ಗ್ಗೆ ವೇರೊಳ್

> ಬಿಸಿನೀರಂ ಪೊಯ್ಯುತಂತನ್ನಿರೆಯುರೆ ಬಳಿಯಂ ರಾಯರಂ ಕೂಡಿ ನಿರ್ವಾ
> ಣಿಸಿದಂ ಚಕ್ರಾಧಿನಾಥೋಜ್ವಳಮುಕುಟತಿಲಕಂ ಬಿಜ್ಜಲಕ್ಷೋಣಿರಾಜಂ

ಬಿಜ್ಜಳನ ಗುಣಾವಗುಣಗಳ ವರ್ಣನೆ ಇಲ್ಲಿ ಎದ್ದುಕಾಣುವಂತಿದೆ.

ಒಂದು ವಿಧದಲ್ಲಿ ಇದು ಸ್ವಾಮಿದ್ರೋಹ. ಆದರೆ ತನ್ನ ಸ್ವಾಮಿಗಾಗಿ ಜೀವವನ್ನೇ ಪಣವಾಗಿಟ್ಟ ಜನರು ಕರ್ನಾಟಕದಲ್ಲೂ ಸಹಸ್ರಾರು ಸಂಖ್ಯೆಗಳಲ್ಲಿ ಕಂಡು ಬಂದಿದ್ದಾರೆ. ಹೊಯ್ಸಳರ ಕಾಲದಲ್ಲಿ ಅವರು ತಮ್ಮ ಸ್ವಾಮಿ ಮರಣಹೊಂದಿದಾಗ ತಾವು ಬದುಕಿರುವುದು ನಾಚಿಕೆಗೇಡಿನ ವಿಷಯವೆಂದು ಭಾವಿಸಿ ತಮ್ಮ ಬಾಳನ್ನೇ ಮುಡಿಪಾಗಿಟ್ಟು ಗರುಡರೆನಿಸಿಕೊಂಡಿದ್ದಾರೆ. ಅಂತಹವರಲ್ಲಿ ಕುವರ ಲಕ್ಷ್ಮ ಒಬ್ಬ.

> ಗುರುವುಂ ದೈವಮುಮಾತ್ಪನೆ ಪರತ್ರೆಗಂ ತನಗಿಹತ್ರೆಗಂ ಪೆಱನೊರ್ವ್ವನಂ
> ಗುರುವಿಲ್ಲ ದೈವಮಿಲ್ಲೆನೆ ಧರೆಗೆಸದೊಂ ಕುವರ ಲಕ್ಷ್ಮ ದಂಡಾಧೀಶಂ ॥

ತನ್ನನ್ನು ಆಳಿದಾತ ಇಹಕ್ಕೂ ಪರಕ್ಕೂ ಒಬ್ಬನೇ ಆದ ವೀರಬಲ್ಲಾಳ. ಆತನೇ ಗುರು, ಆತನೇ ದೈವ. ಇವರಿರ್ವ್ವರ ನಡುವೆ

> ಆಳರಸರೆಂಬ ಬೇಧಮಿನಿತಪ್ಪೊಡಮಿಲ್ಲಿವರಲ್ಲಿ ತೇಜಮುಂ
> ಲೀಳೆಯು ರಾಜ್ಯ ಚಿಹ್ನಮುಮಮಿರ್ವ್ವರೊಳಂ ಸಮನೆಂದುವೆಂಬಿನಂ ॥

ಇಂತಹ ಲಕ್ಷ್ಮ

> ಧನಮುಂ ಪ್ರಾಣಮುಮೆಂಬಿವಂ ಕುವರ ಲಕ್ಷ್ಮಂ ವೀರ ಬಲ್ಲಾಳದೇ
> ವನ ದಾನೋನ್ನತಿಗಂ ಜಯೋನ್ನತಿಗಮಿರೊಯಲ್ ಪೂಣ್ದು ಮುಂದಿಟ್ಟು ರಾ
> ಮನಬೀಡಿಂಗಣುವಂ ಯಮಾತ್ಮಜನ ಬೀಡಿಂಗರ್ಜುನಂ ಚಂದ್ರಜೂ
> ಟನ ಬೀಡಿಂಗೆ ಕುಮಾರನಿರ್ಪ್ಪ ತೆಱದಿಂದಿರ್ಪ್ಪನೇಂ ಧೀರನೋ ॥

ರಾಮನಿಗೆ ಹನುಮಂತನಂತೆ, ಧರ್ಮರಾಜನಿಗೆ ಅರ್ಜುನನಂತೆ, ಶಿವನಿಗೆ ಕುಮಾರನಂತೆ ಬಲ್ಲಾಳ ದೇವನಿಗೆ ಲಕ್ಷ್ಮ ಬಂಟನಾಗಿದ್ದ ಎಂದೂ ವರ್ಣಿಸುತ್ತದೆ ಶಾಸನ.

ಹೊಯ್ಸಳ ನರಸಿಂಹನ ಕಾಲದಲ್ಲಿ ಚಟ್ಟ ಎಂಬಾತ ಚಟ್ಟೇಶ್ವರವೆಂಬ ದೇವಾಲಯುವನ್ನೂ ಕಟ್ಟಿಸಿದ. ಈತ

> ಪಲರಂ ರಕ್ಷಿಸಿ ಮತ್ತಂ
> ಪಲವಂ ನಡೆದೇಗುಲಂಗಳು ಮಾಡಿಸಿದಂ
> ನೆಲವೆಲ್ಲಮುಱಿಯೆ ಚಟ್ಟಂ
> ನೆಲೆದೇಗುಲಮುಮನಿದೊಂದನೊಲ್ದು ಎತ್ತಿಸಿದಂ ॥

ಈ ಪದ್ಯದಲ್ಲಿ ನುಸುಳಿರುವ ಪ್ರತಿಭೆಯನ್ನು ಗಮನಿಸಿ. ಈತ ನಡೆದೇಗುಲಗಳನ್ನು, ನೆಲದೇಗುಲಗಳನ್ನೂ ಕಟ್ಟಿಸಿದ ಎಂದಿದ್ದಾನೆ. ಹಲವಾರು ಜನರನ್ನು ರಕ್ಷಿಸಿ. ಅವರು ಮತ್ತೊಮ್ಮೆ ಬಾಳುವಂತೆ ಮಾಡಿದಾಗ ಅಲ್ಲಿ ಆತ ಅಸ್ತಿತ್ವಕ್ಕೆ ತಂದುದು ನಡೆದಾಡುವ ದೇಗುಲ. ಇದು ಪರೋಕ್ಷವಾಗಿ ಮಾಡಿದ ಹಿತ. ದೇವಾಲಯವೊಂದನ್ನು ಕಟ್ಟಿಸಿದಷ್ಟೇ ಪುಣ್ಯ ಕಾರ್ಯ. ಆದರೆ ಎಲ್ಲರಿಗೂ ತಿಳಿಯುವಂತೆ–ನೆಲನೆಲ್ಲ ಮುಚ್ಚಿಯೆ–ಮಾಡಿಸಿದುದು ಕಲ್ಲಿನಿಂದ ಕಟ್ಟಿಸಿದ. ಪ್ರತ್ಯಕ್ಷವಾಗಿ ಎಲ್ಲರಿಗೂ ಕಾಣಿಸುವ ನೆಲೆ ದೇಗುಲ—ಸ್ಥಾವರಮಂದಿರ.

ಹಿಂದಿನ ಕಾಲದಲ್ಲಿ ಧನವನ್ನು ನೆಲದಲ್ಲಿ ಹೂಳಿಡುತ್ತಿದ್ದರು. ಆದರೆ ನಾಕಿ ಎಂಬಾತ ಹಾಗೆ ಮಾಡಲಿಲ್ಲ. ಬದಲಾಗಿ ಧನವನ್ನು ದೇಗುಲ ಕಟ್ಟಿಸುವುದರ ಮೂಲಕ ಶಿಲೆಯಲ್ಲಿ ಬಚ್ಚಿಟ್ಟ. ಇದೂ

ಒಂದು ವಿಧದಲ್ಲಿ ವ್ಯಾಪಾರೀ ಮನೋಭಾವವಂತೆ. ಹೀಗೆ ಮಾಡಿ ಇಹಕ್ಕೂ, ಪರಕ್ಕೂ ಪುಣ್ಯಾರ್ಜನೆ ಮಾಡಿದ. ಇದು ಆತನಿಗೆ ಹೇರಳವಾದ ಲಾಭವನ್ನೂ ತಂದಿತು.

ನೆಲದೊಳ್ ಪೊಂಗಳನೇಕೆ ಪೂಳ್ವರೆನುತಂ ತಾಂ ಬಿಬ್ಬುರು ಮಾಡಿದಂ
ಫಲಮುತ್ತಿಷ್ಠ ವಿಧೇತಿ ನಾಕ ಪದಸಂಪೂರ್ಣಸ್ವದುಂ ಕೋರಮುಂ
ಗಳದೊಳ್ ತನ್ನಯ ಜನ್ಮಭೂಮಿಯುದಿತಾವಿಖ್ಯಾತಮಪ್ಪಂತಿರಲ್
ಕಿಳಿದೊಳ್ ಬಿಬ್ಬನು ಬಿಮ್ಮೇಶ್ವರಾಲಯ ಕೃತಿವ್ಯಾಪಾರಪಾರಾಯಣಂ ॥

ರಾಷ್ಟ್ರಕೂಟ ಇಂದ್ರರಾಜನನ್ನು ವರ್ಣಿಸಲು ಹೊರಟ ಶಾಸನಕವಿ ಸಮಕಾಲೀನ ರಾಜರ ಸ್ವಭಾವದ ಪ್ರಸ್ತಾಪ ಮಾಡಿದ್ದಾನೆ. ಇಲ್ಲಿ ವಿಡಂಬನೆಯಿದೆ. ನಮ್ಮ ಕಾಲದ 'ರಾಜಲಿಗೂ' ಇದು ಸಲ್ಲುತ್ತದೆ ಎಂದರೆ ತಪ್ಪಾಗಲಾರದು.

ಪುಸಿವುದೆ ತಕ್ಕು ಕೊಟ್ಟುದಿಡಿಕೊಳ್ವುದೇ ಮಂತ್ರಂ ಅನ್ಯನಾರಿಗಾ
ಟಿಸುವುದೆ ಚಿತ್ತಂ ಈಯದುದೇ ಚಿಹ್ನಂ ಮಾರುವನೆಯ್ದೆ ಕೂರ್ತರ್ಗೆ ಬಂ
ಚಿಸುವುದೆ ಕಲ್ತ ಕಲ್ಪೆ.

ಸುಳ್ಳು ಹೇಳುವುದು ಅವರ ಸಹಜಗುಣ. ಕೊಟ್ಟುದನ್ನು ಹಿಂದಕ್ಕೆ ಕಿತ್ತುಕೊಳ್ಳುವುದೇ ಅವರ ಮಂತ್ರಾಲೋಚನೆ. ಪರನಾರಿಯರನ್ನು ಬಯಸುವುದರಲ್ಲಿ ಅವರ ಮನಸ್ಸು. ದಾನಮಾಡದಿರುವುದೇ ಚಿಹ್ನೆ. ವಂಚಿಸುವುದೇ ಅವರು ಕಲಿತ ವಿದ್ಯೆ—ಇಂತಹ ಈಗಿನ ರಾಜರನ್ನು ಇಂದ್ರರಾಜನಿಗೆ ಹೇಗೆ ಹೋಲಿಸಲಿ—ಮತ್ತವರಂ ಪೇಗೊಣಂ ದದೆಂತು ಪೋಲಿಸುವುದೊ ದೇವಂ ಈಗಿನ ರಾಜತನೂಜರೊಳಿಂದ್ರರಾಜನಂ—ಎಂದು ಪ್ರಲಾಪಿಸಿದ್ದಾನೆ ಕವಿ!

ಶಾಸನಗಳು ದಾನದ ಪತ್ರಗಳು ಹೌದು. ಶಾಸನ ಬರೆದಾತ ಆತನ ಮೇಲಿನ ಅಧಿಕಾರಿಯ, ಅರಸನ ಸ್ತುತಿ ಮಾಡಬೇಕಿತ್ತು. ದಾನದ ವಿವರಗಳು, ಭೂಮಿಗಳ ಗಡಿಗಳು ಇವುಗಳ ವರ್ಣನೆ ಮಾಡಬೇಕಿತ್ತು. ಇಂತಹ ನಿರ್ಬಂಧಗಳ ನಡುವೆಯೂ ಶಾಸನಕವಿಗಳು ತಮಗೆ ಅನಿಸಿದ ಮಾತನ್ನು ಚಮತ್ಕಾರವಾಗಿ, ಕಲಾತ್ಮಕವಾಗಿ, ಸುಂದರವಾಗಿ ಸರಳವಾಗಿ ಶಾಸನಪದ್ಯಗಳಲ್ಲಿ ರೂಪಿಸಿದ್ದಾರೆ. ಮೇಲಿನವು ಕೆಲವು ಉದಾಹರಣೆಗಳಷ್ಟೆ!

ಮಾನವಿಕ ಕರ್ಣಾಟಕ

ವಿಷಯ ಸೂಚಿಕೆ

ಸಂಪುಟ ೧೦

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ

೧೯೭೯–೮೦

ವಿಷಯಸೂಚಿ

ಲೇಖನಗಳು

ಪುಸ್ತಕಲೋಕ

ಲೇಖಕ ಸೂಚಿ

ರಿಜಿಸ್ಟ್ರೇಷನ್ ಆಫ್ ನ್ಯೂಸ್ ಪೇಪರ್ಸ್ (ಸೆಂಟ್ರಲ್) ೧೯೫೬ ರ ೮ ನೇ ನಿಯಮದ ೪ ನೇ ಫಾರಂಗೆ ಸಂಬಂಧಿಸಿದಂತೆ "ಮಾನವಿಕ ಕರ್ಣಾಟಕ" ತ್ರೈಮಾಸಿಕ ಪತ್ರಿಕೆಯ ಸ್ವಾಮಿತ್ವ ಮತ್ತು ಇತರ ವಿಷಯಗಳ ಬಾಬ್ತು ವಿವರ:

೧. ಪ್ರಕಾಶನ ಸ್ಥಳ : ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–೫೭೦೦೦೬

೨. ನಿಯತಕಾಲಿಕತೆ : ತ್ರೈಮಾಸಿಕ ಪತ್ರಿಕೆ

೩. ಮುದ್ರಕರ ಹೆಸರು : ಎಚ್. ನರಸಣ್ಣ, ನಿರ್ದೇಶಕ, ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು–೫೭೦೦೦೬

ರಾಷ್ಟ್ರೀಯತೆ : ಭಾರತೀಯ

ವಿಳಾಸ : ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯ, ಮಾನಸ ಗಂಗೋತ್ರಿ, ಮೈಸೂರು–೫೭೦೦೦೬

೪. ಪ್ರಕಾಶಕರ ಹೆಸರು : ಕೆ. ಟಿ. ವೀರಪ್ಪ, ನಿರ್ದೇಶಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–೫೭೦೦೦೬

ರಾಷ್ಟ್ರೀಯತೆ : ಭಾರತೀಯ

ವಿಳಾಸ : ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–೫೭೦೦೦೬

೫. ಸಂಪಾದಕರ ಹೆಸರು : ಡಾ. ಬಾ. ರಾ. ಗೋಪಾಲ್
ಡಾ. ಸಿ. ಎಂ. ಮುನಿರಾಮಪ್ಪ

ರಾಷ್ಟ್ರೀಯತೆ : ಭಾರತೀಯ

ವಿಳಾಸ : ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೫೭೦೦೦೬

೬. ಪತ್ರಿಕಾ ಸ್ವಾಮಿತ್ವ ಮತ್ತು ವಿಳಾಸ ಬಂಡವಾಳದಲ್ಲಿ ನೂರಕ್ಕೆ ೧ಕ್ಕಿಂತ ಹೆಚ್ಚು ಹಣ ಹಾಕಿರುವವರ ವಿವರ : ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೫೭೦೦೦೬

ಕೆ. ಟಿ. ವೀರಪ್ಪನಾದ ನಾನು ಮೇಲಿನ ವಿವರಗಳಲ್ಲಿಯ ಎಲ್ಲ ವಿಷಯಗಳೂ ನನಗೆ ತಿಳಿದ ಮಟ್ಟಿಗೆ ಸತ್ಯವೆಂದು ಈ ಮೂಲಕ ಘೋಷಿಸುತ್ತೇನೆ.

ಮೈಸೂರು.

(ಸಹಿ) ಕೆ. ಟಿ. ವೀರಪ್ಪ
ನಿರ್ದೇಶಕ ಹಾಗೂ ಪ್ರಕಾಶಕ
ಪ್ರಸಾರಾಂಗ, ಮೈಸೂರು–೬

ಕೆ.ಸ. ೨೩೬೮೬ ಎಂಯುಪಿಎಂ—೫೦೦ + ೨೫ ಪ್ರತಿಗಳು—೧೬–೯–೮೨

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

★ ಮಾನವಿಕ ಕರ್ಣಾಟಕ
★ ವಿಜ್ಞಾನ ಕರ್ಣಾಟಕ
★ ಪ್ರಬುದ್ಧ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ: ನೂರು ರೂಪಾಯಿಗಳು)

(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬